ಬುಧವಾರ, ಜನವರಿ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 1 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮುಂದಿನ ದಿನಗಳಲ್ಲಿ ಮನುಷ್ಯನ ಒಡನಾಟಕ್ಕೆ ಮನುಷ್ಯರಿಗಿಂತಲೂ ರೋಬೊಗಳೇ ಹೆಚ್ಚು ಒದಗುತ್ತವೆ ಎನ್ನುವುದು ವಾಸ್ತವ



ಆಳ-ಅಗಲ ಹೆಜ್ಜೆ ನೋಟ; ಹೊಸ ಹುಡುಕಾಟ

'ಇನ್ಫೊಸಿಸ್' ಕ್ಯಾಂಪಸ್‌ನಲ್ಲಿ ಚಿರತೆ 5

ಹೊಸ ವರ್ಷದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,139	23,644	₹79,920 (ಬೆಂಗಳೂರು)	₹90,900 (ಬೆಂಗಳೂರು)	85.64

ಕಾಳಸಂತೆಯಲ್ಲಿ ಆಹಾರ ಪದಾರ್ಥಗಳ ಮಾರಾಟ ತಡೆಗೆ ಸರ್ಕಾರದಿಂದ ಕ್ರಮ

ಪಡಿತರ: ಒಟಿಪಿ ಸೌಲಭ್ಯ ಬಂದ್

• ಚಂದ್ರಹಾಸ ಹಿರೇಮಳಲಿ



ಬೆಂಗಳೂರು: ಮೊಬೈಲ್ ಬಳಕೆ ಜನಪ್ರಿಯವಾದ ನಂತರ ಪಡಿತರ ವಿತರಣೆಯಲ್ಲಿ ಉಪಯೋಗಿಸುತ್ತಿದ್ದ ಒಟಿಪಿ (ಒನ್ ಟೈಮ್ ಪಾಸ್‌ವರ್ಡ್) ಸೌಲಭ್ಯ ಸಂಪೂರ್ಣ ಸ್ಥಗಿತವಾಗಲಿದೆ. ನ್ಯಾಯಬೆಲೆ ಅಂಗಡಿಗಳೂ ಸೇರಿದಂತೆ ರಾಜ್ಯದ ಪಡಿತರ ವಿತರಣಾ ಕೇಂದ್ರಗಳಲ್ಲಿ ಒಟಿಪಿ ಸೌಲಭ್ಯ ಬಳಸಿಕೊಂಡು ಪಡಿತರ ಪಡೆಯಲು ಇನ್ನು ಮುಂದೆ ಅವಕಾಶ ಇಲ್ಲ.

ಪ್ರತಿ ತಿಂಗಳು ಗ್ರಾಹಕರು ನ್ಯಾಯಬೆಲೆ ಅಂಗಡಿಗಳಿಗೆ ತೆರಳಿ ಬಯೋಮೆಟ್ರಿಕ್ ನೀಡಿ ಪಡಿತರ ಪಡೆಯುತ್ತಿದ್ದಾರೆ. ಪಡಿತರ ಪಡೆಯಲು ಭೌತಿಕವಾಗಿ ಹಾಜರಾಗಲು ಸಾಧ್ಯವಾಗದೇ ಇರುವವರು ಆಧಾರ್‌ಗೆ ಜೋಡಣೆ ಮಾಡಲಾಗಿದ್ದ ತಮ್ಮ ಮೊಬೈಲ್ ನಂಬರ್‌ಗೆ ಬರುತ್ತಿದ್ದ ಒಟಿಪಿ ನೀಡಿ, ಕುಟುಂಬದ ಸದಸ್ಯರು ಅಥವಾ ತಾವು ಸೂಚಿಸಿದವರ ಬಳಿ ಪಡಿತರ ಪದಾರ್ಥಗಳನ್ನು ತರಿಸಿಕೊಳ್ಳಬಹುದಿತ್ತು. ಹಲವು ದಶಕಗಳಿಂದ ಈ ಪದ್ಧತಿಯನ್ನು ಅನುಸರಿಸಿಕೊಂಡು ಬರಲಾಗುತ್ತಿತ್ತು.

ಉಚಿತವಾಗಿ ವಿತರಿಸುವ ಪಡಿತರ ಪದಾರ್ಥಗಳನ್ನು ಗ್ರಾಹಕರ ಹೆಸರಲ್ಲಿ ಮಧ್ಯವರ್ತಿಗಳು ಸಂಗ್ರಹಿಸುವುದನ್ನು ತಡೆಯಲು, ಅರ್ಹ ಫಲಾನುಭವಿಗಳಿಗೇ ದೊರೆಯುವಂತೆ ಮಾಡಲು ಹಾಗೂ ಕಾಳಸಂತೆಯಲ್ಲಿ ಮಾರಾಟ ಮಾಡುವ ದಂಧೆಗೆ ಸಂಪೂರ್ಣ ಕಡಿವಾಣ ಹಾಕಲು ಹಲವು ಸುಧಾರಣಾ ಕ್ರಮಗಳನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಕೈಗೊಂಡಿತ್ತು. ಅದರ ಬೆನ್ನಲ್ಲೇ, ಒಟಿಪಿ ಸೌಲಭ್ಯಕ್ಕೂ ಕಡಿವಾಣ ಹಾಕಿದೆ.

ಹಲವು ಪಡಿತರದಾರರು ಕೂಲಿ ಮತ್ತಿತರ ಕೆಲಸಗಳಿಗೆ ದೂರದ ಊರುಗಳಿಗೆ ತೆರಳಿದಾಗ, ತಮ್ಮ ಸಂಬಂಧಿಕರು, ಪರಿಚಯಸ್ಥರು, ನೆರೆಹೊರೆಯವರನ್ನು ಪಡಿತರ ವಿತರಣಾ ಕೇಂದ್ರಗಳಿಗೆ ಕಳುಹಿಸಿ, ಒಟಿಪಿ ನೀಡಿ ಪಡಿತರ ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದರು. ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದ ಮಧ್ಯವರ್ತಿಗಳು ಆಯಾ ತಿಂಗಳು ಪಡಿತರ ಪಡೆಯದವರ ಮಾಹಿತಿ ಸಂಗ್ರಹಿಸಿ, ಅವರಿಗೆ ಸ್ವಲ್ಪ ಹಣ ನೀಡುವ ಆಮಿಷವೊಡ್ಡಿ, ಅವರಿಂದ ಒಟಿಪಿ ಪಡೆದು ಪಡಿತರ ಪಡೆಯುತ್ತಿದ್ದರು. ಹೀಗೆ ಸಂಗ್ರಹಿಸಿದ ಪಡಿತರ ಪದಾರ್ಥಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು. ಇಂತಹ ದೊಡ್ಡ ಜಾಲಗಳು ಸಕ್ರಿಯವಾಗಿರುವುದನ್ನು ಇಲಾಖೆ ಅಧಿಕಾರಿಗಳು ಅಕ್ಕಿಗಿರಣಿಗಳು, ಸಗಟು ಮಾರಾಟ ಕೇಂದ್ರಗಳ ಮೇಲೆ ನಡೆಸಿದ ದಾಳಿಗಳಲ್ಲಿ ಪತ್ತೆ ಮಾಡಿದ್ದರು.

ವೃದ್ಧರಿಗೆ, ಆರೋಗ್ಯ ಸಮಸ್ಯೆ ಇರುವವರಿಗೆ ತೊಂದರೆ: 'ಸರ್ಕಾರ 70 ವರ್ಷ ದಾಟಿದವರ ಮನೆ ಬಾಗಿಲಿಗೆ ಪಡಿತರ ವಿತರಿಸುವ ಯೋಜನೆ ರೂಪಿಸಿದೆ. ಅಂಥವರ ಮನೆ ಬಾಗಿಲಿಗೆ ಬಯೋಮೆಟ್ರಿಕ್ ಅಥವಾ ಐರಿಸ್ ಯಂತ್ರ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಬಹುತೇಕ ಹಳ್ಳಿಗಳಲ್ಲಿ ಮಕ್ಕಳು ದುಡಿಯಲು ಪಟ್ಟಣಗಳಿಗೆ ತೆರಳಿರುತ್ತಾರೆ. ಅಂತಹ ಕುಟುಂಬಗಳ ಯಜಮಾನರು ಆರೋಗ್ಯ ಸಮಸ್ಯೆಗೆ ತುತ್ತಾದಾಗ ನೆರೆಹೊರೆಯವರ ಬಳಿ ಪಡಿತರ ತರಿಸಿಕೊಳ್ಳುತ್ತಾರೆ. ಒಟಿಪಿ ಸೌಲಭ್ಯ ಬಳಸಿಕೊಂಡು ಅಂಥವರಿಗೆ ಅನುಕೂಲ ಮಾಡಿಕೊಡಲಾಗುತ್ತದೆ. ಪಡಿತರ ಅಕ್ರಮ ಮಾರಾಟ ತಡೆಗೆ ಅಧಿಕಾರಿಗಳು ಪರ್ಯಾಯ ಮಾರ್ಗ ಹುಡುಕಬೇಕು. ಸೌಲಭ್ಯಕ್ಕೆ ಕತ್ತರಿ ಹಾಕಬಾರದು' ಎನ್ನುತ್ತಾರೆ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಸಂಘದ ಅಧ್ಯಕ್ಷ ಟಿ. ಕೃಷ್ಣಪ್ಪ.

'ಐರಿಸ್' ಯಂತ್ರ; ಶೇ 20 ದಾಟದ ಪ್ರಗತಿ

ಗ್ರಾಮೀಣ ಪ್ರದೇಶದಲ್ಲಿನ ಸರ್ವರ್ ಸಮಸ್ಯೆ, ಬೆರಳಚ್ಚುಗಳ ಪುನರಾವರ್ತನೆ, ಆಧಾರ್‌ಗೆ ಜೋಡಿಸಿದ್ದ ತಪ್ಪು ಮೊಬೈಲ್ ಸಂಖ್ಯೆಗಳಿಂದಾಗಿ ಒಟಿಪಿ ಪಡೆಯಲು ಪರದಾಟ ಮತ್ತಿತರ ಕಾರಣಗಳಿಂದ ನೈಜ ಫಲಾನುಭವಿಗಳಿಗೆ ಪಡಿತರ ನೀಡಲು ಹಲವು ತೊಡಕುಗಳಿದ್ದವು.

ಕಳೆದ ವರ್ಷ ಒಟಿಪಿ ದೊರೆಯದೇ ರಾಜ್ಯದಲ್ಲಿ ಪ್ರತಿ ತಿಂಗಳು 25 ಲಕ್ಷಕ್ಕೂ ಹೆಚ್ಚು ಗ್ರಾಹಕರಿಗೆ ಪಡಿತರ ವಿತರಣೆಯಲ್ಲಿ ವ್ಯತ್ಯಯವಾಗಿತ್ತು. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಈ ಸಮಸ್ಯೆ ಇತ್ತು. ಅದಕ್ಕಾಗಿ ಇದೇ ಏಪ್ರಿಲ್‌ನಿಂದ ಅತ್ಯಾಧುನಿಕ ಐರಿಸ್ ಸ್ಕ್ಯಾನ್ ಸಾಧನಗಳ ಅಳವಡಿಕೆ ಕಡ್ಡಾಯಗೊಳಿಸಲಾಗಿತ್ತು. ಆದರೆ, ಇದುವರೆಗೂ ಸಾಧನ ಅಳವಡಿಸಿಕೊಂಡ ಪಡಿತರ ವಿತರಣಾ ಕೇಂದ್ರಗಳ ಸಂಖ್ಯೆ ಶೇ 20ರಷ್ಟು ದಾಟಿಲ್ಲ.

> ಒಟಿಪಿ ಸೌಲಭ್ಯ ಉಳಿಸಿಕೊಳ್ಳುವಂತೆ ಆಹಾರ ಸಚಿವರಿಗೆ ಮನವಿ ಮಾಡಿದ್ದೇವೆ. ಸೌಲಭ್ಯ ಸ್ಥಗಿತದಿಂದ ಮನೆ ಬಾಗಿಲಿಗೆ ಪಡಿತರ ಯೋಜನೆಗೆ ತೊಡಕಾಗುತ್ತದೆ
> **ಟಿ.ಕೃಷ್ಣಪ್ಪ,** ಅಧ್ಯಕ್ಷ, ನ್ಯಾಯಬೆಲೆ ಅಂಗಡಿಗಳ ಮಾಲೀಕರ ಸಂಘ

ಅಂಕಿ ಅಂಶಗಳು

1.16 ಕೋಟಿ ಪಡಿತರ ಕುಟುಂಬಗಳು

4.42 ಕೋಟಿ ಫಲಾನುಭವಿಗಳು

2.29 ಲಕ್ಷ ಟನ್ ಪ್ರತಿ ತಿಂಗಳು ಅಗತ್ಯವಿರುವ ಅಕ್ಕಿ

₹841.06 ಕೋಟಿ ತಲಾ ಐದು ಕೆ.ಜಿ. ಅಕ್ಕಿಗೆ ಪ್ರತಿ ತಿಂಗಳ ವೆಚ್ಚ



2025ಕ್ಕೆ ಸ್ವಾಗತ... ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ಮಂಗಳವಾರ ಹೊಸ ವರ್ಷಾಚರಣೆಯ ಸಂಭ್ರಮಕ್ಕಾಗಿ ನೆರೆದಿದ್ದ ಜನಸ್ತೋಮ ಚಿತ್ರ: ಎಚ್. ಜಿ. ಪ್ರಶಾಂತ್

ಸಾರಿಗೆ ಸಂಸ್ಥೆಗಳಿಗೆ ₹2,000 ಕೋಟಿ ಸಾಲಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳು ಬಾಕಿ ಉಳಿಸಿಕೊಂಡಿರುವ ಡೀಸೆಲ್ ಶುಲ್ಕ, ಭವಿಷ್ಯ ನಿಧಿ ವಂತಿಗೆ ಪಾವತಿಸಲು ರಾಜ್ಯ ಸರ್ಕಾರವು ₹2,000 ಕೋಟಿ ಸಾಲದ ಮೊರೆ ಹೋಗುತ್ತಿದೆ. ಸಂಸ್ಥೆಗಳು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ತೆಗೆದುಕೊಳ್ಳಲು ಸರ್ಕಾರ ಅನುಮತಿ ನೀಡಿದೆ.

ಸಾರಿಗೆ ಸಂಸ್ಥೆಗಳು ನಷ್ಟದಲ್ಲಿವೆ ಎಂಬ ವಿರೋಧ ಪಕ್ಷಗಳ ಆರೋಪವನ್ನು ನಿರಾಕರಿಸಿರುವ ರಾಜ್ಯ ಸರ್ಕಾರವು, ಸಂಸ್ಥೆಗಳ ವಿವಿಧ ಹೊಣೆಗಾರಿಕೆಗಳನ್ನು ನಿಭಾಯಿಸಲು ಸಾಲದ ಮೊರೆ ಹೋಗಿದೆ. ಈ ಸಂಬಂಧ ಮಂಗಳವಾರ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬಿಎಂಟಿಸಿ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳು ಒಟ್ಟು ₹6,330.25 ಕೋಟಿ ಬಾಕಿ ಉಳಿಸಿಕೊಂಡಿವೆ.

'ಕಾರ್ಯಾಚರಣೆಯ ಅತ್ಯುತ್ತಮ ನಿರ್ವಹಣೆ ಮತ್ತು ಶಕ್ತಿ ಯೋಜನೆಯಿಂದ ಸಂಸ್ಥೆಗಳ ಆದಾಯ ಗಳಿಕೆ ಏರಿಕೆಯಾಗಿದೆ. ಆದರೆ 2012ರಿಂದ ವಿದ್ಯಾರ್ಥಿ ಬಸ್ ಪಾಸ್ ದರ (ಬಿಎಂಟಿಸಿಯಲ್ಲಿ 2015ರಿಂದ) ಪರಿಷ್ಕರಣೆ ಮಾಡದೇ ಇರುವುದು, ಡೀಸೆಲ್ ವೆಚ್ಚದಲ್ಲಿ ಆಗಿರುವ ಏರಿಕೆ ಮತ್ತು 2023ರ ಮಾರ್ಚ್ 1ರಿಂದ ವೇತನ ಪರಿಷ್ಕರಣೆಯಿಂದ ಸಂಸ್ಥೆಗಳು ಹೆಚ್ಚುವರಿ ಹೊರೆ ಅನುಭವಿಸುತ್ತಿವೆ. ನಗದು ಒಳಹರಿವು ಉತ್ತಮವಾಗಿ ಇಲ್ಲದೇ ಇರುವ, ಸಂಸ್ಥೆಗಳು ಈ ವೆಚ್ಚಗಳನ್ನು ಭರಿಸಲು ಸಾಧ್ಯವಾಗುತ್ತಿಲ್ಲ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

9ನೇ ಪುಟ ನೋಡಿ

ಕ್ಷಮೆಯಾಚಿಸಿದ ಮಣಿಪುರ ಸಿ.ಎಂ



ಇಂಫಾಲ್(ಪಿಟಿಐ): ರಾಜ್ಯದಲ್ಲಿ ಕಂಡುಬಂದ ಜನಾಂಗೀಯ ಸಂಘರ್ಷ ಕುರಿತಂತೆ ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಮಂಗಳವಾರ ಕ್ಷಮೆ ಕೋರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಏನು ಸಂಭವಿಸಿದೆಯೋ ಅದಕ್ಕಾಗಿ ನಾನು ಜನರ ಬಳಿ ಕ್ಷಮೆ ಕೋರಲು ಬಯಸುತ್ತೇನೆ. ಹಲವರು ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡಿದ್ದರೆ, ನೂರಾರು ಜನರು ತಮ್ಮ ಮನೆಗಳನ್ನು ತೊರೆಯಬೇಕಾಯಿತು' ಎಂದು ಹೇಳಿದ್ದಾರೆ.

'ಎಲ್ಲ ಸಮುದಾಯಗಳು ಈ ಹಿಂದಿನ ತಪ್ಪುಗಳನ್ನು ಮರೆಯಬೇಕು ಹಾಗೂ ಕ್ಷಮಿಸಬೇಕು. ಶಾಂತ ಹಾಗೂ ಸಮೃದ್ಧ ಮಣಿಪುರದಲ್ಲಿ ಎಲ್ಲರೂ ಒಟ್ಟಾಗಿ ಬಾಳಬೇಕು' ಎಂದು ಮನವಿ ಮಾಡಿದ್ದಾರೆ.

> **ರಾಜ್ಯದಲ್ಲಿ ಏನು ಘಟಿಸಿದೆಯೋ ಅದಕ್ಕಾಗಿ ನಾನು ಕ್ಷಮೆ ಕೇಳುವೆ ಹಾಗೂ ವಿಷಾದಿಸುವೆ.**
> **ಎನ್.ಬಿರೇನ್ ಸಿಂಗ್** ಮುಖ್ಯಮಂತ್ರಿ

9ನೇ ಪುಟ ನೋಡಿ

ಮೋದಿ ಈಗಲಾದರೂ ಕ್ಷಮೆ ಕೇಳಲಿ: ಕಾಂಗ್ರೆಸ್

ನವದೆಹಲಿ (ಪಿಟಿಐ): 'ಪ್ರಧಾನಿ ಮೋದಿ ಅವರು ಮಣಿಪುರಕ್ಕೆ ಭೇಟಿ ನೀಡದೆ, ಉದ್ದೇಶಪೂರ್ವಕವಾಗಿಯೇ ಕಡೆಗಣಿಸುತ್ತಾ ಬಂದಿದ್ದಾರೆ. ಅವರು ಹಲವುಬಾರಿ ರಾಷ್ಟ್ರ ಹಾಗೂ ವಿದೇಶ ಪ್ರವಾಸ ಮಾಡುತ್ತಿದ್ದರೂ, ಸಂಘರ್ಷ ಪೀಡಿತ ಮಣಿಪುರಕ್ಕೆ 2023ರ ಮೇ 4ರಿಂದ ಒಮ್ಮೆಯೂ ಭೇಟಿ ನೀಡಿಲ್ಲ. ಕನಿಷ್ಠ ಪಕ್ಷ ಈಗಲಾದರೂ ಮಣಿಪುರಕ್ಕೆ ತೆರಳಿ ಜನರ ಕ್ಷಮೆ ಕೇಳಬಾರದೇ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

ದೃಷ್ಟಿದೋಷವುಳ್ಳ ಪ್ರಯಾಣಿಕರಿಗೆ ಆಡಿಯೊ ವ್ಯವಸ್ಥೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ದೃಷ್ಟಿದೋಷ ಹೊಂದಿದವರ ಪ್ರಯಾಣದ ಅನುಕೂಲಕ್ಕಾಗಿ ರಾಜ್ಯದ ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಮುಂದಿನ ಎರಡು ವರ್ಷಗಳಲ್ಲಿ ಬಸ್ ಸಂಚಾರ ವಿವರಗಳ ಧ್ವನಿವರ್ಧಕ ಪ್ರಕಟಣೆಯ ಆಡಿಯೊ ವ್ಯವಸ್ಥೆ ಕಲ್ಪಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ದೃಷ್ಟಿದೋಷ ಹೊಂದಿರುವ ಹೈಕೋರ್ಟ್ ವಕೀಲ ಎನ್. ಶ್ರೇಯಸ್ ಮತ್ತು 'ಶ್ರೇಯಸ್ ಗ್ಲೋಬಲ್ ಟ್ರಸ್ಟ್ ಫಾರ್ ಸೋಷಿಯಲ್ ಕಾಸ್'ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎನ್.ಕೃತಿಕಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ.

5ನೇ ಪುಟ ನೋಡಿ

ರಾಜ್ಯದಾದ್ಯಂತ ವಿಸ್ತರಿಸಿಕೊಂಡ ಮಾರಾಟ, ಪೂರೈಕೆ ಜಾಲ

ಕಾರ್ಯಪಡೆಗೆ ಬಗ್ಗದ ಡ್ರಗ್ಸ್ ದಂಧೆ

• ಆದಿತ್ಯ ಕೆ.ಎ.

ಬೆಂಗಳೂರು: ಮಾದಕ ವಸ್ತುಗಳ (ಡ್ರಗ್ಸ್) ಮಾರಾಟ, ಪೂರೈಕೆ ಜಾಲಕ್ಕೆ ಸಂಪೂರ್ಣ ಕಡಿವಾಣ ಹಾಕಲು ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಏಳು ಸಚಿವರ ಕಾರ್ಯಪಡೆ ರಚಿಸಿ ಮೂರು ತಿಂಗಳು ಕಳೆದಿದ್ದರೂ ರಾಜ್ಯದಲ್ಲಿ ನೈಸರ್ಗಿಕ ಹಾಗೂ ಸಿಂಥೆಟಿಕ್ ಡ್ರಗ್ಸ್ ಮಾರಾಟವು ನಿರಾತಂಕವಾಗಿ ನಡೆಯುತ್ತಲೇ ಇದೆ.

ಅಫೀಮು, ಗಾಂಜಾ, ಮಾರ್ಫಿನ್, ಹೆರಾಯಿನ್, ಎಂಡಿಎಂಎ, ಎಲ್‌ಎಸ್‌ಡಿ, ಕೊಕೇನ್‌ನಂತಹ ಡ್ರಗ್ಸ್‌ಗಳ ಮಾರಾಟ ಹಾಗೂ ಪೂರೈಕೆಗೆ ಕಡಿವಾಣ ಬಿದ್ದಿಲ್ಲ. ಡ್ರಗ್ಸ್ ಪೆಡ್ಲರ್‌ಗಳು (ಪೂರೈಕೆದಾರರು) ಸುಲಭವಾಗಿ ಹಣ ಗಳಿಸಲು ಕರ್ನಾಟಕ ರಾಜ್ಯವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಆರೋಪವಿದೆ. ವರ್ಷಾಂತ್ಯದಲ್ಲಿ ರಾಜ್ಯದ ಪೊಲೀಸರು ನಡೆಸಿದ ದಾಳಿ ವೇಳೆ ಅಪಾರ ಪ್ರಮಾಣದ ಡ್ರಗ್ಸ್ ಜಪ್ತಿ ಆಗಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಮಾದಕವಸ್ತುಗಳ ಪೂರೈಕೆ ಮತ್ತು ಮಾರಾಟದ ಆರೋಪಗಳ ಅಡಿಯಲ್ಲಿ 2024ರಲ್ಲಿ ವಿವಿಧ ಠಾಣೆಗಳಲ್ಲಿ 3,500ಕ್ಕೂ ಹೆಚ್ಚು ಎಫ್‌ಐಆರ್‌ಗಳು ದಾಖಲಾಗಿವೆ. 2,417 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕಳೆದ ಮೂರು ತಿಂಗಳಲ್ಲೇ 527 ಪ್ರಕರಣಗಳು ದಾಖಲಾಗಿವೆ.

ಕಳೆದ ವರ್ಷ (2024) ಒಟ್ಟು 3,081 ಕೆ.ಜಿ ಮಾದಕ ವಸ್ತು ಜಪ್ತಿ ಮಾಡಲಾಗಿದೆ. ಡ್ರಗ್ಸ್ ಸೇವಿಸಿದ್ದ 1,392 ಮಂದಿ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ. ಮಾದಕ ದ್ರವ್ಯ ನಿಗ್ರಹ ಕಾಯ್ದೆ ಅಡಿ (ಎನ್‌ಡಿಪಿಎಸ್) ಮಂಗಳೂರು ನಗರದಲ್ಲೇ ಅತಿಹೆಚ್ಚು ಪ್ರಕರಣಗಳು ದಾಖಲಾಗಿವೆ. ಶಿವಮೊಗ್ಗ ಜಿಲ್ಲೆ ನಂತರದ ಸ್ಥಾನದಲ್ಲಿದೆ.

ಮಾದಕ ವಸ್ತು ಬಳಕೆಯನ್ನು ನಿಯಂತ್ರಿಸಲು ಪೊಲೀಸ್ ಇಲಾಖೆ, ಕಳೆದ ತಿಂಗಳು 'ನಶೆ ಮುಕ್ತ ಕರ್ನಾಟಕ' ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿತ್ತು. ಆ್ಯಪ್ ಮೂಲಕ ಸಾರ್ವಜನಿಕರೇ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದಾರೆ. ಇದರಿಂದ ಗಾಂಜಾ ಬೆಳೆಯುತ್ತಿರುವ ಬೆಳೆಗಾರರು, ಮಾರಾಟಗಾರರು, ಗ್ರಾಹಕರು, ಸಿಂಥೆಟಿಕ್ ಡ್ರಗ್ಸ್ ತಯಾರಿಸುವ ಪ್ರಯೋಗಾಲಯಗಳು, ಸಂಗ್ರಹಣೆ ಮಾಡುತ್ತಿರುವ ಸಂಗ್ರಹಕಾರರು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆ ಆಗುತ್ತಿದ್ದಾರೆ.



ಆರೋಪಿಗಳಿಂದ ಜಪ್ತಿ ಮಾಡಲಾದ ಡ್ರಗ್ಸ್



> ಒಂದೂವರೆ ತಿಂಗಳಿಂದ ಕಾರ್ಯಾಚರಣೆ ಚುರುಕು ಮಾಡಿದ್ದೇವೆ. ಹೊಸ ವರ್ಷಾಚರಣೆ ಸಂದರ್ಭದಲ್ಲಿ ಡ್ರಗ್ಸ್ ಪೂರೈಕೆ ಹೆಚ್ಚಾಗಿದ್ದು, ಕಟ್ಟೆಚ್ಚರ ವಹಿಸಲಾಗಿದೆ
> **ಜಿ.ಪರಮೇಶ್ವರ,** ಗೃಹ ಸಚಿವ

9ನೇ ಪುಟ ನೋಡಿ

400 ಔಷಧಗಳ ಗುಣಮಟ್ಟ ಕಳಪೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ಆಸ್ಪತ್ರೆಗಳಲ್ಲಿ ಬಳಸಲಾಗುತ್ತಿರುವ 400ಕ್ಕೂ ಅಧಿಕ ಔಷಧಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎನ್ನುವುದು ರಾಜ್ಯ ಔಷಧ ನಿಯಂತ್ರಣ ಇಲಾಖೆ ನಡೆಸಿದ ಪ್ರಯೋಗಾಲಯ ಪರೀಕ್ಷೆಗಳಿಂದದೃಢಪಟ್ಟಿದೆ.



ಬಳ್ಳಾರಿಯಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯರ ಸರಣಿ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ 'ಪಶ್ಚಿಮ್ ಬಂಗಾ ಫಾರ್ಮಾಸ್ಯುಟಿಕಲ್ಸ್' ಕಂಪನಿ ಪೂರೈಸಿದ್ದ 'ರಿಂಗರ್ ಲ್ಯಾಕ್ಟೇಟ್' ಐವಿ ದ್ರಾವಣವನ್ನು ರಾಜ್ಯದಲ್ಲಿ ನಿಷೇಧ ಮಾಡಲಾಗಿದೆ. ರಾಜ್ಯದ ಔಷಧ ನಿಯಂತ್ರಕರು ನಡೆಸಿದ ಪರೀಕ್ಷೆಯಲ್ಲಿ ಈ ದ್ರಾವಣದ 22 ಬ್ಯಾಚ್‌ಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎಂಬ ವರದಿ ಬಂದಿತ್ತು. ಇದರಿಂದಾಗಿ ಕಂಪನಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯದ ಒಂಬತ್ತು ಜಿಲ್ಲಾ ವೃತ್ತಗಳಲ್ಲಿ ಹೆಚ್ಚುವರಿ ಔಷಧ ನಿಯಂತ್ರಕರು ದೂರು ದಾಖಲಿಸಿಕೊಂಡಿದ್ದಾರೆ.

10ನೇ ಪುಟ ನೋಡಿ

> ಮಾರುಕಟ್ಟೆಯಲ್ಲಿ ಲಭ್ಯವಿರುವ ಔಷಧಗಳ ಗುಣಮಟ್ಟದ ಬಗ್ಗೆ ನಿಗಾ ವಹಿಸಲಾಗಿದೆ. ಆಸ್ಪತ್ರೆಗಳಲ್ಲಿ ಬಳಸುವ ಔಷಧಗಳ ಮಾದರಿಗಳನ್ನೂ ಪರೀಕ್ಷಿಸಿ, ಗುಣಮಟ್ಟ ಖಚಿತಪಡಿಸಿಕೊಳ್ಳಲಾಗುತ್ತಿದೆ
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ



ಪರವಾನಗಿ ಇಲ್ಲದೆ ಕಾರ್ಯನಿರ್ವಹಣೆ

ರಾಜ್ಯದಲ್ಲಿ 37 ಸಾವಿರಕ್ಕೂ ಅಧಿಕ ಖಾಸಗಿ ಔಷಧ ಮಳಿಗೆಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದ ಖಾಸಗಿ ಔಷಧ ಮಳಿಗೆಗಳನ್ನು ಇಲಾಖೆ ಅಧಿಕಾರಿಗಳು ನಿಯಮಿತವಾಗಿ ಪರಿಶೀಲನೆ ಮಾಡುತ್ತಿದ್ದಾರೆ. 24 ಔಷಧ ಮಳಿಗೆಗಳು ಪರವಾನಗಿ ಇಲ್ಲದೆ ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಎರಡು ವರ್ಷಗಳಲ್ಲಿ ಪತ್ತೆಮಾಡಲಾಗಿದೆ.

₹1,120 ಕೋಟಿ ತೆರಿಗೆ ವಂಚನೆ ಪತ್ತೆ

ಬೆಂಗಳೂರು: ವಾಣಿಜ್ಯ ತೆರಿಗೆಗಳ ಇಲಾಖೆ, ಅಬಕಾರಿ ಇಲಾಖೆ, ನೋಂದಣಿ ಮತ್ತು ಮುದ್ರಾಂಕ ಇಲಾಖೆಗಳು ತೆರಿಗೆ ವಂಚನೆಗಳ ಪ್ರಕರಣಗಳನ್ನು ಪತ್ತೆ ಮಾಡಿದ್ದು, ಸುಮಾರು ₹1,120.34 ಕೋಟಿಗೂ ಅಧಿಕ ತೆರಿಗೆ ವಂಚಿಸಿರುವುದು ದೃಢಪಟ್ಟಿದೆ. 8

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಟೆಸ್ಟ್‌ನಲ್ಲಿ ಲಯಕ್ಕೆ ಪರದಾಡುತ್ತಿರುವ ಸೂಪರ್ ಸ್ಟಾರ್ ಆಟಗಾರರು

ಕರಿನೆರಳಿನಲ್ಲಿ ಕೊಹ್ಲಿ, ರೋಹಿತ್?



• ಮಧು ಜವಳಿ

ಮೆಲ್ಬರ್ನ್: ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಎದುರಿನ ಸೋಲು ಭಾರತ ತಂಡದ ಮೇಲೆ ಆತ್ಮಾವಲೋಕನದ ತುರ್ತನ್ನು ಎತ್ತಿ ತೋರಿದೆ. ಎಂಟು ವರ್ಷಗಳಲ್ಲಿ ಮೊದಲ ಬಾರಿ ಬಾರ್ಡರ್–ಗಾವಸ್ಕರ್ ಟ್ರೋಫಿ ಭಾರತದ ಕೈಜಾರುವಂತೆ ಕಾಣುತ್ತಿದೆ. ಈ ಟ್ರೋಫಿ ಉಳಿಸಿಕೊಳ್ಳಬೇಕಾದರೆ ಸಿಡ್ನಿಯಲ್ಲಿ ನಡೆಯಲಿರುವ ಐದನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್‌ನಲ್ಲಿ ಭಾರತ ಗೆದ್ದು ಸರಣಿಯನ್ನು 2–2 ಸಮ ಮಾಡಿಕೊಳ್ಳಬೇಕು. ಆದರೆ, ಆಸ್ಟ್ರೇಲಿಯಾ ಆಟಗಾರರ ರಣೋತ್ಸಾಹ ಮತ್ತು ಭಾರತದ ಆಟಗಾರರ ಪರದಾಟ ನೋಡಿದರೆ ಡ್ರಾ ಮಾಡಿಕೊಳ್ಳುವುದೂ ದೊಡ್ಡ ಸಾಹಸವೆಂಬಂತೆ ಕಾಣುತ್ತಿದೆ.

ಸರಣಿಯ ನಿರ್ಣಯಕ್ಕಿಂತ ಹೆಚ್ಚಾಗಿ ಈ ಪಂದ್ಯವು ಇಬ್ಬರು ದಿಗ್ಗಜ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಕ್ರಿಕೆಟ್ ಭವಿಷ್ಯವನ್ನು ನಿರ್ಧರಿಸುವ ಸಾಧ್ಯತೆ ಇದೆ. ಈ ಎರಡು ಮಹಾನ್ ಆಟಗಾರರು ತಮ್ಮ ವೃತ್ತಿಜೀವನದ ನಿರ್ಣಾಯಕ ಕಾಲಘಟ್ಟದಲ್ಲಿದ್ದಾರೆ. ಏರುತ್ತಿರುವ ವಯಸ್ಸು ಒಂದು ಕಡೆ, ಲಯಕ್ಕೆ ಸತತವಾಗಿ ಪರದಾಟ ಇನ್ನೊಂದು ಕಡೆ. ಇವೆರಡರ ಮಿಶ್ರಣ ಈ ಹಿಂದೆ ಹಲವು ಆಟಗಾರರ ಕ್ರಿಕೆಟ್ ಜೀವನ ಅಂತ್ಯಗೊಳಿಸಿದೆ. ತಮ್ಮ ಕ್ರಿಕೆಟ್ ಬದುಕಿನ ಸಂಧ್ಯಾಕಾಲದಲ್ಲಿರುವ ಕೊಹ್ಲಿ ಮತ್ತು ರೋಹಿತ್ ಈಗ ಅಂತಹದೇ ಪರಿಸ್ಥಿತಿಯಲ್ಲಿದ್ದಾರೆ.

38 ವರ್ಷ ವಯಸ್ಸಿನ ರೋಹಿತ್ ಮತ್ತು 36 ವರ್ಷ ವಯಸ್ಸಿನ ಕೊಹ್ಲಿ ಅವರ ದಾಖಲೆ ಇತರ ಆಟಗಾರರಿಗೆ ಅಸೂಯೆ ಹುಟ್ಟಿಸುವಂತಿದೆ. ಆದರೆ ದೀರ್ಘ ಕಾಲದಿಂದ ಇವರಿಬ್ಬರು ಲಯ ಕಂಡುಕೊಳ್ಳಲು ಪರದಾಡುತ್ತಿರುವುದರಿಂದ ತಂಡಕ್ಕೆ ಹೊರೆಯಂತೆ ಕಾಣುತ್ತಿದ್ದಾರೆ. ಈ ಮಾತು ಸ್ವಲ್ಪ ಅತಿ ಎನಿಸಿದರೂ ಕಟುಸತ್ಯ. ಸತತವಾಗಿ ವಿಫಲವಾಗುತ್ತಿರುವ ಸೂಪರ್‌ಸ್ಟಾರ್ ಆಟಗಾರರಿಂದಾಗಿ ಪ್ರತಿಭಾನ್ವಿತ ಆಟಗಾರ ಶುಭಮನ್ ಗಿಲ್ ಅಂಥ ಭವಿಷ್ಯದ ಬ್ಯಾಟರ್ ಬೆಂಚ್‌ನಲ್ಲಿ ಕುಳಿತುಕೊಳ್ಳಬೇಕಾಗಿದೆ. ಹೀಗಾಗಿ ಇವರು ತಂಡದಲ್ಲಿ ಮುಂದುವರಿಯಬೇಕೇ ಎಂಬ ಪ್ರಶ್ನೆ ಎದುರಾಗುತ್ತಿದೆ.

'ಕೆಲವು ಫಲಿತಾಂಶಗಳು ನಾವು ಅಂದುಕೊಂಡ ರೀತಿ ಬಂದಿಲ್ಲ. ಇದು ನಿರಾಸೆ ಮೂಡಿಸಿದೆ. ನಾಯಕನಾಗಿ ನನಗೂ ಬೇಸರವಾಗಿದೆ. ಇದರಿಂದ ಮಾನಸಿಕ ನೆಮ್ಮದಿ ಕದಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ನಾವು ಇಲ್ಲಿಗೆ ಬಂದು ಯಶಸ್ಸಿಗಾಗಿ ನಡೆಸುವ ಪ್ರಯತ್ನಗಳು ಕೈಗೂಡದಿದ್ದಾಗ ಅದರಿಂದ ನಿರಾಸೆಯಾಗುತ್ತದೆ' ಎಂದು ರೋಹಿತ್ ಸೋಮವಾರ ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದ್ದರು.

ರೋಹಿತ್ ಮತ್ತು ಕೊಹ್ಲಿ– ಇವರಿಬ್ಬರಲ್ಲಿ ಒಬ್ಬರು ಸೋಮವಾರ ಮಧ್ಯಾಹ್ನದ ಆಟದಲ್ಲಿ ಬೇರೂರಿ ಆಡಿದ್ದರೆ ಸರಣಿ ಜಯದ ಅವಕಾಶ ಜೀವಂತವಾಗಿ ಉಳಿಯುತ್ತಿತ್ತೇನೊ? ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಅವಕಾಶವೂ ಕ್ಷೀಣವಾಗುತ್ತಿರಲಿಲ್ಲ. ರೋಹಿತ್ ಪ್ರತಿ ಬಾರಿ ಬೇರೆ ಬೇರೆ ರೀತಿ ವಿಕೆಟ್ ಒಪ್ಪಿಸುತ್ತಿದ್ದಾರೆ. ಕೊಹ್ಲಿ ಅವರ ಪರದಾಟವೂ ಅಷ್ಟೇ ಸಂಕೀರ್ಣವಾಗಿದೆ. ಯಾರ ಆಟ ಕಳಪೆ ಎಂದು ಹೇಳುವುದು ಕಷ್ಟ.

11ನೇ ಪುಟ ನೋಡಿ

ಜಿಗಣಿ ಕೆರೆಯಲ್ಲಿ ಮೊಸಳೆ ಪ್ರತ್ಯಕ್ಷ

ಪ್ರಜಾವಾಣಿ ವಾರ್ತೆ


ಆನೇಕಲ್: ತಾಲ್ಲೂಕಿನ ಜಿಗಣಿ ಕೆರೆಯಲ್ಲಿ ಮೊಸಳೆ ಪ್ರತ್ಯಕ್ಷವಾಗಿರುವುದು ಕೆರೆ ಸುತ್ತಮುತ್ತಲಿನ ಪ್ರದೇಶದ ನಿವಾಸಿಗಳಲ್ಲಿ, ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ತಾಲ್ಲೂಕಿನ ಜಿಗಣಿ ಕೆರೆಯಲ್ಲಿ ಕಳೆದ ಎರಡು ದಿನಗಳಿಂದ ಮೊಸಳೆ ಕಾಣಿಸಿಕೊಂಡಿದೆ. ಕೆರೆ ದಡದ ಮೇಲೆ ಮೊಸಳೆ ಮಲಗಿರುವ ಚಿತ್ರಗಳು ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಕೆರೆ ಸಮೀಪದ ನಿವಾಸಿಗಳು ಓಡಾಡಲು ಭಯಗೊಂಡಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಈ ಕೂಡಲೇ ಮೊಸಳೆ ಸೆರೆ ಹಿಡಿಯಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸ್ನೇಹ ಬೆಳೆಸಿ ಹಣ, ಚಿನ್ನಾಭರಣ ಪಡೆದು ವಂಚನೆ ಆರೋಪ • ಆರ್‌ಆರ್ ನಗರ ಠಾಣೆಯಲ್ಲಿ ಪ್ರಕರಣ ದಾಖಲು

ಐಶ್ವರ್ಯಾ ವಿರುದ್ಧ ಮತ್ತೊಂದು ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಐಶ್ವರ್ಯಾಗೌಡ

ಬೆಂಗಳೂರು: ಚಿನ್ನದ ಅಂಗಡಿಯಿಂದ ₹8.41 ಕೋಟಿ ಮೌಲ್ಯದ 14.6 ಕೆ.ಜಿ ಚಿನ್ನ ಸಾಲ ಪಡೆದು ವಂಚನೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಐಶ್ವರ್ಯಾಗೌಡ ಅಲಿಯಾಸ್ ನವ್ಯಶ್ರೀ ದಂಪತಿ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದೆ. ರಾಜರಾಜೇಶ್ವರಿ ನಗರ (ಆರ್.ಆರ್. ನಗರ) ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ರಾಜರಾಜೇಶ್ವರಿನಗರ ನಿವಾಸಿ ಶಿಲ್ಪಾಗೌಡ ಅವರು ನೀಡಿದ ದೂರು ಆಧರಿಸಿ ಐಶ್ವರ್ಯಾಗೌಡ, ಆಕೆಯ ಪತಿ ಹರೀಶ್ ಮತ್ತು ಬೌನ್ಸರ್ ಗಜ ವಿರುದ್ಧ ವಂಚನೆ, ಮೋಸ, ನಂಬಿಕೆ ದ್ರೋಹ, ಜೀವ ಬೆದರಿಕೆ ಸೇರಿ ವಿವಿಧ ಆರೋಪಗಳಡಿ ಎಫ್‌ಐಆರ್ ದಾಖಲಾಗಿದೆ.

'ಸ್ನೇಹ ಬೆಳೆಸಿ ₹3.25 ಕೋಟಿ ನಗದು, 450 ಗ್ರಾಂ. ಚಿನ್ನಾಭರಣ ಪಡೆದು ವಂಚಿಸಿದ್ದಾರೆ' ಎಂಬ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಮನೆಯ ಪಕ್ಕದ ರಸ್ತೆಯ ನಿವಾಸಿ ಆಗಿರುವ ಐಶ್ವರ್ಯಾಗೌಡ ಅವರು ಎರಡು ವರ್ಷದ ಹಿಂದೆ ಪರಿಚಯ ಆಗಿದ್ದರು. ನಾನು ಡಿ.ಕೆ. ಸುರೇಶ್ ಅವರ ಸಹೋದರಿ ಎಂದು ಹೇಳಿಕೊಂಡಿದ್ದ ಐಶ್ವರ್ಯಾ, ನಾನು ಚಿನ್ನದ ವ್ಯಾಪಾರ, ಚಿಟ್ ಫಂಡ್ ವ್ಯವಹಾರ, ವಿಲ್ಲಾ ನಿರ್ಮಾಣ, ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೇನೆ. ಎಲ್ಲಾ ವ್ಯವಹಾರಗಳು ಲಾಭದಾಯಕವಾಗಿದ್ದು, ನೀವು ಹೂಡಿಕೆ ಮಾಡಿದರೆ ಅಧಿಕ ಲಾಭ ಪಡೆಯಬಹುದು ಎಂದು ಹೇಳಿದ್ದರು. ಹೀಗಾಗಿ ಅವರ ಮಾತನ್ನು ನಾನು ನಂಬಿದ್ದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಕೆಲವು ದಿನಗಳ ಬಳಿಕ ಐಶ್ವರ್ಯಾ ತನ್ನ ಬಳಿ ಚಿನ್ನ ಖರೀದಿ ಮಾಡಿದರೆ ಮಾರುಕಟ್ಟೆ ದರಕ್ಕಿಂತ ಕಡಿಮೆ ದರಕ್ಕೆ ಕೊಡಿಸುವುದಾಗಿ ಹೇಳಿದ್ದರು. ಆಕೆಯ ಮಾತು ನಂಬಿ ಸಂಬಂಧಿಕರು ಹಾಗೂ ಸ್ನೇಹಿತರಿಂದ ಹಣ ಪಡೆದು ಸುಮಾರು ₹65 ಲಕ್ಷ ನಗದು ನೀಡಿದ್ದೆ. ಅಲ್ಲದೇ, ಬ್ಯಾಂಕ್ ಖಾತೆಗಳಿಂದ ₹ 2.60 ಕೋಟಿಯನ್ನು ಸಾಯಿದಾ ಬಾಬು, ಧನು, ಶೀತಲ್, ಚೇತನ್, ಲಕ್ಷ್ಮೀ, ಪ್ರವೀಣ್, ಮಹೇಶ್, ಹರೀಶ್ ಹಾಗೂ ಇತರರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದೆ. 2022ರ ಜನವರಿಯಿಂದ ಈವರೆಗೆ ಐಶ್ವರ್ಯಾಗೌಡಗೆ ಒಟ್ಟು ₹3.25 ಕೋಟಿ ಹಣ ನೀಡಿದ್ದೇನೆ' ಎಂದು ದೂರಿನಲ್ಲಿ ವಿವರಿಸಿದ್ದಾರೆ.

'2023ರ ಜೂನ್‌ನಲ್ಲಿ ಐಶ್ವರ್ಯಾ ನನ್ನ ವ್ಯವಹಾರಕ್ಕೆ ತುರ್ತಾಗಿ ಹಣ ಬೇಕಿದೆ. ನಿನ್ನ ಬಳಿಯಿರುವ ಚಿನ್ನಾಭರಣ ಕೊಟ್ಟರೆ, ಅಡಮಾನ ಇಟ್ಟು ವ್ಯವಹಾರಕ್ಕೆ ಬಳಸಿಕೊಂಡು ಬಳಿಕ ವಾಪಾಸ್ ನೀಡುತ್ತೇನೆ ಎಂದು ಹೇಳಿದ್ದರು. ಅದರಂತೆ ಆಕೆಯ ಮನೆಯ ಬೌನ್ಸರ್ ಗಜ ನನ್ನ ಮನೆಗೆ ಬಂದು 430 ಗ್ರಾಂ. ಚಿನ್ನಾಭರಣ ಪಡೆದುಕೊಂಡು ಹೋಗಿದ್ದರು. ಇದಾದ ಬಳಿಕ ಐಶ್ವರ್ಯಾ ನನ್ನ ಜತೆಗೆ ಸರಿಯಾಗಿ ಮಾತನಾಡುತ್ತಿರಲಿಲ್ಲ. ಅದಾದ ಮೇಲೆ ಚಿನ್ನಾಭರಣ ಹಾಗೂ ಹಣ ವಾಪಸ್ ನೀಡುವಂತೆ ಕೇಳಿದ್ದೆ. ಆದರೂ ನೀಡಿಲ್ಲ' ಎಂದು ದೂರಲಾಗಿದೆ.

ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿ ಮಾಲೀಕರಾದ ವನಿತಾ ಎಸ್.ಐತಾಳ್ ಅವರಿಂದ ₹8.41 ಕೋಟಿ ಸಾಲ ಪಡೆದು ವಂಚಿಸಿದ್ದ ಆರೋಪದ ಅಡಿ ಐಶ್ವರ್ಯಾಗೌಡ ಹಾಗೂ ಅವರ ಪತಿ ಹರೀಶ್ ಅವರನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದರು.

ಜೀವ ಬೆದರಿಕೆ: ಶಿಲ್ಪಾಗೌಡ ಆರೋಪ

'ನನಗೆ ರಾಜಕಾರಣಿಗಳ ಬೆಂಬಲ ಇದೆ. ನಿನಗೆ ಒಂದು ಗತಿ ಕಾಣಿಸುತ್ತೇನೆ. ಚಾರಿತ್ರ್ಯದ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಿ ಮರ್ಯಾದೆ ತೆಗೆಯುತ್ತೇನೆ. ನನ್ನ ವಿಚಾರಕ್ಕೆ ಬಂದರೆ, ಒಂದು ಗತಿ ಕಾಣಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದಾರೆ' ಎಂದು ಶಿಲ್ಪಾಗೌಡ ಅವರು ದೂರಿನಲ್ಲಿ ವಿವರಿಸಿದ್ದಾರೆ.

ಮಂಡ್ಯದಲ್ಲೂ ಪ್ರಕರಣ ದಾಖಲು

ಮಂಡ್ಯ: ಚಿನ್ನ ವಂಚನೆ ಪ್ರಕರಣದ ಆರೋಪಿ ಐಶ್ವರ್ಯಾ ಗೌಡ ವಿರುದ್ಧ ಬೆಂಗಳೂರು ಬಳಿಕ ಮಂಡ್ಯ ನಗರದ ಪೂರ್ವ ಪೊಲೀಸ್ ಠಾಣೆಯಲ್ಲೂ ಪ್ರಕರಣ ದಾಖಲಾಗಿದೆ.

ಇಲ್ಲಿನ ಗುತ್ತಲು ರಸ್ತೆಯ ಬಸವನಗುಡಿ ನಿವಾಸಿ ರವಿಕುಮಾರ್ ಹಾಗೂ ಅರ್ಕೇಶ್ವರ ನಗರದ ಪೂರ್ಣಿಮಾ ಎಂಬುವರು ದೂರು ನೀಡಿದ್ದಾರೆ. ಆರೋಪಿ ಐಶ್ವರ್ಯಾ ಗೌಡ, ಅವರ ಪತಿ ಹರೀಶ್, ಸಹೋದರ ಹಳ್ಳಿ ಮಂಜುನಾಥ್ ವಿರುದ್ಧ ದೂರು ದಾಖಲಾಗಿದೆ.

'ರವಿಕುಮಾರ್ ಬಳಿ ₹40 ಲಕ್ಷ ಹಾಗೂ ಪೂರ್ಣಿಮಾ ಬಳಿ 100 ಗ್ರಾಂ ಚಿನ್ನ, ₹15 ಲಕ್ಷ ನಗದು ತೆಗೆದುಕೊಂಡು ವಂಚನೆ ಮಾಡಿದ್ದಾರೆ. ಕಳೆದ 2016ರಿಂದ 2019ರವರೆಗೆ ಹಂತ -ಹಂತವಾಗಿ ಹಣ ಪಡೆದುಕೊಂಡು ವಂಚಿಸಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಮಂಡ್ಯ ಪೂರ್ವ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಐಶ್ವರ್ಯಾ ಗೌಡ-ಹರೀಶ್ ಬಿಡುಗಡೆಗೆ ಹೈಕೋರ್ಟ್ ಆದೇಶ



ಬೆಂಗಳೂರು: 'ಚಿನ್ನ ಪಡೆದು ವಂಚಿಸಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಉದ್ಯಮಿ ಐಶ್ವರ್ಯಾ ಗೌಡ ಹಾಗೂ ಅವರ ಪತಿ ಕೆ.ಎನ್.ಹರೀಶ್ ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಜೈಲಿನಲ್ಲಿರುವ ಉದ್ಯಮಿ ಐಶ್ವರ್ಯಾ ಗೌಡ (32) ಹಾಗೂ ಅವರ ಪತಿ ಕೆ.ಎನ್.ಹರೀಶ್ (45) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ ಹಾಗೂ ಎಸ್.ಸುನಿಲ್ ಕುಮಾರ್ ಅವರು, ಐಶ್ವರ್ಯಾ ಗೌಡ ಹಾಗೂ ಹರೀಶ್ ಪರ ವಾದ ಮಂಡಿಸಿ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನೀಡಿದ್ದ ನೋಟಿಸ್ ಅನುಸಾರ ಅರ್ಜಿದಾರರು ಸ್ವ ಇಚ್ಛೆಯಿಂದ ಠಾಣೆಗೆ ತೆರಳಿ ತನಿಖೆಗೆ ಸಹಕರಿಸಿದ್ದಾರೆ. ಆದರೆ, ಪೊಲೀಸರು ಏಕಾಏಕಿ ಅವರನ್ನು ಬಂಧಿಸಿರುವುದು ಕಾನೂನು ಬಾಹಿರ' ಎಂದರು.

'ಅರ್ಜಿದಾರರನ್ನು ಬಂಧಿಸುವುದಕ್ಕೂ ಮುನ್ನ ಆರೋಪಿಗಳಿಗೆ ಪೊಲೀಸರು ಕಾನೂನುಬದ್ಧವಾಗಿ ನೀಡಬೇಕಾದ ಬಂಧನಕ್ಕೆ ಕಾರಣವಾಗುವ ಅಂಶಗಳನ್ನು ಲಿಖಿತ ರೂಪದಲ್ಲಿ ನೀಡಿಲ್ಲ. ಇದು ಅರ್ಜಿದಾರರ ಸಾಂವಿಧಾನಿಕ ಹಕ್ಕಿನ ಉಲ್ಲಂಘನೆ. ಆದ್ದರಿಂದ, ಅವರ ಬಂಧನವನ್ನು ಕಾನೂನುಬಾಹಿರ ಎಂದು ಘೋಷಿಸಿ ಬಿಡುಗಡೆಗೆ ಆದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ದೂರುದಾರರಾದ 'ವಾರಾಹಿ ವರ್ಲ್ಡ್ ಆಫ್ ಗೋಲ್ಡ್' ಅಂಗಡಿ ಮಾಲಕಿ ವನಿತಾ ಎಸ್. ಐತಾಳ್ ಪರ ಹಾಜರಿದ್ದ ಹೈಕೋರ್ಟ್ ವಕೀಲ ಪಿ.ಅರವಿಂದ ಕಾಮತ್ ತೀವ್ರ ಆಕ್ಷೇಪ ವ್ಯಕ್ತಪಡಿಸಿ, 'ಇದೊಂದು ಬಹುಕೋಟಿ ಹಗರಣ. ಪೊಲೀಸರು ಆರೋಪಿಗಳನ್ನು ಬಂಧಿಸುವ ಪೂರ್ವ ಮತ್ತು ನಂತರ ಎಲ್ಲಾ ರೀತಿಯ ಕಾನೂನು ಪ್ರಕ್ರಿಯೆಯಗಳನ್ನು ಅನುಸರಿಸಿದ್ದಾರೆ' ಎಂದು ಪ್ರತಿಪಾದಿಸಿದರು.

ಇದನ್ನು ಒಪ್ಪದ ನ್ಯಾಯಪೀಠ, 'ಅರ್ಜಿದಾರರ ಪರ ವಕೀಲರು ಸಾಂವಿಧಾನಿಕ ಹಕ್ಕಿನ ಉಲ್ಲಂಘನೆ ಬಗ್ಗೆ ವಾದ ಮಂಡಿಸಿದ್ದು ಬಿಡುಗಡೆಗೆ ಕೋರಿದ್ದಾರೆ. ಅಂತೆಯೇ, ಇದು ಪ್ರತಿಯೊಬ್ಬರ ಸಾಂವಿಧಾನಿಕ ಹಕ್ಕಿನ ರಕ್ಷಣೆ ವಿಷಯವೂ ಆಗಿದೆ. ಆದ್ದರಿಂದ, ಈ ಅರ್ಜಿಯನ್ನು ಈಗ ಮೆರಿಟ್ ಆಧಾರದಲ್ಲಿ ನಿರ್ಣಯಿಸುವುದಿಲ್ಲ' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತು.

ಅಂತೆಯೇ, 'ಅರ್ಜಿದಾರರು ಕಾಲಕಾಲಕ್ಕೆ ತನಿಖೆಗೆ ಸಹಕರಿಸಬೇಕು. ಸಾಕ್ಷ್ಯಗಳನ್ನು ನಾಶಪಡಿಸಬಾರದು' ಎಂಬ ಷರತ್ತುಗಳೊಂದಿಗೆ ತಕ್ಷಣವೇ ಬಿಡುಗಡೆ ಮಾಡುವಂತೆ ಆದೇಶಿಸಿತು. ಅರ್ಜಿಯಲ್ಲಿ ಚಂದ್ರಾ ಲೇ ಔಟ್ ಠಾಣೆ ಇನ್‌ಸ್ಪೆಕ್ಟರ್ ಮತ್ತು ದೂರುದಾರೆ ವನಿತಾ ಐತಾಳ್ ಅವರನ್ನು ಪ್ರತಿವಾದಿಗಳಾಗಿ ಕಾಣಿಸಲಾಗಿದೆ.

ರಸ್ತೆ ಅಪಘಾತ ಯುವಕರಿಂದ ಅಂಗಾಂಗ ದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಪ್ರತ್ಯೇಕ ರಸ್ತೆ ಅಪಘಾತ ಪ್ರಕರಣಗಳಲ್ಲಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡಿದ್ದ ಯುವಕರು ಅಂಗಾಂಗ ದಾನದ ಮೂಲಕ ರೋಗಿಗಳಿಗೆ ನೆರವಾಗಿದ್ದಾರೆ.

ನಗರದ ಮಂಜುನಾಥ ಇ. (32) ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದ ಅಜಯ್ ಬಿ. (25) ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಗಂಭೀರ ಗಾಯಗೊಂಡು ಸ್ಪರ್ಶ್ ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಮಿದುಳು ನಿಷ್ಕ್ರಿಯಗೊಂಡಿದ್ದರಿಂದ ವೈದ್ಯರು ಅಂಗಾಂಗ ದಾನದ ಪ್ರಕ್ರಿಯೆ ಬಗ್ಗೆ ಕುಟುಂಬಸ್ಥರಿಗೆ ವಿವರಿಸಿದರು. ಇಬ್ಬರೂ ಯುವಕರ ಕುಟುಂಬದವರು ಅಂಗಾಂಗ ದಾನಕ್ಕೆ ಸಮ್ಮತಿಸಿದರು. ವೈದ್ಯರು ಅಂಗಾಂಗಗಳನ್ನು ದಾನವಾಗಿ ಪಡೆದು, ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಕಸಿ ಮಾಡಿಸಿದರು.

ಮೂತ್ರಪಿಂಡಗಳು ಮತ್ತು ಯಕೃತ್ತುಗಳನ್ನು ಸ್ಪರ್ಶ್ ಆಸ್ಪತ್ರೆಯ ರೋಗಿಗಳಿಗೆ ಕಸಿ ಮಾಡಲಾಯಿತು. ಇವರ ಉಳಿದ ಅಂಗಾಂಗಗಳನ್ನು ನಗರದ ವಿವಿಧ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕಸಿ ನಡೆಸಲಾಯಿತು. ಜೀವಸಾರ್ಥಕತೆ ಸಂಸ್ಥೆಯ ಸಮನ್ವಯದಿಂದ ಅಂಗಾಂಗ ಕಸಿ ಸಾಕಾರವಾಯಿತು ಎಂದು ಸ್ಪರ್ಶ್ ಆಸ್ಪತ್ರೆ ಪ್ರಕಟಣೆ ತಿಳಿಸಿದೆ.

ನಿಧನವಾರ್ತೆ

ರತ್ನಾಕರ ಶೆಟ್ಟಿ



ಮೂಡುಬಿದಿರೆ (ದಕ್ಷಿಣ ಕನ್ನಡ): ಮಾಜಿ ಸಚಿವ ದಿ.ಕೆ.ಅಮರನಾಥ ಶೆಟ್ಟಿ ಅವರ ಕಿರಿಯ ಸಹೋದರ, ವಿಜಯಬ್ಯಾಂಕ್‌ನ ನಿವೃತ್ತ ಅಧಿಕಾರಿ ಪಾಲಡ್ಕ ಗ್ರಾಮದ ಮುಂಡ್ರುದೆಗುತ್ತು ರತ್ನಾಕರ ಶೆಟ್ಟಿ (70) ಮಂಗಳವಾರ ಬೆಂಗಳೂರಿನ ಸ್ವಗೃಹದಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ನಗರದಲ್ಲಿ ಇಂದು

ರಾಗಶ್ರೀ ಸಮ್ಮೇಳನೋತ್ಸವ-2024-25: ಭಾಗವಹಿಸುವವರು: ಎಚ್. ಕೆ. ನರಸಿಂಹಮೂರ್ತಿ, ಭಾಗ್ಯಲಕ್ಷ್ಮಿ ಚಂದ್ರಶೇಖರ್, ಆನೂರು ಅನಂತಕೃಷ್ಣ ಶರ್ಮ, ಪಳನಿವೇಲು, ಟಿ.ಆರ್. ಶ್ರೀನಾಥ್, ಆಯೋಜನೆ: ಡಿ. ಸುಬ್ಬರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ ಬಸವನಗುಡಿ, ಸಂಜೆ 5

ಕನ್ನಡ ನಿತ್ಯೋತ್ಸವ ವರ್ಷ-2025ಕ್ಕೆ ಚಾಲನೆ: ಡಾ. ರಾಜ್‌ಕುಮಾರ್ 'ದಿ ಲೆಜೆಂಡ್' ಪುಸ್ತಕ ಗುಚ್ಛದ ಬಿಡುಗಡೆ, ಡಾ. ರಾಜ್ ಗೀತೆಗಳ ಗಾನಲಹರಿ: ರಾಜೇಂದ್ರ ಹಳ್ಳೂರ, ವಾಸುಕಿ ಪ್ರಸಾದ್, ಆಯೋಜನೆ: ಕನ್ನಡ ಮೈತ್ರಿ ಟ್ರಸ್ಟ್, ಸ್ಥಳ: ಡಾ. ರಾಜ್‌ಕುಮಾರ್ ಪ್ರತಿಮೆ ಮುಂಭಾಗ, ಕಾಕ್ಸ್‌ಟೌನ್ ವೃತ್ತ, ಸಂಜೆ 5

ವಾರ್ಷಿಕೋತ್ಸವ: ಕಲ್ಪತರು ದಿವಸ: ಪ್ರವಚನ: ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5.30ರಿಂದ

ಪಾಲಿಕೆಯ ಭಲವಾದಿ ಪಾಳ್ಯ ವಾರ್ಡ್‌ನ ಮಾಜಿ ಸದಸ್ಯೆ ರೇಖಾ ಕದಿರೇಶ್ ಹತ್ಯೆ ಪ್ರಕರಣ

ಏಳು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಛಲವಾದಿ ಪಾಳ್ಯ ವಾರ್ಡ್‌ನ ಮಾಜಿ ಸದಸ್ಯೆ ರೇಖಾ ಕದಿರೇಶ್ ಹತ್ಯೆ ಪ್ರಕರಣದ ಏಳು ಅಪರಾಧಿಗಳಿಗೆ 71ನೇ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ಮಂಗಳವಾರ ಆದೇಶಿಸಿದೆ.

ಅಂಜನಪ್ಪ ಗಾರ್ಡನ್ ನಿವಾಸಿ ರೇಖಾ ಅವರನ್ನು 2021ರ ಜೂನ್‌ನಲ್ಲಿ ಅವರ ಕಚೇರಿ ಎದುರೇ ಹತ್ಯೆ ಮಾಡಿ ಅಪರಾಧಿಗಳು ಪರಾರಿ ಆಗಿದ್ದರು. ಪೀಟರ್(49), ಸೂರ್ಯ ಅಲಿಯಾಸ್ ಸೂರಜ್ (23), ಸ್ಟೀಫನ್ (24), ಪುರುಷೋತ್ತಮ (25), ಅಜಯ್ (24), ಅರುಣ್‌ಕುಮಾರ್ (39) ಹಾಗೂ ಸೆಲ್ವರಾಜ್ ಅಲಿಯಾಸ್ ಕ್ಯಾಪ್ಟನ್ (36) ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಇದೇ ಪ್ರಕರಣದ ಅಪರಾಧಿ ಮಾಲಾ (63) ವಿಚಾರಣೆ ವೇಳೆ ಮೃತಪಟ್ಟಿದ್ದಳು.

ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಿದ್ದ ಕಾಟನ್‌ಪೇಟೆ ಪೊಲೀಸರು 2021ರ ಸೆಪ್ಟೆಂಬರ್‌ನಲ್ಲಿ ನಗರದ 31ನೇ ಎಸಿಎಂಎಂ ನ್ಯಾಯಾಲಯಕ್ಕೆ 780 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯದಲ್ಲಿ

ಮುಖ್ಯಾಂಶಗಳು

- 2021ರ ಜೂನ್‌ನಲ್ಲಿ ನಡೆದ ಪ್ರಕರಣ
- ಕಚೇರಿ ಎದುರೇ ಹತ್ಯೆ
- ಅಂಜನಪ್ಪ ಗಾರ್ಡನ್ ನಿವಾಸಿ ರೇಖಾ


ರೇಖಾ ಕದಿರೇಶ್

ವಾದ– ಪ್ರತಿವಾದ ನಡೆದಿತ್ತು. 'ಆರೋಪಿಗಳು ಕೃತ್ಯ ಎಸಗಿರುವುದು ಸಾಬೀತಾಗಿದೆ' ಎಂದು ತೀರ್ಮಾನಿಸಿರುವ ನ್ಯಾಯಾಲಯ, ಶಿಕ್ಷೆಯ ಪ್ರಮಾಣ ಪ್ರಕಟಿಸಿದೆ. ಏಳು ಅಪರಾಧಿಗಳ ಪೈಕಿ ಮೂವರು ಷರತ್ತುಬದ್ಧ ಜಾಮೀನು ಪಡೆದು ಕಾರಾಗೃಹದಿಂದ ಬಿಡುಗಡೆ ಆಗಿದ್ದರು. ನಾಲ್ವರು ಜೈಲಿನಲ್ಲಿದ್ದರು.

ದೋಷಾರೋಪ ಪಟ್ಟಿಯಲ್ಲಿ ಏನಿತ್ತು?: 'ರೇಖಾ ಅವರ ಪತಿ ಕದಿರೇಶ್ ಅವರನ್ನು 2018ರಲ್ಲಿ ಕೊಲೆ ಮಾಡಲಾಗಿತ್ತು. ಇದಾದ ನಂತರ ಪ್ರತ್ಯೇಕವಾಗಿ ವಾಸವಿದ್ದ ರೇಖಾ ಅವರು ಪತಿ ಕುಟುಂಬವನ್ನು ರಾಜಕೀಯವಾಗಿ ಕಡೆಗಣಿಸಿದ್ದರು. ಇದು ಕದಿರೇಶ್ ಅಕ್ಕ ಮಾಲಾ ಹಾಗೂ ಸಂಬಂಧಿಕರನ್ನು ಕೆರಳಿಸಿತ್ತು' ಎಂಬ ವಿಚಾರವನ್ನು ತನಿಖಾಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದರು.

'ಕದಿರೇಶ್ ಅವರ ಜತೆಗೆ ಪೀಟರ್ ಓಡಾಡಿಕೊಂಡಿದ್ದ. ಕದಿರೇಶ್ ಕೊಲೆಯಾದ ನಂತರ, ರೇಖಾ ಅವರ ಅಂಗರಕ್ಷಕನಾಗಿ ಸುತ್ತಾಡುತ್ತಿದ್ದ. ಆತನನ್ನು ದೂರವಿಡಲು ರೇಖಾ ಯತ್ನಿಸುತ್ತಿದ್ದರು. ಇದರಿಂದ ಪೀಟರ್ ಸಿಟ್ಟಾಗಿದ್ದ. ಪೀಟರ್‌ನನ್ನು ಸಂಪರ್ಕಿಸಿದ್ದ ಮಾಲಾ ಹಾಗೂ ಅವರ ಮಗ ಅರುಣ್‌ಕುಮಾರ್, ರೇಖಾ ಹತ್ಯೆಗೆ ಸಂಚು ರೂಪಿಸಿದ್ದರು. ನನ್ನ ಸಹೋದರನ ಕೈಯಲ್ಲಿದ್ದ ರಾಜಕೀಯ ಶಕ್ತಿಯನ್ನು ರೇಖಾ ತನ್ನದಾಗಿಸಿಕೊಳ್ಳುತ್ತಿದ್ದಾಳೆ. ಆಕೆಯೊಬ್ಬಳೇ ಬೆಳೆಯುತ್ತಿದ್ದಾಳೆ. ಆ ರಾಜಕೀಯ ಶಕ್ತಿ ನಮ್ಮ ಕೈಗೆ ಬರಬೇಕು. ಹೀಗಾಗಿ, ರೇಖಾ ಕೊಲೆ ಮಾಡೋಣ' ಎಂದು ಮಾಲಾ ಹೇಳಿದ್ದಳು. ಅದಕ್ಕೆ ಇತರೆ ಆರೋಪಿಗಳೂ ಒಪ್ಪಿ ಕಚೇರಿ ಬಳಿಗೆ ಬಂದು ಕೊಲೆ ಮಾಡಿ ಪರಾರಿ ಆಗಿದ್ದರು' ಎಂಬುದು ತನಿಖೆಯಿಂದ ಗೊತ್ತಾಗಿತ್ತು.

ವಾಹನ ಸವಾರರ ವಿರುದ್ಧ ಪ್ರಕರಣ

ಬೆಂಗಳೂರು: ನಗರ ಸಂಚಾರ ವಿಭಾಗದ ಪೊಲೀಸರು ಕಾರ್ಯಾಚರಣೆ ಚುರುಕುಗೊಳಿಸಿದ್ದು, ಮದ್ಯ ಸೇವಿಸಿ ವಾಹನ ಚಾಲನೆ ಹಾಗೂ ಅತಿ ವೇಗದ ಚಾಲನೆ ಮಾಡಿದ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ನಗರದ 50 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಒಂದು ವಾರದಲ್ಲಿ 95,179 ವಾಹನ ಚಾಲಕರನ್ನು ತಪಾಸಣೆಗೊಳಪಡಿಸಲಾಗಿದ್ದು, ಆ ಪೈಕಿ ಪಾನಮತ್ತರಾಗಿದ್ದ 1,187 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

165 ವಾಹನ ಚಾಲಕರ ವಿರುದ್ಧ ಅತಿ ವೇಗದ ಚಾಲನೆಯ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಅವರಿಂದ ₹ 1.65 ಲಕ್ಷ ದಂಡ ಸಂಗ್ರಹಿಸಲಾಗಿದೆ.

ವರ್ಷಾಚರಣೆಯಲ್ಲಿ ಮದ್ಯ, ಮಾದಕ ದ್ರವ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುವವರ ಪತ್ತೆಗೆ ನಗರದ ವಿವಿಧ ಸ್ಥಳಗಳಲ್ಲಿ ಪರಿಶೀಲನೆಗೆ 'ಚೆಕ್ ಪಾಯಿಂಟ್'ಗಳನ್ನು ನಿರ್ಮಿಸಲಾಗಿದೆ. ಅತಿ ವೇಗದಲ್ಲಿ ವಾಹನ ಚಾಲನೆ ಮಾಡುವ ಹಾಗೂ ವ್ಹೀಲಿ, ಡ್ರ್ಯಾಗ್ ರೇಸ್‌ನಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಂಚಾರ ಪೊಲೀಸ್ ವಿಭಾಗದ ಜಂಟಿ ಕಮಿಷನರ್ ಎಂ. ಎನ್. ಅನುಚೇತ್ ತಿಳಿಸಿದರು.

ಸಮುದ್ರದಲ್ಲಿ ಮುಳುಗಿ ಸಾವು

ಕಾಸರಗೋಡು: ಮೊಗ್ರಾಲ್‌ನ ಸಮುದ್ರದಲ್ಲಿ ಮುಳುಗಿ ಬೆಂಗಳೂರಿನ ಜಯನಗರದ ನಿವಾಸಿ ಮೀರ್ ಮುಹಮ್ಮದ್ ಷಾಹಿ (33) ಮೃತಪಟ್ಟಿದ್ದಾರೆ.

2 ದಿನಗಳ ಹಿಂದೆ ಅವರು ಕುಟುಂಬ ಸಮೇತ ಮೊಗ್ರಾಲ್‌ನ ರೆಸಾರ್ಟ್‌ಗೆ ಬಂದಿದ್ದರು. ಸಮುದ್ರದಲ್ಲಿ ಮುಳುಗಿದ್ದ ಮಗುವೊಂದನ್ನು ರಕ್ಷಿಸಿ ದಡಕ್ಕೆ ಕರೆತರುವ ವೇಳೆ ದೊಡ್ಡ ತೆರೆಯೊಂದು ಅಪ್ಪಳಿಸಿತ್ತು. ಇದರಿಂದಾಗಿ ಅವರು ಮತ್ತೆ ಸಮುದ್ರಕ್ಕೆ ಬಿದ್ದು ಕಾಣೆಯಾಗಿದ್ದರು. ಸ್ಥಳೀಯ ಮೀನುಗಾರರು ಅವರನ್ನು ಪತ್ತೆಮಾಡಿ ಮೇಲೆತ್ತುವಷ್ಟರಲ್ಲಿ ಮೃತಪಟ್ಟಿದ್ದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಐಷಾರಾಮಿ ಬೈಕ್ ಕಳ್ಳನ ಬಂಧನ

ಪ್ರಜಾವಾಣಿ ವಾರ್ತೆ


ಸಿರಾಜ್ ಶೇಖ್

ಬೆಂಗಳೂರು: ನಗರದ ವಿವಿಧೆಡೆ ರಾಯಲ್ ಎನ್‌ಫೀಲ್ಡ್ 350 ಕ್ಲಾಸಿಕ್ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಆರೋಪಿಯನ್ನು ಸುದ್ದಗುಂಟೆ ಪಾಳ್ಯ ಠಾಣೆ ಪೊಲೀಸರು ಬಂಧಿಸಿ, ₹ 15 ಲಕ್ಷ ಮೌಲ್ಯದ ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ತಾವರೆಕೆರೆ ನಿವಾಸಿ ಸಿರಾಜ್ ಶೇಖ್ (35) ಬಂಧಿತ. ಆರೋಪಿಯಿಂದ ಏಳು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಠಾಣಾ ವ್ಯಾಪ್ತಿಯ ನಿವಾಸಿಯೊಬ್ಬರು ಮನೆಯ ಮುಂಭಾಗ ನಿಲ್ಲಿಸಿದ್ದ ರಾಯಲ್ ಎನ್‌ಫೀಲ್ಡ್ ವಾಹನ ಕಳವಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಪೊಲೀಸರು, ಬಾತ್ಮೀದಾರರ ಮಾಹಿತಿ, ಸಿಸಿಟಿವಿ ಕ್ಯಾಮೆರಾ ಸುಳಿವು ಆಧರಿಸಿ ಆರೋಪಿಯನ್ನು ಕೃಷ್ಣಮೂರ್ತಿ ಲೇಔಟ್‌ನಲ್ಲಿ ಬಂಧಿಸಿದ್ದಾರೆ.

'ಆರೋಪಿಯು ತನ್ನ ಇಬ್ಬರು ಸಹಚರರ ಜತೆ ಸೇರಿ ಮನೆ ಹಾಗೂ ಪೇಯಿಂಗ್ ಗೆಸ್ಟ್ ಮುಂಭಾಗ ನಿಲ್ಲಿಸಿದ ಹ್ಯಾಂಡಲ್ ಲಾಕ್ ಹಾಕದ ಐಷಾರಾಮಿ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ. ಕದ್ದ ವಾಹನಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ಮಾರಾಟ ಮಾಡಿದ್ದ. ವಾಹನಗಳ ದಾಖಲೆ ಇಲ್ಲದ ಕಾರಣ ಲಕ್ಷಾಂತರ ರೂಪಾಯಿ ಮೌಲ್ಯದ ವಾಹನಗಳನ್ನು ₹ 40,000ದಿಂದ ₹ 50,000ಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ಮಾರಾಟ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಸುಲಭವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಆರೋಪಿ ಕಳ್ಳತನಕ್ಕೆ ಇಳಿದಿದ್ದ. ಕೃತ್ಯಕ್ಕೆ ಸಹಕರಿಸಿದ ಇಬ್ಬರು ನಾಪತ್ತೆಯಾಗಿದ್ದಾರೆ. ಅವರ ಪತ್ತೆಗೆ ಶೋಧ ಕಾರ್ಯ ಕೈಗೊಳ್ಳಲಾಗಿದೆ. ಆರೋಪಿಯು ಬೆಳಗಾವಿ ಮತ್ತು ಮಹಾರಾಷ್ಟ್ರದಲ್ಲಿ ಮಾರಾಟ ಮಾಡಿದ್ದ ಹಾಗೂ ಬಚ್ಚಿಟ್ಟಿದ್ದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಹೇಳಿದರು.


ಆರೋಪಿಯ ಬಂಧನದಿಂದ ಸುದ್ದಗುಂಟೆ ಠಾಣೆಯ ವ್ಯಾಪ್ತಿಯಲ್ಲಿ ದಾಖಲಾಗಿದ್ದ ಏಳು ದ್ವಿಚಕ್ರ ವಾಹನ ಕಳವು ಪ್ರಕರಣಗಳು ಪತ್ತೆಯಾಗಿವೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

₹2.25 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಕಾರ್ಯಾಚರಣೆ: ಆರೋಪಿಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೊಕ್ಕನಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಮಾದಕ ವಸ್ತುಗಳನ್ನು ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದ ಡ್ರಗ್ಸ್ ಪೆಡ್ಲರ್ ಅನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಬಂಧಿಸಿದ್ದಾರೆ.


ರಕ್ಷಿತ್

ಯಲಹಂಕದ ರಕ್ಷಿತ್(31) ಬಂಧಿತ ಆರೋಪಿ. ಮತ್ತೊಬ್ಬ ಆರೋಪಿ ತವನೀಶ್ ಅಲಿಯಾಸ್ ಈಶಾ ತಲೆಮರೆಸಿಕೊಂಡಿದ್ದು, ಶೋಧಕಾರ್ಯ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಆರೋಪಿಯಿಂದ 3 ಕೆ.ಜಿ. 55 ಗ್ರಾಂ. ಹೈಡ್ರೋ ಗಾಂಜಾ, 16 ಕೆ.ಜಿ. ಗಾಂಜಾ, 40 ಎಲ್‌ಎಸ್‌ಡಿ ಸ್ಟ್ರಿಪ್ಸ್, 130 ಗ್ರಾಂ. ಚರಸ್, 2.23 ಗ್ರಾಂ. ಎಂಡಿಎಂಎ ಕ್ರಿಸ್ಟಲ್, ಮೂರು ತೂಕದ ಯಂತ್ರಗಳು, ಎರಡು ಮೊಬೈಲ್ ಫೋನ್ ಹಾಗೂ ₹1.30 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ. ಇವುಗಳ ಮೌಲ್ಯ ₹2.50 ಕೋಟಿ ಎಂದು ಅಂದಾಜಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಮೂರು ದಿನ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

'ಅಪಾರ್ಟ್‌ಮೆಂಟ್‌ನಲ್ಲಿ ಮಾದಕ ವಸ್ತುಗಳನ್ನು ಶೇಖರಿಸಿಕೊಂಡು ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮೀದಾರರಿಂದ ಖಚಿತ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಹೇಳಿದರು.

'ಆರೋಪಿಗಳು ಗೋವಾದಿಂದ ಎಲ್‌ಎಸ್‌ಡಿ ಸ್ಟ್ರಿಪ್ಸ್, ಥಾಯ್ಲೆಂಡ್‌ನಿಂದ ಹೈಡ್ರೋ ಗಾಂಜಾ, ಹಿಮಾಚಲ ಪ್ರದೇಶದಿಂದ ಚರಸ್, ತೆಲಂಗಾಣದಿಂದ ಗಾಂಜಾ ಖರೀದಿಸಿ ನಗರಕ್ಕೆ ತರುತ್ತಿದ್ದರು. ವಿದ್ಯಾರ್ಥಿಗಳು, ಪೇಯಿಂಗ್ ಗೆಸ್ಟ್‌ಗಳಲ್ಲಿ ವಾಸ್ತವ್ಯ ಮಾಡುವವರಿಗೆ ಹಾಗೂ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಪೂರೈಕೆ ಮಾಡುತ್ತಿದ್ದರು' ಎಂದು ಮಾಹಿತಿ ನೀಡಿದರು.

ಅಪರಾಧ ಸುದ್ದಿ

ಹೊಸ ವರ್ಷದ ಪಾರ್ಟಿಗೆ ಡ್ರಗ್ಸ್ ಪೂರೈಕೆ: ಆರು ಮಂದಿ ಸೆರೆ

ಬೆಂಗಳೂರು: ಹೊಸ ವರ್ಷಾಚರಣೆಯ ಪಾರ್ಟಿಗಳಿಗೆ ಡ್ರಗ್ಸ್ ಪೂರೈಸಲು ಮುಂದಾಗಿದ್ದ ಆರು ಆರೋಪಿಗಳನ್ನು ವಿವಿಧ ಠಾಣೆಗಳ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ₹ 12.70 ಲಕ್ಷ ಮೌಲ್ಯದ ಸಿಂಥೆಟಿಕ್ ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಅಮೃತಹಳ್ಳಿಯ ವರ್ಮಾ ಲೇಔಟ್‌ನ ಖಾಲಿ ಜಾಗದಲ್ಲಿ ಮಾದಕ ವಸ್ತು ಎಂಡಿಎಂಎ ಕ್ರಿಸ್ಟಲ್‌ಗಳನ್ನು ಮಾರಾಟ ಮಾಡುತ್ತಿದ್ದ ಕೇರಳದ ಶಾನ್‌ವಿನ್ ಶಾಜಿ ಮುಥುನ್ನಿ (24) ಎಂಬಾತನನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹8.5 ಲಕ್ಷ ಮೌಲ್ಯದ 85 ಗ್ರಾಂ. ಎಂಡಿಎಂಎ ಕ್ರಿಸ್ಟಲ್ ಜಪ್ತಿ ಮಾಡಲಾಗಿದೆ. ಕೇರಳದಿಂದ ಡ್ರಗ್ಸ್ ತಂದು ನಗರದಲ್ಲಿ ಹೊಸ ವರ್ಷಾಚರಣೆ ವೇಳೆ ವಿದ್ಯಾರ್ಥಿಗಳಿಗೆ ಮಾರಾಟಕ್ಕೆ ಮುಂದಾಗಿದ್ದ ಎಂದು ಪೊಲೀಸರು ಹೇಳಿದರು.

ನೈಜೀರಿಯಾ ಪ್ರಜೆಗಳಿಂದ ಮಾದಕ ವಸ್ತು ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಆದಿಲ್(28) ಹಾಗೂ ಅಫ್ತಾಬ್ ಖಾನ್(25) ಎಂಬಾತನನ್ನು ಜೆ.ಜೆ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ₹42 ಸಾವಿರ ಮೌಲ್ಯದ 20 ಗ್ರಾಂ. ಎಂಡಿಎಂಎ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಆರೋಪಿಗಳು ಹಳೇಗುಡ್ಡದಹಳ್ಳಿಯ ಮುಖ್ಯರಸ್ತೆ ಬಳಿಯ ರುದ್ರಭೂಮಿ ಸಮೀಪದ ಖಾಲಿ ಜಾಗದಲ್ಲಿ ಡ್ರಗ್ಸ್ ಮಾರಾಟಕ್ಕೆ ಮುಂದಾಗಿದ್ದರು. ಈ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಇಬ್ಬರು ವಿದ್ಯಾರ್ಥಿಗಳ ಬಂಧನ: ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಇಬ್ಬರು ಐಟಿಐ ವಿದ್ಯಾರ್ಥಿಗಳನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಹಮ್ಮದ್ ಶಫಿ(24), ಅಖಿಲೇಶ್(24) ಬಂಧಿತರು.

ಆರೋಪಿಗಳಿಂದ ₹28 ಸಾವಿರ ಮೌಲ್ಯದ ಎಂಡಿಎಂಎ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದರು.

ಆರೋಪಿಗಳು ಕೇರಳದಿಂದ ನಗರಕ್ಕೆ ಮಾದಕ ವಸ್ತು ತರಿಸಿಕೊಂಡು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದರು.

ಕಾರಿನಲ್ಲಿ ಮಾದಕ ವಸ್ತು ಎಂಡಿಎಂಎ ಕ್ರಿಸ್ಟಲ್ ಮಾರಾಟ ಮಾಡುತ್ತಿದ್ದ ಅಹಮದ್ ಎಂಬಾತನನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹3.5 ಲಕ್ಷ ಮೌಲ್ಯದ 34 ಗ್ರಾಂ. ಎಂಡಿಎಂಎ ಕ್ರಿಸ್ಟಲ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ವಸತಿ ಶಾಲೆ ಕಟ್ಟಡದಿಂದ ಬಿದ್ದು ವಿದ್ಯಾರ್ಥಿಗೆ ಗಾಯ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ): ತಾಲ್ಲೂಕಿನ ಯಡವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ದ್ವಿತೀಯ ಪಿಯು ವಿದ್ಯಾರ್ಥಿ ಮನೀತ್ (17) ತಲೆಗೆ ತೀವ್ರ ಪೆಟ್ಟು ಬಿದ್ದು, ಪ್ರಜ್ಞಾಹೀನ ಸ್ಥಿತಿಯಲ್ಲಿ ಮೈಸೂರಿನ ಆಸ್ಪತ್ರೆಗೆ ದಾಖಲಾಗಿದ್ದಾನೆ.

ಕೊಳ್ಳೇಗಾಲ ತಾಲ್ಲೂಕಿನ ಮುಡಿಗುಂಡ ಗ್ರಾಮದ ವಿದ್ಯಾರ್ಥಿಯು ಸೋಮವಾರ ಮಧ್ಯರಾತ್ರಿ ಬಾಲಕರ ವಸತಿ ನಿಲಯದಿಂದ ಬಾಲಕಿಯರ ವಿದ್ಯಾರ್ಥಿ ನಿಲಯದ ಕಡೆಗೆ ಹೋಗಿ ಕಟ್ಟಡ ಹತ್ತುವ ಸಂದರ್ಭದಲ್ಲಿ ಕೆಳಗೆ ಬಿದ್ದಿದ್ದಾನೆ ಎನ್ನಲಾಗಿದೆ. ಬೆಳಿಗ್ಗೆ ವಿದ್ಯಾರ್ಥಿನಿಯರು ಗಮನಿಸಿ ಪ್ರಾಂಶುಪಾಲರಿಗೆ ಮಾಹಿತಿ ನೀಡಿದ್ದಾರೆ.

ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಆತನಿಗೆ ಬೇಗೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಿಲಯದಲ್ಲಿರುವ ಸಿ.ಸಿ.ಟಿ.ವಿ ವೈರ್ ಅನ್ನು ಸ್ವಿಚ್‌ನಿಂದ ತೆಗೆಯಲಾಗಿದೆ ಎಂದು ಅಲ್ಲಿನ ಸಿಬ್ಬಂದಿ ತಿಳಿಸಿದ್ದಾರೆ.

'ಸದ್ಯ ವಿದ್ಯಾರ್ಥಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಗೆ ನಿಖರ ಕಾರಣ ಗೊತ್ತಾಗಿಲ್ಲ' ಎಂದು ಪ್ರಭಾರ ಪ್ರಾಂಶುಪಾಲರಾದ ರಾಜೇಶ್ವರಿ ಮಾಹಿತಿ ನೀಡಿದರು.

ಬೇಗೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.


ಪೂರ್ವ ವಲಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಳವಡಿಸಿದ್ದ ಫ್ಲೆಕ್ಸ್, ಬ್ಯಾನರ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

ಪೂರ್ವ ವಲಯ: ಫ್ಲೆಕ್ಸ್ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ವಲಯ ವ್ಯಾಪ್ತಿಯಲ್ಲಿ ಬಿಬಿಎಂಪಿ ಕಾರ್ಯಾಚರಣೆ ನಡೆಸಿ, ಪಾದಚಾರಿ ಮಾರ್ಗಗಳ ಒತ್ತುವರಿ ಹಾಗೂ ಅನಧಿಕೃತವಾಗಿ ಅಳವಡಿಸಿದ್ದ ಫ್ಲೆಕ್ಸ್, ಬ್ಯಾನರ್‌ಗಳನ್ನು ತೆರವುಗೊಳಿಸಿದೆ.

ಅಂಗಡಿ, ಮುಂಗಟ್ಟುಗಳು ಹಾಗೂ ಬೀದಿಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿದ್ದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿತ್ತು. ಈ ಬಗ್ಗೆ ದೂರುಗಳು ಬಂದಿದ್ದವು.

ಪೂರ್ವ ವಲಯದ ಸಿ. ವಿ. ರಾಮನ್ ನಗರ ವ್ಯಾಪ್ತಿಯ ವಾರ್ಡ್ ಸಂಖ್ಯೆ 109, ಹಳೇ ವಾರ್ಡ್ ಸಂಖ್ಯೆ 50ರ ಕಸ್ತೂರಿನಗರದ 2ನೇ ಮುಖ್ಯರಸ್ತೆಯಲ್ಲಿ ಪಾದಚಾರಿ ರಸ್ತೆಗಳ ಮೇಲಿದ್ದ ತಳ್ಳುವ ಗಾಡಿಗಳನ್ನು ತೆರವುಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಯಿತು.

ಇದೇ ರಸ್ತೆಯಲ್ಲಿ ಅನಧಿಕೃತವಾಗಿ ಅಳವಡಿಸಲಾಗಿದ್ದ ಬ್ಯಾನರ್‌ಗಳನ್ನು ಸಹ ತೆರವುಗೊಳಿಸಲಾಯಿತು. ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಎಂಜಿನಿಯರ್‌ಗಳು, ಆರೋಗ್ಯ ಪರಿವೀಕ್ಷಕರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಪ್ರಕಾಶ್ ಸಿಪಿಎಂ ರಾಜ್ಯ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ


ಪ್ರಕಾಶ್

ತುಮಕೂರು: ನಗರದಲ್ಲಿ ನಡೆದ ಸಿಪಿಎಂ 24ನೇ ರಾಜ್ಯ ಸಮ್ಮೇಳನದಲ್ಲಿ 35 ಸದಸ್ಯರನ್ನು ಒಳಗೊಂಡ ಹೊಸ ರಾಜ್ಯ ಸಮಿತಿ ರಚಿಸಲಾಯಿತು. ರಾಜ್ಯ ಕಾರ್ಯದರ್ಶಿಯಾಗಿ ಕೆ.ಪ್ರಕಾಶ್ ಆಯ್ಕೆಯಾದರು.

ರಾಜ್ಯ ಕಾರ್ಯದರ್ಶಿ ಮಂಡಳಿಗೆ 12 ಸದಸ್ಯರನ್ನು ಆಯ್ಕೆ ಮಾಡಲಾಯಿತು. ಯು.ಬಸವರಾಜ, ಜಿ.ಸಿ.ಬಯ್ಯಾರೆಡ್ಡಿ, ಮೀನಾಕ್ಷಿ ಸುಂದರಂ, ಎಸ್. ವರಲಕ್ಷ್ಮಿ, ಗೋಪಾಲಕೃಷ್ಣ ಹರಳಹಳ್ಳಿ, ಸೈಯದ್ ಮುಜೀಬ್, ಯಾದವಶೆಟ್ಟಿ, ಮುನಿವೆಂಕಟಪ್ಪ, ಕೆ.ನೀಲಾ, ಕೆ.ಮಹಾಂತೇಶ್, ಚಂದ್ರಪ್ಪ ಹೊಸ್ಕೆರಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಗಣರಾಜ್ಯೋತ್ಸವ ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಜನವರಿ ತಿಂಗಳು ಪೂರ್ತಿ ಪುಸ್ತಕಗಳ ಖರೀದಿ ಮೇಲೆ ಶೇ 50ರಷ್ಟು ರಿಯಾಯಿತಿ ನೀಡಲಿದೆ.

ಆಸಕ್ತರು kuvempu bhashabharathi.karnataka.gov.in ಮೂಲಕ ಶೇ 50ರಷ್ಟು ರಿಯಾಯಿತಿಯಲ್ಲಿ ಪುಸ್ತಕಗಳನ್ನು ಖರೀದಿಸಬಹುದು ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಕ್ಷ್ಯಚಿತ್ರ ಪ್ರದರ್ಶನದಲ್ಲಿ ನೃತ್ಯ ಕಲಾವಿದೆ ವೀಣಾ ಮೂರ್ತಿ ವಿಜಯ್ ಅಭಿಮತ

'ರಂಗವೈಭೋಗ: ಪಠ್ಯಕ್ರಮದ ಭಾಗವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿನ ನೃತ್ಯ ಪ್ರಕಾರಗಳ ಪಠ್ಯಪುಸ್ತಕಗಳನ್ನು ನೋಡಿದರೆ ತಮಿಳುನಾಡಿನ ಶಿಲ್ಪಕಲೆ, ಸಂಗೀತ, ಭರತನಾಟ್ಯದ ಪರಂಪರೆಯ ಅಧ್ಯಯನವಿದೆ. ಇದನ್ನೇ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತೇವೆ. ಇಂದಿನಿಂದ 'ರಂಗವೈಭೋಗ'ವನ್ನು ಪಠ್ಯಪುಸ್ತಕವಾಗಿ ತೆಗೆದುಕೊಳ್ಳುವ ಅವಶ್ಯವಿದೆ' ಎಂದು ನೃತ್ಯ ಕಲಾವಿದೆ ವೀಣಾ ಮೂರ್ತಿ ವಿಜಯ್ ಹೇಳಿದರು.

ನಗರದ ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದಲ್ಲಿ ಕರುಣಾ ವಿಜಯೇಂದ್ರ ಪರಿಕಲ್ಪನೆಯ, ಸುನೀಲ್ ಪುರಾಣಿಕ್ ನಿರ್ದೇಶನದ ರಾಷ್ಟ್ರಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರ 'ರಂಗವೈಭೋಗ–ದೇವಾಲಯ ನೃತ್ಯ ಪರಂಪರೆ'ಯ ಪ್ರದರ್ಶನ ಸೋಮವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವೀಣಾ, 'ಈ ಸಾಕ್ಷ್ಯಚಿತ್ರದ ಮೂಲಕ ಕರ್ನಾಟಕದ ನೃತ್ಯ ಪರಂಪರೆಯನ್ನು ಅರಿಯಲು ಸಾಧ್ಯ. ಕರ್ನಾಟಕದಲ್ಲಿ ರಂಗವೈಭೋಗ ಎನ್ನುವ ನೃತ್ಯಪ್ರಕಾರ ಇತ್ತು ಎನ್ನುವುದನ್ನು ರಾಷ್ಟ್ರಪ್ರಶಸ್ತಿ ಊರ್ಜಿತಗೊಳಿಸಿದೆ. ಇದನ್ನು ವಿದ್ಯಾರ್ಥಿಗಳಿಗೆ ಹೆಮ್ಮೆಯಿಂದ ತೋರಿಸುವ ಜವಾಬ್ದಾರಿ ನಮ್ಮ ಮೇಲಿದೆ. ಸಾಂಸ್ಕೃತಿಕವಾಗಿ ಕರ್ನಾಟಕ ಎಷ್ಟು ಶ್ರೀಮಂತವಾಗಿತ್ತು ಎನ್ನುವುದನ್ನು ಈ ಮೂಲಕ ಕಂಡುಕೊಳ್ಳಬಹುದು' ಎಂದರು.


'ರಂಗವೈಭೋಗ' ಸಾಕ್ಷ್ಯಚಿತ್ರ ಪ್ರದರ್ಶನದಲ್ಲಿ ವೀಣಾ ಮೂರ್ತಿ ವಿಜಯ್, ಜಿ.ಎಲ್.ಭಟ್, ಎಸ್.ವಿ.ವೆಂಕಟೇಶಯ್ಯ, ಅಭಿಜಿತ್ ಗೋಖಲೆ ಮತ್ತು ಪ್ರಕಾಶ್ ಬೆಳವಾಡಿ ಪಾಲ್ಗೊಂಡರು ಪ್ರಜಾವಾಣಿ ಚಿತ್ರ

'ಶಾಸ್ತ್ರೀಯ ಕಲೆಗಳನ್ನು ಸಾಕ್ಷೀಯವಾಗಿ ಇಟ್ಟ ದೇಶ ಭಾರತ. ಪ್ರಾದೇಶಿಕ ಸಂಸ್ಕೃತಿಯನ್ನು ತಿಳಿಯಬೇಕಾದರೆ ಆ ಭಾಗದ ಕಲೆಯನ್ನು ನೋಡಿದಾಗ ಅಲ್ಲಿಯ ಸಂಸ್ಕೃತಿ ಎಷ್ಟು ಶ್ರೀಮಂತವಾಗಿತ್ತು ಎಂದು ತಿಳಿದುಕೊಳ್ಳಬಹುದು. ದೇಶೀಯ ಕಲೆಗಳ ಬಗ್ಗೆ ಯಾವ ತುಡಿತವೂ ಇಂದಿನವರಲ್ಲಿ ಇಲ್ಲ. ಆದರೆ ಸಾಗರ್ ಪುರಾಣಿಕ್ ಈ ಸಾಕ್ಷ್ಯಚಿತ್ರ ನಿರ್ಮಾಣ ಮಾಡುವ ಮೂಲಕ ಭಾರತಕ್ಕೆ ಕೀರ್ತಿ ತಂದಿದ್ದಾರೆ. ದೇಶದ ಶ್ರೇಷ್ಠ ಕಲಾ ಪ್ರಕಾರಗಳನ್ನು ಉಳಿಸುವುದು, ಬೆಳೆಸುವುದು ಭಾರತೀಯರ ಕರ್ತವ್ಯ ಹಾಗೂ ಜವಾಬ್ದಾರಿ' ಎಂದು ಶಿಲ್ಪಿ ಜಿ.ಎಲ್. ಭಟ್ ಹೇಳಿದರು.

ನಟ ಪ್ರಕಾಶ್ ಬೆಳವಾಡಿ ಮಾತನಾಡಿ, 'ನಮ್ಮಲ್ಲಿ ಕೀಳರಿಮೆ ಹೆಚ್ಚು. ನಮ್ಮ ವಾಸ್ತುಶೈಲಿಯ ಯಾವ ಕಟ್ಟಡವನ್ನೂ ಕಟ್ಟುತ್ತಿಲ್ಲ. ಹೊರ ದೇಶದ ಮಾದರಿಯೇ ಬೇಕು. ನಮ್ಮ ಸಂಸ್ಕೃತಿಯ ಶಕ್ತಿಯ ಬಗ್ಗೆ ನಮಗೇ ನಾಚಿಕೆಯಾಗುವಂತಹ ಮನಃಸ್ಥಿತಿಯನ್ನು ವಿದೇಶಿಯರು ಹುಟ್ಟಿಸಿದ್ದಾರೆ. ನಮ್ಮ ಇತಿಹಾಸವನ್ನೂ ಅವರೇ ಹೇಳುವಂತಾಗಿದೆ. ಇಂತಹ ಸಾಕ್ಷ್ಯಚಿತ್ರಗಳು ಎಲ್ಲರನ್ನೂ ತಲುಪುವಂತಾಗಬೇಕು' ಎಂದರು.

ಸಂಸ್ಕಾರ ಭಾರತಿಯ ಅಖಿಲ ಭಾರತ ಸಂಘಟನಾ ಕಾರ್ಯದರ್ಶಿ ಅಭಿಜಿತ್ ಗೋಖಲೆ 'ರಂಗವೈಭೋಗ' ಸಾಕ್ಷ್ಯಚಿತ್ರವನ್ನು ಪುರಾಣಿಕ್ ಪ್ರೊಡಕ್ಷನ್ಸ್ ಯುಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆಗೊಳಿಸಿದರು.

ಭಾರತೀಯ ಪುರಾತತ್ವ ಇಲಾಖೆಯ ನಿವೃತ್ತ ಪ್ರಾದೇಶಿಕ ನಿರ್ದೇಶಕ ಎಸ್.ವಿ.ವೆಂಕಟೇಶಯ್ಯ, ಸುನೀಲ್ ಪುರಾಣಿಕ್, ನಿರ್ಮಾಪಕ ಸಾಗರ್ ಪುರಾಣಿಕ್ ಉಪಸ್ಥಿತರಿದ್ದರು.

ವಿಚಾರಣೆ ರದ್ದುಗೊಳಿಸಿದ ಹೈಕೋರ್ಟ್

44 ವರ್ಷ ಹಳೆಯ ಪ್ರಕರಣಕ್ಕೆ ಮುಕ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಹೈಕೋರ್ಟ್‌ನ ಕ್ರಿಮಿನಲ್ ಮೊಕದ್ದಮೆಗಳಲ್ಲೇ ಅತ್ಯಂತ ಹಳೆಯದಾದ 44 ವರ್ಷಗಳ ಹಿಂದಿನ ಪ್ರಕರಣವೊಂದನ್ನು ವಿಲೇವಾರಿ ಮಾಡಲಾಗಿದ್ದು, ಈ ಸಂಬಂಧ ಬೆಂಗಳೂರಿನ 68 ವರ್ಷದ ವ್ಯಕ್ತಿಯೊಬ್ಬರ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸಲಾಗಿದೆ.


ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸುವಂತೆ ಕೋರಿ ಮುತ್ಯಾಲ ನಗರದ ನಿವಾಸಿಯಾದ ಚಂದ್ರ ಅಲಿಯಾಸ್ ಚಂದ್ರಶೇಖರ ಭಟ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿದಾರ ಚಂದ್ರ ವಿರುದ್ಧದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯನ್ನು ರದ್ದುಗೊಳಿಸಿ ಆದೇಶಿಸಿದೆ.


'ಉಡುಪಿ ಪೊಲೀಸ್ ಠಾಣೆಯಲ್ಲಿ 1980ರಲ್ಲಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವೊಂದರಲ್ಲಿ ಅರ್ಜಿದಾರ ಚಂದ್ರ ಅವರನ್ನೂ ಆರೋಪಿಯನ್ನಾಗಿ ಮಾಡಲಾಗಿತ್ತು. ಆದರೆ, ಅವರಿಗೆ ಪೊಲೀಸ್ ಠಾಣೆಯಿಂದ ಯಾವುದೇ ಸಮನ್ಸ್ ಅಥವಾ ನೋಟಿಸ್ ಬಂದಿರಲಿಲ್ಲ. ಅಷ್ಟಕ್ಕೂ ಪ್ರಕರಣದ ಬಗ್ಗೆ ಅವರಿಗೆ ಗೊತ್ತೇ ಇರಲಿಲ್ಲ. ಚಂದ್ರ ತಲೆತಪ್ಪಿಸಿಕೊಂಡಿದ್ದರು ಎಂಬ ಪೊಲೀಸರ ವಾದ ಸುಳ್ಳು ಮತ್ತು ಈ ಪ್ರಕರಣದ ಇನ್ನಿಬ್ಬರು ಆರೋಪಿಗಳನ್ನು ಈಗಾಗಲೇ ಖುಲಾಸೆಗೊಳಿಸಲಾಗಿದೆ' ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ನ್ಯಾಯಪೀಠ ಎತ್ತಿಹಿಡಿದಿದೆ.

'ಪ್ರಕರಣದಲ್ಲಿ ಖುಲಾಸೆಗೊಂಡಿರುವ ಇನ್ನಿಬ್ಬರು ಆರೋಪಿಗಳ ವಿರುದ್ಧ ಯಾವ ಅಪರಾಧಿಕ ಕಲಂಗಳಡಿ ದೋಷಾರೋಪ ನಿಗದಿಪಡಿಲಾಗಿತ್ತೋ ಅಂತಹುದೇ ಆರೋಪಗಳನ್ನೂ ಚಂದ್ರ ಅವರ ವಿರುದ್ಧ ಹೊರಿಸಲಾಗಿದೆ. ಹೀಗಾಗಿ, ಅರ್ಜಿದಾರರನ್ನು ದೋಷಾರೋಪ ಪಟ್ಟಿಯಿಂದ ವಿಭಜಿಸಿ ಪುನಃ ವಿಚಾರಣೆಗೆ ಒಳಪಡಿಸುವುದರಲ್ಲಿ ಅರ್ಥವಿಲ್ಲ. ನ್ಯಾಯಾಂಗದ ಅಮೂಲ್ಯ ಸಮಯವನ್ನು ಉಳಿಸಬೇಕೆಂದರೆ ಇಂತಹ ಪ್ರಕರಣವನ್ನು ರದ್ದುಗೊಳಿಸುವುದೇ ಸೂಕ್ತ' ಎಂದು ನ್ಯಾಯಪೀಠ ತಿಳಿಸಿದೆ.

ಚಂದ್ರ ಅವರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 143, 147, 148, 447, 307, 326, 302 ಮತ್ತು 149ರ ಅಡಿಯಲ್ಲಿ ಪರಿಗಣನಾರ್ಹ ಅಪರಾಧಿಕ ಕಲಂಗಳಡಿ ಪ್ರಕರಣ ದಾಖಲಿಸಲಾಗಿತ್ತು. ಈ ಕುರಿತಂತೆ ಉಡುಪಿಯ ಎರಡನೇ ಹೆಚ್ಚುವರಿ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ವಿಚಾರಣೆಯನ್ನು ಮುಂದುವರಿಸಲಾಗಿತ್ತು. ಚಂದ್ರ ವಿರುದ್ಧ ಹೈಕೋರ್ಟ್ ವಕೀಲ ಕೆ.ರವಿಶಂಕರ್ ವಾದ ಮಂಡಿಸಿದ್ದರು.

ತಂತ್ರಜ್ಞಾನ





ಕರಡಿಯ ಕೂದಲಿನ ನಕಲು ಈ ನೂಲು


ನೇಸರ ಕಾಡನಕುಪ್ಪೆ

ಧ್ರುವಪ್ರದೇಶಗಳಲ್ಲಿ ಚಳಿಯ ತೀವ್ರತೆಯ ಬಗ್ಗೆ ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿಲ್ಲ. ಅತೀವ ಶೀತ ಅಲ್ಲಿ ಜೀವಿಗಳಿಗೆ ವಾಸಯೋಗ್ಯವಲ್ಲದ ವಾತಾವರಣವನ್ನು ನಿರ್ಮಾಣ ಮಾಡಿರುತ್ತದೆ. ಆದರೆ, ಹಿಮಕರಡಿಗೆ ಈ ಶೀತ ದೊಡ್ಡ ವೈರಿಯೇನಲ್ಲ. ಅದರ ಒತ್ತಾದ ಕೂದಲುಗಳನ್ನು ಶೀತ ಸೀಳಿಕೊಂಡ ಒಳಹೋಗಲಾರದೇ ಇರುವ ಕಾರಣ, ಹಿಮಕರಡಿಯ ಮೈ ಬೆಚ್ಚಗೇ ಇರುತ್ತದೆ! ಇದನ್ನು ಗಮನಿಸಿರುವ ವಿಜ್ಞಾನಿಗಳು ಬೆಚ್ಚನೆಯ ಉಡುಪಿಗೆ ಸ್ಫೂರ್ತಿ ಪಡೆದು ಹೊಸ ಬಗೆಯ ನೂಲನ್ನು ತಯಾರಿಸಿದ್ದಾರೆ. ಈ ನೂಲಿನಿಂದ ಬಟ್ಟೆ ತಯಾರಿಸಿದರೆ ಮೈಗೆ ಚಳಿಯೇ ತಾಗದಂತೆ!

ಚೀನಾದ ಹ್ಯಾಂಗ್ಝೋದ ಜೆಯಿಯಾಂಗ್ ವಿಶ್ವವಿದ್ಯಾಲಯದ ಹೌ ಬಾಯ್ ಹಾಗೂ ಅವರ ವಿಜ್ಞಾನಿಗಳ ತಂಡದ ಆಶ್ರಯದಲ್ಲಿ ಈ ಸಂಶೋಧನೆ ನಡೆದಿದೆ. ಹಿಮಕರಡಿಯ ಕೂದಲಿನ ಮಾದರಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಅದೇ ಮಾದರಿಯಲ್ಲಿ ಕೃತಕವಾದ ನೂಲನ್ನು ತಯಾರಿಸಿ ಅದರಿಂದ ಬಟ್ಟೆಯನ್ನೂ ತಯಾರಿಸಿದ್ದಾರೆ. ಅದರ ಬಗ್ಗೆ ಇಲ್ಲೊಂದು ಸರಳ ವಿಶ್ಲೇಷಣೆಯಿದೆ.

ಪ್ರಾಣಿಮೂಲದ ಕೂದಲಿನಿಂದ ಬಟ್ಟೆ ತಯಾರಿಸುವುದು ಮನುಷ್ಯನಿಗೆ ಹೊಸತೇನಲ್ಲ. ಕುರಿಯ ಉಣ್ಣೆಯಿಂದ ನೂಲು, ದಾರ, ಬಟ್ಟೆಯನ್ನು ಮಾಡುವುದು ನಮಗೆ ತಿಳಿದೇ ಇದೆ. ಕುರಿಯ ಉಣ್ಣೆಯಿಂದ ಮಾಡಿದ ಸ್ವೆಟರನ್ನು ಚಳಿಯಲ್ಲಿ ಧರಿಸುವುದು ಅದೆಷ್ಟು ಹಿತಕರ ಅಲ್ಲವೇ? ಅಂತೆಯೇ, ಕೂದಲು ಅಲ್ಲದೇ ಇದ್ದರೂ, ರೇಷ್ಮೆಹುಳುವಿನ ದೇಹಜನ್ಯವಾದ ಜೊಲ್ಲಿನಿಂದ ತಯಾರಾಗುವ ನೂಲಿನಿಂದ ಸಿದ್ಧಪಡಿಸಿದ ಬಟ್ಟೆಗಳು ಸಹ ಬೆಚ್ಚನೆಯ ಆಹ್ಲಾದಕರ ಅನುಭವವನ್ನು ನೀಡುತ್ತದೆ. ಬೆಚ್ಚನೆಯ ವಾತಾವರಣದಲ್ಲಿ ತಣ್ಣನೆಯ ಅನುಭವವನ್ನೂ ರೇಷ್ಮೆಯ ನೂಲುಗಳು ನೀಡುವುದು ಮತ್ತೊಂದು ವಿಶೇಷ.

ನೇರವಾಗಿ ಪ್ರಾಣಿಗಳ ಚರ್ಮವನ್ನೇ ಬಳಸಿ ಬಟ್ಟೆ ಮಾಡುವುದೂ ಇದೆ. ಇವಿಷ್ಟೇ ಅಲ್ಲದೇ, ಸಾಕಷ್ಟು ಬೇರೆಯದೇ ರೀತಿಯ ಉದಾಹರಣೆಗಳನ್ನೂ ನೀಡಬಹುದು. ಆದರೂ, ಪ್ರಾಣಿಜನ್ಯವಸ್ತುಗಳನ್ನು ಮನುಷ್ಯನು ಬಳಸುವುದು ಈಗ ಚರ್ಚಾಸ್ಪದ ವಿಷಯವಾಗಿದೆ. ಪ್ರಾಣಿಜನ್ಯವಸ್ತುಗಳನ್ನು ಬಳಸುವುದು ಅಮಾನವೀಯವೆಂದೂ, ಅದು ಕೆಲವು ಜಾತಿಯ ಪ್ರಾಣಿಗಳ ನಾಮಾವೇಷಕ್ಕೂ ಕಾರಣವಾಗುವುದೆಂದೂ ವಿಶ್ಲೇಷಿಸಲಾಗುತ್ತಿದೆ. ಹೀಗೆ ಪ್ರಾಣಿಗಳ ಸಂತತಿಯ ನಾಶವನ್ನು ತಡೆಗಟ್ಟಲು ನೆರವಾಗುವಂಥ ನೀತಿನಿಯಮಗಳೂ ಅಂತರರಾಷ್ಟ್ರೀಯ ಮಟ್ಟದಲ್ಲಿ ರೂಪುಗೊಂಡಿವೆ. ಈ ಹಿನ್ನೆಲೆಯಲ್ಲಿ ಈಗ ಚೀನಾದಲ್ಲಿ ನಡೆದಿರುವ ಈ ಸಂಶೋಧನೆಯು ಮಹತ್ವವನ್ನು ಪಡೆದಿದೆ. ಪ್ರಾಣಿಗಳ ಯಾವುದೇ ಬಗೆಯ ಉತ್ಪನ್ನಗಳನ್ನು ಬಳಸದೆಯೇ, ಅವುಗಳ ಗುಣಲಕ್ಷಣವನ್ನು ಹೋಲುವ ಉತ್ಪನ್ನಗಳನ್ನು ನಿರ್ಮಿಸಬಹುದೇ ಎಂಬುದೇ ಈ ಪ್ರಯೋಗವಾಗಿದೆ. ಈ ಪ್ರಯೋಗಕ್ಕೆ ಭಾಗಶಃ ಯಶಸ್ಸೂ ಸಿಕ್ಕಿದೆ.



ಏನಿದು ಸಂಶೋಧನೆ?

ಹಿಮಕರಡಿಗಳ ಮೈಮೇಲಿನ ಕೂದಲು ಬಹಳ ಒತ್ತಾಗಿರುತ್ತದೆ; ಅದು ಚಳಿಯನ್ನು ಒಳಬಿಡುವುದಿಲ್ಲ. ಹಾಗಾದರೆ, ಅದರ ಕಾರ್ಯನಿರ್ವಹಣೆ ಹೇಗೆ – ಎಂಬ ಸಂಶೋಧನೆಯೇ ಈಗ ನಡೆದಿರುವುದು.

ಹಿಮಕರಡಿಯ ಕೂದಲನ್ನು ಅಡ್ಡವಾಗಿ ಸೀಳಿ ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದರೆ, ಅದರಲ್ಲಿ ಎರಡು ಪ್ರಮುಖ ಭಾಗಗಳನ್ನು ಗುರುತಿಸಬಹುದು. ಒಂದು, ಮೃದುವಾದ ಮೇಲ್ಮೈ; ಮತ್ತೊಂದು, ಒಳಭಾಗದಲ್ಲಿರುವ ಗಟ್ಟಿಯಾದ ತಿರುಳು. ಇದರ ಈ ಗುಣವೇ ಶಾಖವನ್ನು ಕೂದಲು ತನ್ನ ಮೂಲಕ ಬಿಟ್ಟುಕೊಡದಿರುವಂತೆ ನೋಡಿಕೊಳ್ಳುವುದು. ಈ ಸರಳ ರಚನೆಯನ್ನು ಅನುಕರಿಸಿರುವ ಹೌ ಬಾಯ್ ಹಾಗೂ ಅವರ ವಿಜ್ಞಾನಿಗಳ ತಂಡವು, ದಾರವನ್ನು ಅತೀವ ಶೀತಕ್ಕೆ (ನೈಟ್ರೋಜನ್ ಕೋಲ್ಡ್) ಒಡ್ಡಿದ್ದಾರೆ. ಆಗ ಅದು ಗಟ್ಟಿಯಾಗುತ್ತದೆ. ಬಳಿಕ, ಅದಕ್ಕೆ ಥರ್ಮೋಪ್ಲಾಸ್ಟಿಕ್ ಪಾಲಿಯೂರಥೇನ್ ಎಂಬ ಸಾಮಗ್ರಿಯಿಂದ ಒಂದು ಪದರವನ್ನು ಲೇಪಿಸಿದ್ದಾರೆ. ಈ ರೀತಿಯ ಪ್ರಕ್ರಿಯೆಗೆ ಒಳಗಾಗುವ ದಾರವನ್ನು ಬಳಿಕ ಕೊಠಡಿಯ ಉಷ್ಣಾಂಶಕ್ಕೆ ಬರುವವರೆಗೂ ಕಾದು, ಅದನ್ನು ಸ್ವೆಟರ್ ಮಾದರಿಯ ಅಂಗಿಯಾಗಿ ನೇಯ್ದಿದ್ದಾರೆ.

ಈ ಪ್ರಯೋಗವು ಹಲವು ಕುತೂಹಲಕಾರಿ ಉತ್ತರಗಳನ್ನು ನೀಡಿವೆ. ಕುರಿಯ ಉಣ್ಣೆಯಿಂದ ನಿರ್ಮಿಸಿದ ಸ್ವೆಟರ್‌ಗಿಂತ ಸುಮಾರು ಐದು ಪಟ್ಟು ಹೆಚ್ಚು ಚಳಿಯನ್ನು ತಡೆದುಕೊಳ್ಳುವ ಗುಣವನ್ನು ಈ ಹೊಸ ಬಗೆಯ ನೂಲಿನ ಸ್ವೆಟರ್ ತೋರಿಸಿದೆ. ಅಂದರೆ, ಇದು ಹೆಚ್ಚು ಬಲಿಷ್ಠವೂ ಸಮರ್ಥವೂ ಆದ ನೂಲೆಂದು ಸಾಬೀತಾಗಿದೆ. ಈ ಬಗೆಯ ಬಟ್ಟೆಗಳನ್ನು ಅತೀವ ಶೀತವಿರುವ ಪ್ರದೇಶಗಳಲ್ಲಿ ಧರಿಸಿದರೆ ಚಳಿಯಿಂದ ರಕ್ಷಣೆಯನ್ನು ಪಡೆಯಬಹುದು ಎಂಬ ವಾದವನ್ನು ಚೀನಾದ ಈ ವಿಜ್ಞಾನಿಗಳು ಮಂಡಿಸಿದ್ದಾರೆ.

ಸಾಮಾನ್ಯವಾಗಿ ಚಳಿಯ ಸಮರ್ಥ ನಿರ್ವಹಣೆಗೆ ಬಹು ಪದರಗಳ ಉಡುಪುಗಳನ್ನು ಧರಿಸಬೇಕು ಎಂದು ವಿಜ್ಞಾನಿಗಳು ಹೇಳುತ್ತಾರೆ. ಅಂದರೆ, ಒಂದು ದಪ್ಪನೆಯ ಬಟ್ಟೆಯ ಬದಲಿಗೆ, ಒಂದರ ಮೇಲೊಂದರಂತೆ ತೆಳುವಾದ ಬಟ್ಟೆಗಳನ್ನೇ ಧರಿಸಿದರೆ ಶಾಖ ಒಳಗೆ ಇಳಿಯುವುದಿಲ್ಲ. ಈ ವಿಜ್ಞಾನವನ್ನೇ ಹೌ ಬಾಯ್ ಅನುಮೋದಿಸಿದ್ದಾರೆ. ಈ ಹೊಸ ನೂಲಿನಿಂದ ತಯಾರಾದ ಬಟ್ಟೆಗಳನ್ನು ಸಾಧ್ಯವಾದಷ್ಟು ತೆಳುವಾಗಿ ನಿರ್ಮಿಸಿ, ಬಹು ಪದರಗಳಲ್ಲಿ ಧರಿಸಿದರೆ ಅತ್ಯಂತ ಆಹ್ಲಾದಕರವಾದ ಬೆಚ್ಚನೆಯ ಅನುಭವವನ್ನು ಪಡೆಯಬಹುದು ಎಂದಿದ್ದಾರೆ. ಮಾತ್ರವಲ್ಲ, ಇದು ಪ್ರಾಣಿಜನ್ಯ ನೂಲಿಗಿಂತ ಕಡಿಮೆ ತೂಕವನ್ನು ಹೊಂದಿದೆ. ಹಾಗಾಗಿ,ಈ ಬಟ್ಟೆಗಳನ್ನು ಧರಿಸಿದರೆ ದೇಹಕ್ಕೆ ತೂಕದ ಹೊರೆ ಇರುವುದಿಲ್ಲ. ಅಲ್ಲದೇ, ಇದು ಕೃತಕ ನೂಲು ಆಗಿರುವ ಕಾರಣ ಪ್ರಾಣಿಹಿಂಸೆಯೂ ಆಗುವುದಿಲ್ಲವಷ್ಟೆ. ❖

ಮನುಷ್ಯನ ಒಡನಾಟಕ್ಕೆ ಹ್ಯೂಮನಾಯ್ಡ್‌ಗಳು



ಕೃಷ್ಣ ಭಟ್

ಮುಂದಿನ ನೂರು ವರ್ಷಗಳಲ್ಲಿ ಇತಿಹಾಸಕಾರರು ವಿಶ್ಲೇಷಣೆ ಮಾಡುವಾಗ, ಮನುಷ್ಯನಂತೆಯೇ ನಡೆಯುವ, ಮಾತನಾಡುವ, ಕೆಲಸ ಮಾಡುವ ಹಾಗೂ ಮನುಷ್ಯನಂತೆಯೇ ಕಾಣಿಸುವ ಹ್ಯೂಮನಾಯ್ಡ್‌ಗಳು ಹುಟ್ಟಿದ ಕಾಲ 2024 ಎಂದು ವ್ಯಾಖ್ಯಾನಿಸಬಹುದೇನೋ!

2024ನೇ ಇಸ್ವಿಯು ಆರ್ಟಿಫಿಶಿಯಲ್ ಇಂಟಲಿಜೆನ್ಸ್, ಮಟೀರಿಯಲ್ ಮತ್ತು ವಿನ್ಯಾಸ – ಇವೆಲ್ಲವೂ ಒಂದು ಸುಧಾರಿತ ಹಂತವನ್ನು ತಲುಪಿದ ವರ್ಷ ಎಂದು ಹೇಳಲಾಗುತ್ತದೆ. ಈ ಎಲ್ಲ ಅಂಶಗಳೂ ಅಗತ್ಯವಿರುವ ಹ್ಯೂಮನಾಯ್ಡ್ ರೋಬೊಗಳು ಕೂಡ ಇದೇ ಹೊತ್ತಿಗೆ ಸುಧಾರಿತ ರೂಪವನ್ನು ಕಂಡುಕೊಂಡವು. ಪರಿಕಲ್ಪನೆಯಿಂದ ವಾಸ್ತವ ಜಗತ್ತಿಗೆ ಇವು ಕಾಲಿಡುತ್ತಿವೆ. ವಿವಿಧ ಉದ್ಯಮಗಳಲ್ಲಿ ಇವುಗಳ ಬಳಕೆ ಶುರುವಾಗಿದೆ. ಗೋಲ್ಡ್‌ಮನ್ ಸ್ಯಾಕ್ಸ್ ಅಂದಾಜಿನ ಪ್ರಕಾರ 2035ರ ವೇಳೆಗೆ ಈ ಹ್ಯೂಮನಾಯ್ಡ್ ರೋಬೋಟಿಕ್‌ನ ಮಾರುಕಟ್ಟೆ ಸುಮಾರು ನಾಲ್ಕು ಸಾವಿರ ಕೋಟಿ ಡಾಲರ್‌ಗಳಿಗೆ ತಲುಪಬಹುದು. ಸದ್ಯ ಇದು ಕೇವಲ ಆರು ನೂರು ಕೋಟಿ ಡಾಲರ್ ಮಾರುಕಟ್ಟೆಯಾಗಿ ನಿಂತಿದೆ.

ಈಗಾಗಲೇ ಸಣ್ಣ ಸಣ್ಣ ಹ್ಯೂಮನಾಯ್ಡ್‌ಗಳು ಜನರ ಆಸಕ್ತಿಯನ್ನು ಕೆರಳಿಸುತ್ತಿವೆ. ಟೆಸ್ಲಾ ಸಿಇಒ ಎಲಾನ್ ಮಸ್ಕ್ ಮುಂದಿನ ವರ್ಷ 'ಆಪ್ಟಿಮಸ್' ಎಂಬ ಹೆಸರಿನ ಒಂದು ಸಾವಿರ ಹ್ಯೂಮನಾಯ್ಡ್ ರೋಬೊಗಳನ್ನು ಉತ್ಪಾದನೆ ಮಾಡುತ್ತೇನೆ ಎಂದಿದ್ದಾರೆ. ಒಂದು ಅಂದಾಜಿನ ಪ್ರಕಾರ, 2040ರ ವೇಳೆಗೆ ಮನುಷ್ಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹ್ಯೂಮನಾಯ್ಡ್‌ಗಳು ಇರುತ್ತವೆ!



ಹ್ಯೂಮನಾಯ್ಡ್‌ಗಳ ಅಗತ್ಯ ಉಂಟಾಗಿರುವುದೇ ಉದ್ಯಮಗಳಲ್ಲಿ. ಬಹುತೇಕ ದೊಡ್ಡ ದೊಡ್ಡ ಕಂಪೆನಿಗಳಲ್ಲಿ ಕೆಲಸಗಾರರ ಕೊರತೆ ಇದೆ. ಸಾಮಾನ್ಯ ಕೆಲಸವನ್ನು ಮಾಡುವುದಕ್ಕೂ ಈ ಕಂಪೆನಿಗಳ ಬಳಿ ಕುಶಲ ಕೆಲಸಗಾರರಿಲ್ಲ. ಸಿಕ್ಕರೂ, ಅವರ ಕೂಲಿ ವೆಚ್ಚ ಹೆಚ್ಚಳವಾಗಿದೆ. ಅಂಥ ಕಡೆ ಈ ಹ್ಯೂಮನಾಯ್ಡ್‌ಗಳು ಕೆಲಸಕ್ಕೆ ಬರುತ್ತವೆ. ಈ ಹಿಂದೆ ಸಾಮಾನ್ಯ ಕೆಲಸ ಮಾಡುವುದಕ್ಕೂ ಹೆಣಗಾಡುತ್ತಿದ್ದ, ತೀರಾ ಸಣ್ಣ ಪುಟ್ಟ ಕೆಲಸಕ್ಕಷ್ಟೇ ಸೀಮಿತವಾಗಿದ್ದ ರೋಬೊಗಳು ಈಗ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮತ್ತು ಎಲ್‌ಎಲ್‌ಎಂ ಕಾರಣದಿಂದ ತುಂಬಾ ಸುಧಾರಣೆ ಕಂಡಿವೆ. ಸಂಕೀರ್ಣ ಕೆಲಸವನ್ನೂ ಸುಲಭವಾಗಿ ನಿರ್ವಹಿಸುವ ಸಾಮರ್ಥ್ಯವನ್ನು ಪಡೆದುಕೊಂಡಿವೆ.

ಏನಿದು ಹ್ಯೂಮನಾಯ್ಡ್?

ಸಾಮಾನ್ಯವಾಗಿ ಹ್ಯೂಮನಾಯ್ಡ್ ಎಂದರೆ ಮಾನವನಂತೆಯೇ ಹೋಲುವ ಒಂದು ರೋಬೊ. ಇದಕ್ಕೆ ಕಾಲು, ಸೊಂಟ, ಕೈಗಳು ಮತ್ತು ತಲೆಯ ಆಕಾರ, ಮುಖದ ಆಕಾರ ಇರುತ್ತವೆ. ನಾವು 'ದಿ ಟರ್ಮಿನೇಟರ್'ನಂತಹ ಸಿನಿಮಾಗಳಲ್ಲಿ ಕಾಣುವ ರೋಬೊಗಳನ್ನೇ ಇವು ಹೋಲುತ್ತವೆ. ಇವುಗಳ ಆಕಾರ ವಿಭಿನ್ನವಾಗಿರಬಹುದಷ್ಟೆ. ಬೋಸ್ಟನ್ ಡೈನಾಮಿಕ್ಸ್ ಅಭಿವೃದ್ಧಿಪಡಿಸಿದ ಅಟ್ಲಾಸ್ ರೋಬೊಗಳಿಗೆ ಮುಖದ ರೂಪವಿದೆ. ಆದರೆ, ಅದರ ಮೇಲೆ ಕ್ಯಾಮೆರಾ ಇದೆ. ಹಾಂಕಾಂಗ್ ಮೂಲದ ಹ್ಯಾನ್ಸನ್ ರೋಬೊ ಕಂಪೆನಿಯು ಸೋಫಿಯಾ ಮತ್ತು ಡೆಸ್ಡೆಮೋನಾ ಎಂಬ ಎರಡು ರೋಬೊಗಳನ್ನು ನಿರ್ಮಾಣ ಮಾಡಿದ್ದು, ಯುಕೆ ಮೂಲದ ಇಂಜಿನಿಯರ್ಡ್ ಆರ್ಟ್ಸ್ ನಿರ್ಮಾಣ ಮಾಡಿದ ರೋಬೊಗಳಿಗೂ ಮುಖಗಳಿವೆ.

ಈ ಹಿಂದೆ ರೋಬೊಗಳನ್ನು ನಿರ್ಮಾಣ ಮಾಡುವಾಗ ಮನುಷ್ಯನ ಆಕಾರವನ್ನು ಕೊಡುವುದಕ್ಕೆ ಹೆಚ್ಚಿನ ಒತ್ತನ್ನು ನೀಡುತ್ತಿರಲಿಲ್ಲ. ಆದರೆ, ಇತ್ತೀಚೆಗೆ ಮನುಷ್ಯನ ಆಕಾರವನ್ನು ಕೊಟ್ಟು ರೋಬೊಗಳನ್ನು ಸಿದ್ಧಪಡಿಸುವಲ್ಲಿ ಹೆಚ್ಚಿನ ಮುತುವರ್ಜಿಯನ್ನು ವಹಿಸಿರುವುದು ಕಂಡುಬರುತ್ತಿದ್ದು, ಇದು ಇಡೀ ರೋಬೊಟಿಕ್ಸ್ ಉದ್ಯಮಕ್ಕೆ ಹೊಸ ಆಯಾಮವನ್ನು ನೀಡಿದೆ. ರೋಬೊಗಳ ಪರಿಕಲ್ಪನೆ ನಮಗೆ ಸೈನ್ಸ್ ಫಿಕ್ಷನ್ ಸಿನಿಮಾಗಳಲ್ಲಿ ಪರಿಚಯವಾಗಿದೆ. ಕಾಲ್ಪನಿಕವಾಗಿ, ಅದಕ್ಕೂ ಹಿಂದಿನಿಂದಲೇ ಕಥೆಗಳಲ್ಲಿ ನಾವು ಇವನ್ನು ನೋಡಿದ್ದೇವೆ. ಮಾನವ ನಾಗರಿಕತೆಗೆ ಒಗ್ಗಿಕೊಂಡಾಗಿನಿಂದಲೇ ಬಹುಶಃ ರೋಬೊಗಳನ್ನು ರೂಪಿಸುವ ಪ್ರಯತ್ನ ನಡೆಸುತ್ತಿದ್ದಾನೆ. ಆದರೆ, ಅದರಲ್ಲಿ ಆ ಕಾಲದ ಲಭ್ಯ ತಂತ್ರಜ್ಞಾನಗಳನ್ನು ಬಳಸಿಕೊಂಡು ಯಶಸ್ವಿಯೂ ಆಗಿದ್ದಾನೆ.

ಎಐ ಹೊಸ ಅಸ್ತ್ರ

ಎಐನಲ್ಲಿ ಕಳೆದ ಎರಡು ವರ್ಷಗಳಲ್ಲಿ ಅಪಾರ ಸುಧಾರಣೆಗಳಾಗಿವೆ. ಹಲವು ಕಂಪೆನಿಗಳು ಎಲ್‌ಎಲ್‌ಎಂಗಳನ್ನು ಅಭಿವೃದ್ಧಿಪಡಿಸಿದ್ದರಿಂದ ರೋಬೋಬೊಗಳನ್ನು ಅಭಿವೃದ್ಧಿಪಡಿಸುವುದು ಸುಲಭವಾಗಿದೆ. ಅಷ್ಟೇ ಅಲ್ಲ, ರೋಬೊಟಿಕ್ಸನ್ನು ಒಂದು ಸರ್ವೀಸ್ ಆಗಿ ಅಭಿವೃದ್ಧಿಪಡಿಸುವ ಪ್ರಯತ್ನಕ್ಕೂ ವೇಗ ಸಿಕ್ಕಿದೆ. ಅಲ್ಲದೆ, ಹಲವು ಕಂಪೆನಿಗಳು ಈ ನಿಟ್ಟನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿವೆ.

ಚಿಪ್‌ಗಳನ್ನು ತಯಾರಿಸುವ ಎನ್‌ವಿಡಿಯಾ ಕೆಲವು ತಿಂಗಳುಗಳ ಹಿಂದೆ ರೋಬೊಗಳಿಗೆ ಅಳವಡಿಸುವುದಕ್ಕೆಂದೇ ಚಿಪ್‌ಗಳನ್ನು ತಯಾರಿಸಲು ಪ್ರಾಜೆಕ್ಟ್ ಗ್ರೂಟ್ ಅನ್ನು ಆರಂಭಿಸಿದೆ. ಈ ಚಿಪ್‌ಗಳನ್ನು ಬಳಸಿದ ರೋಬೊಗಳು ಮನುಷ್ಯರ ಜೊತೆಗೆ ಮನುಷ್ಯರಂತೆಯೇ ಸಂವಹನ ನಡೆಸುವ ಸಾಮರ್ಥ್ಯವನ್ನು ಹೊಂದಿರುತ್ತವೆ ಎಂದು ಹೇಳಲಾಗುತ್ತಿದೆ.

ಮನುಷ್ಯರಿಗೆ ಸಹಕಾರಿಯೋ ಪರ್ಯಾಯವೋ?: ಈ ಚರ್ಚೆ ವೈಜ್ಞಾನಿಕ ಕಾದಂಬರಿ, ಕಥೆಗಳು ಹಾಗೂ ಚಲನಚಿತ್ರಗಳಲ್ಲೇ ಆಗಿದೆ. ಆದರೆ, ವಾಸ್ತವ ಚಿತ್ರಣ ಬಹುಶಃ ಅಲ್ಲಿಯವರೆಗೆ ನಮ್ಮನ್ನು ಎಳೆದು ತಂದಿಲ್ಲ. ಬಹುಶಃ ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಈ ಕುರಿತ ಚರ್ಚೆ ತೀವ್ರ ಸ್ವರೂಪವನ್ನು ಪಡೆಯಬಹುದು. ಹಲವು ಕೆಲಸಗಳಲ್ಲಿ ಇದು ಮನುಷ್ಯನ ಕೆಲಸವನ್ನು ಕಿತ್ತುಕೊಳ್ಳಬಹುದು. ಇನ್ನು ಹಲವು ವಿಧಗಳಲ್ಲಿ ಮನುಷ್ಯನ ಜತೆಗಾರನ ರೀತಿಯಲ್ಲೂ ಕೆಲಸ ಮಾಡಬಹುದು.

ನಿಯಂತ್ರಣ ಯಾರದ್ದು?

ಹಲವು ದೇಶಗಳಲ್ಲಿ ಜನಸಂಖ್ಯೆಯ ಬೆಳವಣಿಗೆ ಕುಂಠಿತವಾಗಿದ್ದು, ಜಗತ್ತಿನಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಜನಸಂಖ್ಯೆಯನ್ನು ಹೆಚ್ಚಿಸುವುದು ಹೇಗೆ ಎಂಬ ಬಗ್ಗೆ ದೇಶಗಳ ನೀತಿನಿರೂಪಕರು ತಲೆಕೆಡಿಸಿಕೊಂಡಿದ್ದರೆ, ರೋಬೊಟಿಕ್ಸ್ ವಲಯದಲ್ಲಿರುವ ಕಂಪೆನಿಗಳು ಹೇಗೆ ರೋಬೊಗಳ ಉತ್ಪಾದನೆಯನ್ನು ಹೆಚ್ಚಿಸುವುದು ಹೇಗೆ ಎಂಬುದಕ್ಕೆ ತಲೆಕೆಡಿಸಿಕೊಂಡಿವೆ. ಟೆಸ್ಲಾ ಮುಂದಿನ ವರ್ಷ ಒಂದು ಸಾವಿರ ಆಪ್ಟಿಮಸ್‌ಗಳನ್ನು ಉತ್ಪಾದನೆ ಮಾಡುವ ಗುರಿ ಹಾಕಿಕೊಂಡಿದ್ದರೆ, ಅಮೆರಿಕದ ಒರೆಗಾನ್ ಮೂಲದ ಅಜಿಲಿಟಿ ರೋಬೊಟಿಕ್ಸ್ 2025ರಲ್ಲಿ ಹತ್ತು ಸಾವಿರ ರೋಬೊಳನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿರುವ ಫ್ಯಾಕ್ಟರಿಯನ್ನು ಸ್ಥಾಪಿಸಿದೆ. ಇಲ್ಲಿ ಯಾರು ಎಷ್ಟು ಹೆಚ್ಚು ರೋಬೊಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ ಎಂಬುದನ್ನು ಆಧರಿಸಿ ರೋಬೊಟಿಕ್ಸ್‌ನಲ್ಲಿ ಹೆಚ್ಚು ಪ್ರಾಬಲ್ಯವನ್ನು ಸಾಧಿಸುತ್ತಾರೆ ಎಂಬ ಅಂಶ ಅಡಗಿದೆ! ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ವಿದ್ಯುದಾವೇಶದ ಎಸ್‌ಐ(SI) ಏಕಮಾನವು.....................
ಎ) ಕೂಲಮ್ ಬಿ) ಆಂಪೀರ್
ಸಿ) ಜೂಲ್ ಡಿ) ವೋಲ್ಟ್
ಉತ್ತರ:– (ಎ) ಕೂಲಮ್

2) ಬ್ಯೂಟನೋನ್ ನಾಲ್ಕು ಕಾರ್ಬನ್ ಪರಮಾಣು ಹೊಂದಿರುವ ಸಂಯುಕ್ತವಾಗಿದ್ದು, ಇದರಲ್ಲಿನ ಕ್ರಿಯಾಗುಂಪೆಂದರೆ ....
ಎ) ಕಾರ್ಬಾಕ್ಸಿಲಿಕ್ ಆಮ್ಲ ಬಿ) ಆಲ್ಡಿಹೈಡ್
ಸಿ) ಕೀಟೋನ್ ಡಿ) ಆಲ್ಕೋಹಾಲ್
ಉತ್ತರ:– (ಸಿ) ಕೀಟೋನ್

3) ಸಮೀಪ ದೃಷ್ಟಿಯನ್ನು ಸರಿಪಡಿಸಲು ಬಳಸುವ ಮಸೂರದ ವಿಧ
ಎ) ಪೀನ ಮಸೂರು ಬಿ) ನಿಮ್ನ ಮಸೂರ
ಸಿ) ದ್ವಿಸಂಗಮ ಮಸೂರ ಡಿ) ನಿಮ್ನ ಪೀನ ಮಸೂರು
ಉತ್ತರ:– (ಸಿ) ದ್ವಿಸಂಗಮ ಮಸೂರ

4) ಸಸ್ಯಗಳು ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರಿನ್ನು ತೆಗೆದುಕೊಂಡು ಸೌರ ಬೆಳಕು ಮತ್ತು ಕ್ಲೋರೋಫಿಲ್ ಉಪಸ್ಥಿತಿಯಲ್ಲಿ .... ಗಳಾಗಿ ಪರಿವರ್ತಿಸಲಾಗುತ್ತದೆ.
.ಎ) ಕಾರ್ಬೋಹೈಡ್ರೇಟ್ ಬಿ) ಹೈಡ್ರೋಕ್ಲೋರಿಕ್ ಆಮ್ಲ
ಸಿ) ಗಂಧಕಾಮ್ಲ ಡಿ) ಆಕ್ಸಿಜನ್
ಉತ್ತರ:– ಎ

5). ಈ ಕೆಳಗಿನ ಯಾವುದನ್ನು ಪರಾಗಕೋಶವು ಹೊಂದಿದೆ?.
ಎ) ಪುಷ್ಪಪತ್ರಗಳು ಬಿ) ಅಂಡಾಣುಗಳು
ಸಿ) ಶಲಾಕ ಡಿ) ಪರಾಗರೇಣುಗಳು
ಉತ್ತರ:– (ಡಿ) ಪರಾಗರೇಣುಗಳು

6) ಸಮರೂಪಿ ಅಂಗಗಳಿಗೆ ಉದಾಹರಣೆಯೆಂದರೆ, .
ಎ) ನಮ್ಮ ತೋಳು ಮತ್ತು ನಾಯಿಯ ಮುಂಗಾಲು
ಬಿ) ನಮ್ಮ ಹಲ್ಲುಗಳು ಮತ್ತು ಆನೆಯ ದಂತಗಳು
ಸಿ) ಆಲೂಗೆಡ್ಡೆ ಮತ್ತು ಹುಲ್ಲಿನ ಉಪಕಾಂಡಗಳು
ಡಿ) ಮೇಲಿನ ಎಲ್ಲವೂ
ಉತ್ತರ:– (ಡಿ) ಮೇಲಿನ ಎಲ್ಲವೂ

7) . ನಿಮ್ಮ ದರ್ಪಣದಿಂದ ಉಂಟಾದ ಪ್ರತಿಬಿಂಬವು ಮಿಥ್ಯ, ನೇರ ಮತ್ತು ವಸ್ತುವಿಗಿಂತ ದೊಡ್ಡದಾಗಿದೆ. ಹಾಗಾದರೆ ವಸ್ತುವಿನ ಸ್ಥಾನ ಎಲ್ಲಿರಬೇಕು ?
ಎ) ಪ್ರಧಾನ ಸಂಗಮ ಮತ್ತು ವಕ್ರತಾ ಕೇಂದ್ರಗಳ ನಡುವೆ.
ಬಿ) ವಕ್ರತಾ ಕೇಂದ್ರದಲ್ಲಿ
ಸಿ) ವಕ್ರತಾ ಕೇಂದ್ರದಿಂದ ದೂರದಲ್ಲಿ
ಡಿ) ಧ್ರುವ ಮತ್ತು ಪ್ರಧಾನ ಸಂಗಮದ ನಡುವೆ
ಉತ್ತರ:– (ಡಿ) ಧ್ರುವ ಮತ್ತು ಪ್ರಧಾನ ಸಂಗಮದ ನಡುವೆ

8) ಮಾನವನ ಕಣ್ಣು ತನ್ನ ಕಣ್ಣಿನ ಮಸೂರದ ಸಂಗಮದೂರವನ್ನು ವಿವಿಧ ದೂರಗಳಲ್ಲಿರುವ ವಸ್ತುಗಳು ಕಾಣುವಂತೆ ಸರಿಹೊಂದಿಸಲು ಕಾರಣ.
ಎ) ಪ್ರಿಸ್‌ಬಯೊಪಿಯಾ ಬಿ) ಕಣ್ಣಿನ ಹೊಂದಾಣಿಕೆ
ಸಿ) ಸಮೀಪದೃಷ್ಟಿ ಡಿ) ದೂರದೃಷ್ಟಿ
ಉತ್ತರ:– (ಬಿ) ಕಣ್ಣಿನ ಹೊಂದಾಣಿಕೆ

9). ಕಬ್ಬಿಣದ ಕಾವಲಿ ತುಕ್ಕು ಹಿಡಿಯದಂತೆ ತಡೆಗಟ್ಟಲು ಈ ಕೆಳಗಿನವುಗಳಲ್ಲಿ ಯಾವ ವಿಧಾನ ಸೂಕ್ತವಾಗಿದೆ?
ಎ) ಗ್ರೀಸ್ ಹಚ್ಚುವುದು ಬಿ) ಬಣ್ಣ ಹಚ್ಚುವುದು
ಸಿ) ಸತುವಿನ ಲೇಪನ ಮಾಡುವುದು
ಡಿ) ಮೇಲಿನ ಎಲ್ಲವೂ
ಉತ್ತರ:– (ಸಿ) ಸತುವಿನ ಲೇಪನ ಮಾಡುವುದು

10) ವಿದ್ಯುತ್ ಕಾಂತೀಯ ಪ್ರೇರಣೆಯ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಾಧನ...........................
ಎ) ವಿದ್ಯುತ್ ಜನಕ ಬಿ) ವಿದ್ಯುತ್ ಮೀಟರ್
ಸಿ) ವಿದ್ಯುತ್ ಮೋಟಾರು ಡಿ) ವಿದ್ಯುತ್ ಫ್ಯಾನ್
ಉತ್ತರ:– (ಎ) ವಿದ್ಯುತ್ ಜನಕ


11) ಆಹಾರ ಪದಾರ್ಥಗಳ ಡಬ್ಬಿಗಳನ್ನು ತವರದಿಂದ ಲೇಪನಮಾಡಲಾಗಿರುತ್ತದೆಯೇ ಹೊರತು ಸತುವಿನಿಂದಲ್ಲ ಕಾರಣ.......
ಎ) ಸತು ತವರಕ್ಕಿಂತ ದುಬಾರಿ.
ಬಿ) ಸತುವಿನ ಕರಗುವ ಬಿಂದು ತವರಕ್ಕಿಂತ ಹೆಚ್ಚು.
ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.
ಡಿ) ಸತುವು ತವರಕ್ಕಿಂತ ಕಡಿಮೆ ಕ್ರಿಯಾಶೀಲವಾಗಿದೆ.
ಉತ್ತರ:– (ಸಿ)ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.

12) ವಿದಳನ ಕ್ರಿಯೆಯಿಂದ ಮಾತ್ರ ಸಂತಾನೋತ್ಪತ್ತಿ ನಡೆಸುವ ಜೀವಿಗಳ ಗುಂಪು ....
ಎ) ಅಮೀಬಾ, ಹೈಡ್ರಾ, ಸಪ್ರೋಗೈರಾ
ಬಿ) ಲಿಶ್ಮೇನಿಯಾ, ಅಮೀಬಾ, ಯಿಸ್ಟ್
ಸಿ) ಅಮೀಬಾ, ಪ್ಲಾಸ್ಮೋಡಿಯಂ, ಪ್ಲನೇರಿಯಾ
ಡಿ) ಅಮೀಬಾ, ಪ್ಲಾಸ್ಮೋಡಿಯಂ, ಲಿಶ್ಮೇನಿಯಾ,
ಉತ್ತರ:– (ಡಿ) ಅಮೀಬಾ, ಪ್ಲಾಸ್ಮೋಡಿಯಂ, ಲಿಶ್ಮೇನಿಯಾ,

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ವಿದ್ಯುತ್ ಮಂಡಲದಲ್ಲಿ ಉಪಯೋಗಿಸುವ ಕೆಳಗಿನ ಘಟಕಗಳ ಚಿನ್ಹೆಗಳನ್ನು ಬರೆಯಿರಿ
1) ಪರಿವರ್ತಿತ ರೋಧ (ರಿಯೀಸ್ಟ್ಯಾಟ್)
2) ತಂತಿಗಳು ಸೇರುವ ಸ್ಥಳ
ಉತ್ತರ:–

i)
ii)



1) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ
ಉತ್ತರ:– ಬ್ರೋಮಿನ್

2) ಒಂದು ದ್ರವರೂಪದ ಲೋಹವನ್ನು ಹೆಸರಿಸಿ
ಉತ್ತರ:– ಪಾದರಸ

3) ಕಾಯಜ ಸಂತಾನೋತ್ಪತ್ತಿ ಎಲ್ಲಿ ಬಳಸಲಾಗುತ್ತದೆ?
ಉತ್ತರ:– ಕಾಯಜ ಸಂತಾನೋತ್ಪತ್ತಿಯ ಈ ಲಕ್ಷಣವನ್ನು ಲೇಯರಿಂಗ್ ಅಥವಾ ಕಸಿಮಾಡುವಿಕೆಯಂತಹ ವಿಧಾನಗಳಲ್ಲಿ ಕೃಷಿಯ ಉದ್ದೇಶಕ್ಕಾಗಿ ಕಬ್ಬು, ಗುಲಾಬಿ ಅಥವಾ ದ್ರಾಕ್ಷಿಗಳಂಥ ಅನೇಕ ಸಸ್ಯಗಳನ್ನು ಬೆಳೆಸಲು ಬಳಸಲಾಗುತ್ತದೆ.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

REVISION : MODEL QUESTIONS

1) 37.2% recombinant Drosophila progeny obtained in the T. H. Morgan's dihybrid cross experiment with the phenotypes red eye color, normal body and white eye color, miniature body is due to……………..
a) Loosely linked and shorter distance between genes
b) Tightly linked and shorter distance between genes
c) Loosely linked and longer distance between genes
d) Tightly linked and longer distance between genes
Ans:- (C) Loosely linked and longer distance between genes

2. Choose the correct option from the table given below for the formation and dissolution of the labeled part in the given diagram.

1) Haploid conditionis not observed in which of the following cells
a) Synergids and Egg b) Zygote and PEN
c) Antipodal and Egg
d) Antipodal and Synergids
Ans:- (b) Zygote and PEN

2. **Assertion :In some species of asteraceae and poaceae, seeds are formed without fertilisation. Reason: Formation of fruit without fertilization is called parthenocarpy.**
A) Both Assertion and Reason are correct and Reason is the correct explanation for Assertion
B) Both Assertion and Reason are correct but Reason is not the correct explanation for Assertion
C)Assertion is correct but Reason is incorrect
D)Both Assertion and Reason are incorrect
Ans:- (B) Both Assertion and Reason are correct but Reason is not the correct explanation for Assertion

1) The Function of Tapetum in microsporangium is ……………
a) It nourishes the developing pollen grains
b) Helps in dehiscence of anther to release the pollen
c) Helps in protection
d) Helps in division
Ans: a) It nourishes the developing pollen grains

3. During gestation the foetus develops limbs and digits by the end
a) First month b) Second month
c) Third month d) Fifth month
Ans:-(b) Second month

4. The secondary oocyte after ovulation is covered by a non-cellular layer of
a) Cumulus oophorus b) Corona radiate
c) Zona pellucida d) Cortical layer
Ans:- (c) Zona pellucida

5. An example of hormone releasing IUD among the following
a) Cu – 7 b) Lippes loop
c) LNG – 20 d) Multiload 375
Ans:-(c) LNG – 20

7) The number of nucleotide pairs present in the DNA of the primary oocyte of a new born in human
a) 3.3×10^9 b) 6.6×10^9
c) 13.2×10^9 d) 3.3×10^7
Ans:- a)

6. Which of the following is a foetal sex determination test?
a) ZIFT b) GIFT
c) MTP d) Amniocentesis
Ans:- (d) Amniocentesis

7. Which of the following Mendelian gene disorder is the representation of allosomal recessive trait?
a) Hemophilia b) Thalassemia
c) Sickle cell anemia d) Myotonic dystrophy
Ans:- (b) Thalassemia

8. The process of removal of introns and joining of exons in a defined order in a primary transcripts occurs in
a) Prokaryotes b) Eukaryotes
c) Prokaryotes and Eukaryotes
d) Prokaryotes and Protista
Ans:- (d) Prokaryotes and Protista

9. A type of Natural selection in which more individuals acquire mean character value is called
a) Stabilizing selection
b) Disruptive selection
c) Directional selection
d) Dominant selection
Ans:- (a) Stabilizing selection

10. Drug called "Heroin is synthesized by
a) Methylation of Morphine
b) demethylation of Morphine
c) Acetylation of Morphine
d) deacytalation of Morphine
Ans:- (c) Acetylation of Morphine

11. The fungus not used in the production of any Industrial product is
a) Penicillium b) Aspergillus
c) Trichoderma polysporum
d) Glomus
Ans:- (c) Trichoderma polysporum

12. Significance of Insertional inactivation method in Recombinant DNA technology is to
a) Introduce the recombinants
b) Isolate gene of Interest
c) Select the recombinants

(Contd...)

ಮನೆಯಿಂದಲೇ ಕರ್ತವ್ಯಕ್ಕೆ ಸೂಚನೆ • ತಡರಾತ್ರಿವರೆಗೂ ಕಾರ್ಯಾಚರಣೆ

‘ಇನ್ಫೋಸಿಸ್’ ಕ್ಯಾಂಪಸ್‌ನಲ್ಲಿ ಚಿರತೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಹೆಬ್ಬಾಳದಲ್ಲಿರುವ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಮಂಗಳವಾರ ಬೆಳಿಗ್ಗೆ ಚಿರತೆ ಕಾಣಿಸಿಕೊಂಡಿದ್ದು, ಅರಣ್ಯ ಇಲಾಖೆಯು ತಡರಾತ್ರಿ ವರೆಗೂ ಸೆರೆ ಕಾರ್ಯಾಚರಣೆ ನಡೆಸಿತು. ಬುಧವಾರವೂ ಅದು ಮುಂದುವರಿಯಲಿದೆ.

ಕಂಪನಿಯು ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡುವಂತೆ ಸೂಚಿಸಿದೆ. ‘ಪ್ರೀತಿಯ ಇನ್ಫೋಸಿಯನ್, ಕ್ಯಾಂಪಸ್‌ನಲ್ಲಿ ವನ್ಯಜೀವಿ ಕಾಣಿಸಿಕೊಂಡಿದ್ದು, ಸೆರೆ ಕಾರ್ಯಾಚರಣೆ ನಡೆಸಲಾಗಿದೆ. ಹೀಗಾಗಿ ಮನೆಯಲ್ಲೇ ಕುಳಿತು ಕೆಲಸ ನಿರ್ವಹಿಸಬೇಕು. ಸುರಕ್ಷತೆಗಾಗಿ ಯಾರೊಬ್ಬರನ್ನೂ ಕ್ಯಾಂಪಸ್‌ನೊಳಕ್ಕೆ ಬಿಡುತ್ತಿಲ್ಲ. ಸಹಕರಿಸಿ’ ಎಂಬ ಸಂದೇಶವನ್ನು ಕಂಪನಿಯು ಉದ್ಯೋಗಿಗಳಿಗೆ ಕಳುಹಿಸಿದೆ.



ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಮಂಗಳವಾರ ಚಿರತೆ ಸೆರೆಗೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಅರಣ್ಯ ಇಲಾಖೆ ಸಿಬ್ಬಂದಿ

ಅರಣ್ಯ ಇಲಾಖೆ ಅಧಿಕಾರಿಗಳು ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದ್ದು, ಮುಂಜಾನೆ 2ರಿಂದ 4 ಗಂಟೆಯ ಅವಧಿಯಲ್ಲಿ ಚಿರತೆ ಓಡಾಡಿದೆ. ವನ್ಯಜೀವಿ ವಿಭಾಗದ ಡಿಸಿಎಫ್ ಐ.ಬಿ. ಪ್ರಭುಗೌಡ ಹಾಗೂ ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಬಸವರಾಜು ನೇತೃತ್ವದ ತಂಡವು ಥರ್ಮಲ್ ಕ್ಯಾಮೆರಾ ಅಳವಡಿಸಿದ ಡ್ರೋನ್ ಹಾಗೂ ಕಾರ್ಯಪಡೆಯ ಸಿಬ್ಬಂದಿಯೊಂದಿಗೆ ಕಾರ್ಯಾಚರಣೆ ಆರಂಭಿಸಿತು. ಸಮೀಪದ ವಸತಿ ಪ್ರದೇಶಗಳಿಗೆ ಚಿರತೆ ನುಗ್ಗದಂತೆ ಕ್ರಮ ವಹಿಸಿತು.

‘ಕ್ಯಾಮೆರಾ ಟ್ರ್ಯಾಪ್‌ಗಳನ್ನು 337 ಎಕರೆ ಪ್ರದೇಶದ ಕ್ಯಾಂಪಸ್‌ನಲ್ಲಿ ಅಳವಡಿಸಿ, ಆಯಕಟ್ಟಿನ ಜಾಗದಲ್ಲಿ ಬೋನು ಇರಿಸಲಾಗಿದೆ. ಪಶುವೈದ್ಯಕೀಯ ತಂಡವನ್ನು ನಿಯೋಜಿಸಲಾಗಿದೆ’ ಎಂದು ಡಿಸಿಎಫ್ ಪ್ರಭುಗೌಡ ತಿಳಿಸಿದರು.

ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕ್ಯಾಂಪಸ್ ಇದ್ದು, ಕುರುಚಲು ಕಾಡಿಗೆ ಹೊಂದಿಕೊಂಡಂತಿದೆ. 2011ರಲ್ಲೂ ಇಲ್ಲಿ ಚಿರತೆ ಕಾಣಿಸಿಕೊಂಡಿತ್ತು.

40 ಸಿಬ್ಬಂದಿ: ‘ಮಧ್ಯಾಹ್ನ 12ರ ವೇಳೆಗೆ ಚಿರತೆ ಇರುವಿಕೆ ಖಚಿತವಾಗಿದ್ದರಿಂದ ಚಿರತೆ ಕಾರ್ಯಪಡೆಯ 40 ಸಿಬ್ಬಂದಿ ಬಲೆ, ಅರಿವಳಿಕೆ ಚುಚ್ಚುಮದ್ದಿನ ಗನ್ ಜೊತೆ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಆತಂಕ ಪಡುವ ಅಗತ್ಯವಿಲ್ಲ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಕ್ರಿಯಿಸಿದ್ದಾರೆ.

ಹಾವು ಕಡಿತ: ಬಾಲಕಿ ಸಾವು

134.	ವೆಂಕಟೇಶ. ಎನ್ ಬಿನ್ ನಂಜನಬೋಯಿ ವು ನಂಜಪ್ಪ	72/9	0-12	-	0-12
135.	ವೆಂಕಟರಮಣಪ್ಪ. ಎನ್ ಬಿನ್ ನಂಜನಬೋಯಿ ವು ನಂಜಪ್ಪ	72/10	0-12	-	0-12
136.	ಮುನಿಶ್ಯಾಮಪ್ಪ . ಎನ್ ಬಿನ್ ನಂಜನಬೋಯಿ ವು ನಂಜಪ್ಪ	72/11	0-12	-	0-12
137.	ಆಶೋಕ. ಯು.ಎನ್ ಬಿನ್ ನಂಜನಬೋಯಿ ವು ನಂಜಪ್ಪ	72/12	0-12	-	0-12
138.	ಇಂದ್ರರೆಡ್ಡಿ ಬಿನ್ ಗೋಪಾಲರೆಡ್ಡಿ	73/1	2-31	-	2-31
139.	ಇಂದ್ರರೆಡ್ಡಿ ಬಿನ್ ಗೋಪಾಲರೆಡ್ಡಿ	73/2	1-25	-	1-25
140.	ಶ್ರೀ ರಘುನಾಥರೆಡ್ಡಿ ಬಿನ್ ಲೇ ರಾಮಚಂದ್ರರೆಡ್ಡಿ	73/3	3-03	-	3-03
141.	ಕಮಲಮ್ಮ ಕೋಂ ಹೆಚ್.ವಿ.ಕೃಷ್ಣಪ್ಪ, ಅನಂತಪದ್ಮನಾಭ ಬಿನ್ ಲೇ ಲಕ್ಷ್ಮಣ. ಸಿ, ಶೋಭ ಬಿನ್ ಲೇ ಲಕ್ಷ್ಮಣ. ಸಿ , ಮೇಲಿನ ಜಂಟಿ	74/1	1-38	-	1-38
142.	ಹೆಚ್.ವಿ.ಸುಬ್ರಮಣ್ಯ ಬಿನ್ ಹೆಚ್.ಬಿ. ವೆಂಕಟೇಶಗೌಡ	74/2	1-38	-	1-38
143.	ಮಾಲಿನಿ. ಹೆಚ್. ಎಂ ಬಿನ್ H.V. ಮುನಿನಾರಾಯಣ	74/3	2-00	-	2-00
144.	ಹೆಚ್.ವಿ.ವರಲಕ್ಷ್ಮಮ್ಮ ಕೋಂ ಡಿ.ಎನ್. ಅಶ್ವಥಗೌಡ, ಹೆಚ್.ವಿ.ಪ್ರಮೀಳಮ್ಮ ಕೋಂ ಚೌಡಪ್ಪ, ಹೆಚ್.ವಿ.ವೆಂಕಮ್ಮ ಕೋಂ ಶ್ರೀನಿವಾಸಗೌಡ, ಹೆಚ್.ವಿ.ಮುನೀಂದ್ರಕುಮಾರ್ ಬಿನ್ ಲೇ ವೆಂಕಟಗಿರಿಯಪ್ಪ, ಹೆಚ್.ವಿ. ಮಂಜುನಾಥ ಬಿನ್ ಲೇ ವೆಂಕಟಗಿರಿಯಪ್ಪ, ಶ್ರೀನಿವಾಸ ಬಿನ್ ಲೇ ವೆಂಕಟಗಿರಿಯಪ್ಪ	75	4-28	-	4-28
145.	ಪಾರ್ವತಮ್ಮ ಕೋಂ ಹೆಚ್. ಎನ್. ವೆಂಕಟಗಿರಿಯಪ್ಪ , ಕಮಲಮ್ಮ ಕೋಂ ಹೆಚ್.ವಿ. ಕೃಷ್ಣಪ್ಪ, ಹೆಚ್.ಎಲ್. ಶೋಭ ಬಿನ್ ಲೇ ಸಿ. ಲಕ್ಷ್ಮಣ, ಅನಂತಪದ್ಮನಾಭ ಬಿನ್ ಲೇ ಸಿ.ಲಕ್ಷ್ಮಣ, ಮೇಲಿನ ಜಂಟಿ	76/1	5-00	0-05	4-35
146.	ಹೆಚ್. ಎಂ. ಮಾಲಿನಿ ಬಿನ್ ಹೆಚ್.ವಿ.ಮುನಿನಾರಾಯಣ	76/2	0-12	-	0-12
147.	ಶ್ರೀಮತಿ ಶ್ವೇತ. ಎಂ ಬಿನ್ ಟಿ.ಮುನಿಯಪ್ಪ – ಭೂ.ಪ	77/1	1-18	-	1-18
148.	ಇಂದ್ರರೆಡ್ಡಿ ಬಿನ್ ಗೋಪಾಲರೆಡ್ಡಿ	77/2	1-16	0-06	1-10
149.	ವಿ. ನಾರಾಯಣರೆಡ್ಡಿ ಬಿನ್ ವೆಂಕಟರೆಡ್ಡಿ, ಭೂ.ಪ	77/3	1-18	-	1-18
150.	ಮುನಿವೆಂಕಟಮ್ಮ ಕೋಂ ಮಟ್ಟಪ್ಪ	78/1	0-36	0-04	0-32
151.	ಸಿದ್ದಾರೆಡ್ಡಿ ಬಿನ್ ವೆಂಕಟರೆಡ್ಡಿ	78/2	1-20	-	1-20
152.	ಸಿದ್ದಾರೆಡ್ಡಿ ಬಿನ್ ವೆಂಕಟರೆಡ್ಡಿ	78/3	2-04	0-04	2-00
153.	ಅನ್ವರ್ ಪಾಷ ಬಿನ್ ಬಾಬಾಸಾಭಿ– ಭೂ.ಪ, ಕೆ. ಹರೀಶ್ ಬಾಬು ಬಿನ್ ಕ್ರಷ್ಣಾರೆಡ್ಡಿ	79	4-32	-	4-32
154.	ಸಿದ್ದಾರೆಡ್ಡಿ ಬಿನ್ ವೆಂಕಟರೆಡ್ಡಿ, ಹರೀಶ್ ಬಾಬು.ಕೆ ಬಿನ್ ಕೃಷ್ಣಾರೆಡ್ಡಿ, ಗಿರೀಶ್‌ಬಾಬು.ಕೆ ಬಿನ್ ಕೃಷ್ಣಾರೆಡ್ಡಿ – ಮೇಲಿನ ಜಂಟಿ	80/1	1-32	-	1-32
155.	ಸಿದ್ದಾರೆಡ್ಡಿ ಬಿನ್ ವೆಂಕಟರೆಡ್ಡಿ	80/2	2-31	-	2-31
156.	ಶ್ರೀಮತಿ ಶ್ವೇತ. ಎಂ ಬಿನ್ ಟಿ.ಮುನಿಯಪ್ಪ, ಭೂ.ಪ	81/1	1-15	-	1-15
157.	ವಿ.ನಾರಾಯಣರೆಡ್ಡಿ ಬಿನ್ ವೆಂಕಟರೆಡ್ಡಿ	81/2	1-18	0-03	1-15
158.	ಶ್ರೀ ಎನ್. ಆಶೋಕ್‌ಕುಮಾರ್ ಬಿನ್ ನೀಲಕಂಠೇಗೌಡ , ಭೂ.ಪ	81/3	2-36	0-03	2-33
159.	ಹೆಚ್. ಎಲ್. ಶೋಭ ಬಿನ್ ಲೇ ಸಿ. ಲಕ್ಷ್ಮಣ, ಅನಂತಪದ್ಮನಾಭ ಬಿನ್ ಲೇ ಸಿ ಲಕ್ಷ್ಮಣ	82/1	1-27	-	1-27
160.	ವಿ.ನಾರಾಯಣರೆಡ್ಡಿ ಬಿನ್ ವೆಂಕಟರೆಡ್ಡಿ	82/2	2-32	-	2-32
161.	ಹೆಚ್. ಎಲ್. ಶೋಭ ಬಿನ್ ಲೇ ಸಿ. ಲಕ್ಷ್ಮಣ, ಅನಂತಪದ್ಮನಾಭ ಬಿನ್ ಲೇ ಸಿ ಲಕ್ಷ್ಮಣ, ಹೆಚ್. ಎಲ್. ಶೋಭ ಬಿನ್ ಲೇ ಸಿ. ಲಕ್ಷ್ಮಣ, ಅನಂತಪದ್ಮನಾಭ ಬಿನ್ ಲೇ ಸಿ ಲಕ್ಷ್ಮಣ , ಮೇಲಿನ ಜಂಟಿ	83/1	1-33	-	1-33
162.	ವಿ.ನಾರಾಯಣರೆಡ್ಡಿ ಬಿನ್ ವೆಂಕಟರೆಡ್ಡಿ, ಭೂ.ಪ	83/2	2-33	-	2-33
163.	ಹೆಚ್. ಎಲ್. ಶೋಭ ಬಿನ್ ಲೇ ಸಿ. ಲಕ್ಷ್ಮಣ, ಅನಂತಪದ್ಮನಾಭ ಬಿನ್ ಲೇ ಸಿ ಲಕ್ಷ್ಮಣ , ಮೇಲಿನ ಜಂಟಿ ಹೆಚ್. ಎಲ್. ಶೋಭ ಬಿನ್ ಲೇ ಸಿ. ಲಕ್ಷ್ಮಣ, ಅನಂತಪದ್ಮನಾಭ ಬಿನ್ ಲೇ ಸಿ ಲಕ್ಷ್ಮಣ , ಮೇಲಿನ ಜಂಟಿ	84/1	2-00	-	2-00
164.	ವಿ.ನಾರಾಯಣರೆಡ್ಡಿ ಬಿನ್ ವೆಂಕಟರೆಡ್ಡಿ	84/2	2-35	-	2-35
165.	ನಾರಾಯಣಪ್ಪ ಬಿನ್ ಮುನಿಬೋವಿ, ವೆಂಕಟಮ್ಮ ಬಿನ್ ನಾರಾಯಣಪ್ಪ, ಮೇಲಿನ ಜಂಟಿ, ಮುನಿರಾಜು ಬಿನ್ ವೆಂಕಟನಬೋವಿ, ವೆಂಕಟೇಶ ಬಿನ್ ವೆಂಕಟನಬೋವಿ, ಸರ್ಕಾರಿ ಗೋಮಾಳ	85	11-01	-	11-01
166.	ಕಮಲ ಕೋಂ ಹೆಚ್. ಆರ್. ಶ್ರೀನಿವಾಸ, ಎಸ್.ಸಂಪತ್‌ಕುಮಾರ್ ಬಿನ್ ಹೆಚ್. ಆರ್. ಶ್ರೀನಿವಾಸ, ಮೇಲಿನ ಜಂಟಿ,	86	3-39	-	3-39
167.	ಮೋಹನ್‌ಕುಮಾರ್ ಬಿನ್ ಲೇ ಅಚ್ಚೇಗೌಡ. ಹೆಚ್. ಎಸ್	87/1	1-28	-	1-28
168.	ಹೆಚ್.ಎ. ಶ್ಯಾಮಣ್ಣ ಬಿನ್ ಲೇ ಅಚ್ಚೇಗೌಡ. ಹೆಚ್. ಎಸ್, ಹೆಚ್.ಎ. ಮೋಹನ್ ಕುಮಾರ್ ಬಿನ್ ಲೇ ಹೆಚ್.ಎಸ್. ಅಚ್ಚೇಗೌಡ– ಮೇಲಿನ ಜಂಟಿ	87/2	1-28	-	1-28
169.	ಆರ್. ಪುಷ್ಪ ಬಿನ್ ವಿ.ನಾರಾಯಣರೆಡ್ಡಿ– ಭೂ.ಪ	88	3-38	0-06	3-32
170.	ಆರ್. ಪುಷ್ಪ ಬಿನ್ ವಿ.ನಾರಾಯಣರೆಡ್ಡಿ– ಭೂ.ಪ	89	3-21	-	3-21
171.	ಆರ್. ಪುಷ್ಪ ಬಿನ್ ವಿ.ನಾರಾಯಣರೆಡ್ಡಿ –ಭೂ.ಪ	90/1	2-00	-	2-00
172.	ಆರ್. ಪುಷ್ಪ ಬಿನ್ ವಿ.ನಾರಾಯಣರೆಡ್ಡಿ– ಭೂ.ಪ	90/2	3-21	-	3-21
173.	ನಂಜೇಗೌಡ. ಎಂ.ಸಿ. ಬಿನ್ ಚಿಕ್ಕನಂಜುಂಡಪ್ಪ	91	3-06	0-10	2-36
174.	ಚಿಕ್ಕತಿಮ್ಮರಾಯಪ್ಪ ಬಿನ್ ಲೇ ಮುನಿನಾಯ್ಕ, ರವಿಚಂದ್ರ. ಕೆ.ಎಂ. ಬಿನ್ ಲೇ ಮಟ್ಟಪ್ಪ	92/1	2-09	0-02	2-07
175.	ಎಂ. ಶಿವಕುಮಾರ್ ಬಿನ್ ಮಂಜುನಾಥ	92/2	1-04½	0-01	1-03½
176.	ಎಂ. ಶಿವಕುಮಾರ್ ಬಿನ್ ಮಂಜುನಾಥ	92/3	0-22½	0-00½	0-22
177.	ಎಂ. ಶಿವಕುಮಾರ್ ಬಿನ್ ಮಂಜುನಾಥ	92/4	0-29	0-07½	0-21½
178.	ರಾಧಮ್ಮ ಬಿನ್ ಕೆ.ಎ. ಶಂಕರರೆಡ್ಡಿ	93/1	1-00	-	1-00
179.	ಯಶೋಧಮ್ಮ ಬಿನ್ ಕೆ.ಎ. ಶಂಕರ್‌ರೆಡ್ಡಿ	93/2	1-00	-	1-00
180.	ವಿ.ಆರ್.ರಮಾ ಬಿನ್ ಕೆ.ಎ.ಶಂಕರ್‌ರೆಡ್ಡಿ	93/3	1-00	-	1-00
181.	ಜಯಮ್ಮ ಬಿನ್ ಕೆ.ಎ.ಶಂಕರ್‌ರೆಡ್ಡಿ	93/4	1-00	-	1-00
182.	ಕೆ.ಎಸ್. ಬಾಬುರೆಡ್ಡಿ ಬಿನ್ ಕೆ.ಎ.ಶಂಕರ್‌ರೆಡ್ಡಿ	93/5	2-01	0-01	2-00
183.	ಕೆ.ಎಸ್. ಬಾಬುರೆಡ್ಡಿ ಬಿನ್ ಕೆ.ಎ.ಶಂಕರ್‌ರೆಡ್ಡಿ	93/6	1-32	0-05	1-27
184.	ಎಸ್.ಚಂದ್ರಬಾಬು ಬಿನ್ ಕೆ.ಎ.ಶಂಕರ್‌ರೆಡ್ಡಿ	93/7	0-05	0-01	0-04
185.	ರಾಧಮ್ಮ ಕೋಂ ಕೆ.ಎ. ಗುರುಶಂಕರ್‌ರೆಡ್ಡಿ	93/8	1-00	-	1-00
186.	ಎಂ.ಸಿ.ಗುಣವಂತ ಬಿನ್ ಚಿಕ್ಕನಂಜುಂಡಪ್ಪ – ಭೂ.ಪ	94/1	1-24	-	1-24
187.	ಎಂ.ಸಿ.ಗುಣವಂತ ಬಿನ್ ಚಿಕ್ಕನಂಜುಂಡಪ್ಪ– ಭೂ.ಪ	94/2	2-21	-	2-21
188.	ಎಂ.ಸಿ.ಗುಣವಂತ ಬಿನ್ ಚಿಕ್ಕನಂಜುಂಡಪ್ಪ	96	3-13	-	3-13
189.	ಎಂ.ಸಿ.ಗುಣವಂತ ಬಿನ್ ಚಿಕ್ಕನಂಜುಂಡಪ್ಪ	97	4-12	-	4-12
190.	ಎಸ್.ಚಂದ್ರಬಾಬು ಬಿನ್ ಕೆ.ಎ.ಶಂಕರ್‌ರೆಡ್ಡಿ	98	4-37	-	4-37
191.	ಕೆ.ಎಸ್. ಬಾಬುರೆಡ್ಡಿ ಬಿನ್ ಕೆ.ಎ.ಶಂಕರ್‌ರೆಡ್ಡಿ	99	4-14	-	4-14
192.	ಆರ್.ಸುರೇಶ್ ಬಿನ್ ರಾಮರೆಡ್ಡಿ–ಭೂ.ಪ	101/1	2-10	0-10	2-00
193.	ಆರ್.ಸುರೇಶ್ ಬಿನ್ ರಾಮರೆಡ್ಡಿ–ಭೂ.ಪ	101/2	4-08	0-18	3-30
194.	ಕಮಲ ಕೋಂ ಹೆಚ್. ಆರ್. ಶ್ರೀನಿವಾಸ್, ಎಸ್. ಸಂಪತ್ ಕುಮಾರ್ ಬಿನ್ ಹೆಚ್. ಆರ್. ಶ್ರೀನಿವಾಸ್. ಎಸ್– ಮೇಲಿನ ಜಂಟಿ	102/1	1-15	0-05	1-10
195.	ಮೋಹನ್ ಕುಮಾರ್ ಬಿನ್ ಅಚ್ಚೇಗೌಡ. ಹೆಚ್.ಎಸ್.	102/2	1-05	0-05	1-00
196.	ಹೆಚ್.ಎ.ಶ್ಯಾಮಣ್ಣ ಬಿನ್ ಲೇ ಅಚ್ಚೇಗೌಡ. ಹೆಚ್.ಎಸ್, ಹೆಚ್. ಎ ಮೋಹನ್ ಕುಮಾರ್ ಬಿನ್ ಅಚ್ಚೇಗೌಡ. ಹೆಚ್.ಎಸ್– ಮೇಲಿನ ಜಂಟಿ	102/3	1-05	0-05	1-00
197.	ಕಮಲ ಕೋಂ ಹೆಚ್. ಆರ್. ಶ್ರೀನಿವಾಸ್, ಎಸ್. ಸಂಪತ್ ಕುಮಾರ್ ಬಿನ್ ಹೆಚ್. ಆರ್. ಶ್ರೀನಿವಾಸ್	103	3-36	-	3-36
198.	ಮೋಹನ್ ಕುಮಾರ್ ಬಿನ್ ಅಚ್ಚೇಗೌಡ. ಹೆಚ್.ಎಸ್	104/1	1-34½	-	1-34½
199.	ಹೆಚ್.ಎ.ಶ್ಯಾಮಣ್ಣ ಬಿನ್ ಲೇ ಅಚ್ಚೇಗೌಡ. ಹೆಚ್.ಎಸ್, ಹೆಚ್. ಎ ಮೋಹನ್ ಕುಮಾರ್ ಬಿನ್ ಅಚ್ಚೇಗೌಡ. ಹೆಚ್.ಎಸ್ – ಮೇಲಿನ ಜಂಟಿ	104/2	1-34½	-	1-34½
200.	ಆರ್.ಸುರೇಶ್ ಬಿನ್ ರಾಮರೆಡ್ಡಿ –ಭೂ.ಪ	105	4-00	-	4-00
201.	ಆರ್.ಸುರೇಶ್ ಬಿನ್ ರಾಮರೆಡ್ಡಿ –ಭೂ.ಪ	106	4-03	-	4-03
202.	ತಿಮ್ಮಯ್ಯ ಬಿನ್ ಲೇ ಮುನಿಯಪ್ಪ	107/1	2-14	-	2-14
203.	ಪಿ.ವಿ.ಜಯರಾಮರೆಡ್ಡಿ ಬಿನ್ ವೆಂಕಟೇಶರೆಡ್ಡಿ	107/2	0-07	-	0-07
204.	ಮುನಿಸ್ವಾಮಿ. ಕೆ ಬಿನ್ ಲೇ ಕೆಂಪಯ್ಯ	107/3	2-00	-	2-00
205.	ಕೆ.ಎಂ.ರಾಮಚಂದ್ರಪ್ಪ ಬಿನ್ ಮುನಿಯಪ್ಪ	108	4-36	-	4-36
206.	ಕೋಟೆ ದೊರೆಸ್ವಾಮಿ ಬಿನ್ ವೆಂಕಟೇಶಪ್ಪ	109	3-38	-	3-38
207.	ಮಧುಕುಮಾರ್. ಹೆಚ್. ಎಸ್. ಬಿನ್ ಶ್ರೀನಿವಾಸ್‌ಗೌಡ.ಹೆಚ್. ಸಿ	110/1	1-00	-	1-00
208.	ರವೀಂದ್ರ . ಹೆಚ್.ಸಿ. ಬಿನ್ ಚಂದ್ರೇಗೌಡ. ಹೆಚ್.ಸಿ	110/2	1-04	-	1-04
209.	ವೀರೆಂದ್ರೆಗೌಡ. ಹೆಚ್.ಸಿ. ಬಿನ್ ಚಂದ್ರೇಗೌಡ. ಹೆಚ್.ಸಿ	110/3	2-04	-	2-04
210.	ಕೆ. ಆರ್.ಸುರೇಶ್ ಬಿನ್ ರಾಮರೆಡ್ಡಿ– ಭೂ.ಪ	111	4-11	-	4-11
211.	ಟಿ.ಮುನಿಯಪ್ಪ ಬಿನ್ ತಿಮ್ಮರಾಯಪ್ಪ, ಶ್ವೇತಾ D/O ಟಿ.ಮುನಿಯಪ್ಪ. ಮೇಲಿನ ಜಂಟಿ	112	4-25	-	4-25
212.	ಕೆ.ಆರ್.ಸುರೇಶ್ ಬಿನ್ ರಾಮರೆಡ್ಡಿ, ಭೂ.ಪ	113	2-39	-	2-39
213.	ಹೆಚ್. ಎಲ್. ಪುಟ್ಟಣ ಬಿನ್ ಲೇ ಹೆಚ್.ಪಿ.ಲಕ್ಷ್ಮಣಗೌಡ	114	3-34	-	3-34
214.	ಹೆಚ್.ಸಿ.ಮಂಜುನಾಥಕೋಟೆ ಬಿನ್ ಚಿಕ್ಕಮುನಿಚೌಡಪ್ಪ	115	4-30	-	4-30
215.	ಹೆಚ್.ಸಿ.ಮಂಜುನಾಥಕೋಟೆ ಬಿನ್ ಚಿಕ್ಕಮುನಿಚೌಡಪ್ಪ	116	4-32	-	4-32
216.	ಮಧುರ.ಹೆಚ್.ಎಸ್. D/O ಶ್ರೀನಿವಾಸಗೌಡ.ಹೆಚ್.ಸಿ	117/1	0-35	-	0-35
217.	ನಾರಾಯಣಸ್ವಾಮಿ ಬಿನ್ ರಾಮಣ್ಣ	117/2	3-00	-	3-00
218.	ಮಧುಕುಮಾರ್. ಹೆಚ್. ಎಸ್. ಬಿನ್ ಶ್ರೀನಿವಾಸಗೌಡ.ಹೆಚ್.ಸಿ	117/3	0-34	-	0-34
219.	ಕೆ.ಎಂ.ರಾಮಚಂದ್ರಪ್ಪ ಬಿನ್ ಮುನಿಯಪ್ಪ	118/1	1-20	-	1-20
220.	ಸೋಮಣ್ಣ. ಎಂ. ಎಂ. ಬಿನ್ ಎಂ. ವಿ. ಮುನಿಯಪ್ಪ	118/2	1-19	-	1-19
221.	ಹೆಚ್.ಕೆ.ಆನಂದ್‌ಕುಮಾರ್ ಬಿನ್ ಕೃಷ್ಣಪ್ಪ.	118/3	1-19	-	1-19
222.	ಕೆ.ಎಂ.ರಾಮಚಂದ್ರಪ್ಪ ಬಿನ್ ಮುನಿಯಪ್ಪ	119/1	1-30	-	1-30
223.	ಸೋಮಣ್ಣ. ಎಂ. ಎಂ. ಬಿನ್ ಎಂ. ವಿ. ಮುನಿಯಪ್ಪ	119/2	1-30	-	1-30
224.	ಹೆಚ್.ಕೆ.ಆನಂದ್‌ಕುಮಾರ್ ಬಿನ್ ಕೃಷ್ಣಪ್ಪ.	119/3	1-30	-	1-30
225.	ಅಶ್ವಥಗೌಡ ಬಿನ್ ನಂಜಪ್ಪ	120/1	3-19		3-19
226.	ನಂದಿನಿ ಬಿನ್ ಅಶ್ವಥಗೌಡ	120/2	1-15	-	1-15
227.	ಗೋಪಮ್ಮ ಕೋಂ ಹೆಚ್.ಪಿ.ನಂಜುಂಡಗೌಡ	121	6-37	-	6-37
228.	ಚಿಕ್ಕತಿಮ್ಮರಾಯಪ್ಪ ಬಿನ್ ಲೇ ಮುನಿನಾಯ್ಕ	122/1	1-28	0-16	1-12
229.	ಪವಿತ್ರ. ಹೆಚ್. ಆರ್. ಬಿನ್ ಹೆಚ್.ಡಿ.ರಾಜಣ್ಣ	122/2	0-15	-	0-15
230.	ಪವಿತ್ರ. ಹೆಚ್. ಆರ್. ಕೋಂ ಹೆಚ್.ಡಿ.ರಾಜಣ್ಣ	123	1-07	0-04	1-03
231.	ಪವಿತ್ರ. ಹೆಚ್. ಆರ್. ಬಿನ್ ಹೆಚ್.ಡಿ.ರಾಜಣ್ಣ	124/1	0-21¾	0-00¾	0-21
232.	ಪವಿತ್ರ. ಹೆಚ್. ಆರ್. ಬಿನ್ ಹೆಚ್.ಡಿ.ರಾಜಣ್ಣ	124/2	0-14¼	0-00¼	0-14
233.	ಪವಿತ್ರ. ಹೆಚ್. ಆರ್. ಬಿನ್ ಹೆಚ್.ಡಿ.ರಾಜಣ್ಣ	125	1-20	0-01	1-19
234.	ಪವಿತ್ರ. ಹೆಚ್. ಆರ್. ಬಿನ್ ಹೆಚ್.ಡಿ.ರಾಜಣ್ಣ	126/1	0-13	-	0-13
235.	ಪವಿತ್ರ. ಹೆಚ್. ಆರ್. ಬಿನ್ ಹೆಚ್.ಡಿ.ರಾಜಣ್ಣ	126/2	0-23	-	0-23
236.	ತೋಟಿಇನಾಂತಿ	127	0-13	-	0-13
237.	ಲಕ್ಷ್ಮಮ್ಮ ಕೋಂ ಲೇ ಯಳಸಪ್ಪ	128/1	1-36	0-06	1-30
238.	ಲಕ್ಷ್ಮಮ್ಮ ಕೋಂ ಲೇ ಯಳಸಪ್ಪ	128/2	2-06	0-05	2-01
239.	SANATHANAMURTHY. B. P. ಬಿನ್ P. Srikanthaiah	128/3	2-02	0-02	2-00
240.	Tejatha. A. Hallur ಕೋಂ S. Janardhan	129/1	1-11	0-02	1-09
241.	ಲಕ್ಷ್ಮಮ್ಮ ಕೋಂ ಲೇ ಯಳಸಪ್ಪ	129/2	3-22	0-02	3-20
242.	ಕಮಲಮ್ಮ ಕೋಂ ಹೆಚ್.ವಿ.ಕೃಷ್ಣಪ್ಪ, ಹೆಚ್. ಆರ್.ಗೋಪಿನಾಥ್ ಬಿನ್ ರಾಮೇಗೌಡ, ಹೆಚ್.ವಿ. ಸುಬ್ರಮಣ್ಯ ಬಿನ್ ಹೆಚ್.ಬಿ ವೆಂಕಟೇಶಗೌಡ, ಎಂ.ಟಿ.ಚೌಡೇಶ್ವರಮ್ಮ ಕೋಂ ಲೇ ಹೆಚ್. ಎಸ್. ರಂಗೇಗೌಡ, ಹೆಚ್.ವಿ. ವೆಂಕಟಾಚಲಗೌಡ ಬಿನ್ ವೆಂಕಟಗಿರಿಯಪ್ಪ, ಹೆಚ್.ವಿ.ಶಕುಂತಲಮ್ಮ ಕೋಂ ಲೇ ಹೆಚ್.ವಿ.ಮುನಿನಾರಾಯಣ. ಹೆಚ್.ಎಲ್.ವನಜಮ್ಮ ಬಿನ್ ಲೇ ಸಿ ಲಕ್ಷ್ಮಣ, ರವಿಕುಮಾರ್.ಸಿ. ಬಿನ್ ಲೇ ಚಂದ್ರೇಗೌಡ.ಹೆಚ್.ಕೆ.	130	5-21	0-25	4-36
243.	ಕಮಲಮ್ಮ ಕೋಂ ಹೆಚ್.ವಿ.ಕೃಷ್ಣಪ್ಪ, ಚೌಡೇಶ್ವರಮ್ಮ ಕೋಂ ರಂಗೇಗೌಡ, ಅಮ್ಮಯ್ಯಮ್ಮ ಕೋಂ ಶಾಮಣ್ಣಗೌಡ, ಹೆಚ್.ಆರ್.ಗೋಪಿನಾಥ್ ಬಿನ್ ರಾಮೇಗೌಡ, ಹೆಚ್.ವಿ. ಸುಬ್ರಮಣ್ಯ ಬಿನ್ ಹೆಚ್.ಬಿ ವೆಂಕಟೇಶಗೌಡ, ಹೆಚ್.ವಿ. ವೆಂಕಟಾಚಲಗೌಡ ಬಿನ್ ವೆಂಕಟಗಿರಿಯಪ್ಪ, ಹೆಚ್.ವಿ.ಶಕುಂತಲಮ್ಮ ಕೋಂ ಲೇ ಹೆಚ್.ವಿ.ಮುನಿನಾರಾಯಣ. ಹೆಚ್.ಎಲ್.ಶೈಲಜಾ ಬಿನ್ ಲೇ ಸಿ ಲಕ್ಷ್ಮಣ, ರವಿಕುಮಾರ್.ಸಿ. ಬಿನ್ ಲೇ ಚಂದ್ರೇಗೌಡ.ಹೆಚ್.ಕೆ.	131	5-33	0-03	5-30
244.	ಸರ್ಕಾರಿ ಗೋಮಾಳ	132	2-04	2-04	-

ಪರಮಾಣು ವಿದ್ಯುತ್ ಸ್ಥಾವರಕ್ಕೆ ಭೂಮಿ ಪರಿಶೀಲನೆ; ಜನರಲ್ಲಿ ಆತಂಕ

6ರಂದು ಪ್ರತಿಭಟನೆ ನಡೆಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಚಿಕ್ಕಬೆಣಕಲ್ ಗ್ರಾಮದ ಸಮೀಪದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಯಾಗುತ್ತದೆ ಎಂದು ಆತಂಕಗೊಂಡಿರುವ ಜನ ಜ. 6ರಂದು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಗಂಗಾವತಿ ತಹಶೀಲ್ದಾರ್ ಚಿಕ್ಕಬೆಣಕಲ್ ಗ್ರಾಮದಲ್ಲಿ ಅರಣ್ಯ ಇಲಾಖೆಗೆ ಸೇರಿದ 1,200 ಎಕರೆ ಭೂಮಿ ಗುರುತಿಸಿ ಸಹಾಯಕ ಆಯುಕ್ತರಿಗೆ ಪತ್ರ ಬರೆದಿದ್ದು, ಇದು ಸ್ಥಾವರ ಸ್ಥಾಪನೆಗೆ ಸೂಕ್ತವಿದೆ ಎಂದಿದ್ದಾರೆ. ಈಗಲೇ ಪರಮಾಣು ಸ್ಥಾವರ ಸ್ಥಾಪನೆಯಾಗುತ್ತದೆ ಅಂದುಕೊಂಡಿರುವ ಜನ ಈ ಕುರಿತು ಚರ್ಚಿಸಲು ಮಂಗಳವಾರ ಚಿಕ್ಕಬೆಣಕಲ್ ಗ್ರಾಮದಲ್ಲಿ ಸಭೆ ನಡೆಸಿದರು. 15 ದಿನಗಳ ಹಿಂದೆ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮದ ಅಧಿಕಾರಿಗಳ ತಂಡ ಜಿಲ್ಲೆಗೆ ಭೇಟಿ ನೀಡಿ ಜಿಲ್ಲೆಯ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಗ್ರಾಮ ಪಂಚಾಯಿತಿ ಅಧ್ಯಕ್ಷ ಶಿವಮೂರ್ತಿ ಮಾತನಾಡಿ, 'ಚಿಕ್ಕಬೆಣಕಲ್ ಗ್ರಾಮದಲ್ಲಿ ಸಾವಿರಾರು ವರ್ಷಗಳ ಇತಿಹಾಸದ ಮೋರೆರ ಮನೆಗಳಿವೆ. ಈ ಭಾಗದಲ್ಲಿ ಕುಮಾರರಾಮನ ಬೆಟ್ಟ, ಹೇಮಗುಡ್ಡ ದುರ್ಗಾದೇವಿ ಸೇರಿ ವಿವಿಧ ಐತಿಹಾಸಿಕ ಸ್ಥಳ, ಕುರುಹುಗಳು ಮತ್ತು ವನ್ಯ ಜೀವಿಗಳಿವೆ. ಇಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪಿಸಿದರೆ ಅಪಾಯ ಎದುರಾಗುತ್ತದೆ' ಎಂದರು.

'ತಾಲ್ಲೂಕು ಆಡಳಿತ ಗೋಪ್ಯವಾಗಿ ಸರ್ವೆ ನಡೆಸಿ ಪರಮಾಣು ಸ್ಥಾವರ ಸ್ಥಾಪನೆಗೆ ಭೂಮಿ ಯೋಗ್ಯ ಇದೆ ಎಂದು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದ್ದರಿಂದ ನಮಗೆ ಆತಂಕವಾಗಿದೆ' ಎಂದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, 'ತಹಶೀಲ್ದಾರ್ ನೀಡಿದ ವರದಿ ಆಧರಿಸಿ ಜಿಲ್ಲಾಧಿಕಾರಿಗೆ ಪತ್ರ ಬರೆಯಲಾಗುವುದು. ಆದರೆ, ಚಿಕ್ಕಬೆಣಕಲ್ ವ್ಯಾಪ್ತಿಯಲ್ಲಿಯೇ ಸ್ಥಾವರ ನಿರ್ಮಾಣ ಮಾಡಲಾಗುತ್ತದೆ ಎಂದು ಎಲ್ಲಿಯೂ ತೀರ್ಮಾನವಾಗಿಲ್ಲ. ಜನ ಅನಗತ್ಯವಾಗಿ ಆತಂಕಕ್ಕೆ ಒಳಗಾಗುವ ಅಗತ್ಯವೂ ಇಲ್ಲ' ಎಂದು ಹೇಳಿದರು.



ಗಂಗಾವತಿ ತಾಲ್ಲೂಕಿನ ಚಿಕ್ಕಬೆಣಕಲ್ ಗ್ರಾಮ ಪಂಚಾಯಿತಿಯಲ್ಲಿ ಮಂಗಳವಾರ ವಿವಿಧ ಗ್ರಾಮಗಳ ಮುಖಂಡರು, ಗ್ರಾಮಸ್ಥರು ಹೋರಾಟದ ಬಗ್ಗೆ ಚರ್ಚಿಸಲು ಸಭೆ ನಡೆಸಿದರು

ಜಿಲ್ಲಾಡಳಿತ ಮತ್ತು ಸರ್ಕಾರ ಪಾರಂಪರಿಕ ಸ್ಮಾರಕಗಳು, ವನ್ಯಜೀವಿ ಪ್ರದೇಶಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿವೆ. ಇಂಥ ಸ್ಥಳದಲ್ಲಿ ಪರಿಣಾಮ ಬೀರುವ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ
ನಲಿನ್ ಅತುಲ್
ಜಿಲ್ಲಾಧಿಕಾರಿ

ಐಎಎಸ್, ಐಪಿಎಸ್, ಐಎಫ್ಎಸ್ ಅಧಿಕಾರಿಗಳಿಗೆ ಬಡ್ತಿ, ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷದ ಕೊನೆ ದಿನವಾದ ಮಂಗಳವಾರ 67 ಐಎಎಸ್, 65 ಐಪಿಎಸ್ ಮತ್ತು 21 ಐಎಫ್ಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಇವರಲ್ಲಿ ಕೆಲವು ಐಪಿಎಸ್ ಮತ್ತು ಐಎಫ್ಎಸ್ ಅಧಿಕಾರಿಗಳಿಗೆ ಬಡ್ತಿಯೊಂದಿಗೆ ವರ್ಗಾವಣೆಯನ್ನೂ ಮಾಡಲಾಗಿದೆ.

ಐಪಿಎಸ್ ಅಧಿಕಾರಿಗಳಾದ ವಿಕಾಶ್ ಕುಮಾರ್ ವಿಕಾಶ್ ಅವರನ್ನು ಬಡ್ತಿಯೊಂದಿಗೆ ಬೆಂಗಳೂರು ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ಹುದ್ದೆಗೆ, ರಮಣ ಗುಪ್ತ ಅವರನ್ನು ಬೆಂಗಳೂರು ನಗರ ಗುಪ್ತದಳದ ಹೆಚ್ಚುವರಿ ಕಮಿಷನರ್ ಆಗಿ ಮತ್ತು ಚೇತನ್ ಸಿಂಗ್ ರಾಥೋಡ್ ಅವರನ್ನು ಬೆಳಗಾವಿ ಉತ್ತರ ವಲಯದ ಐಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಬಡ್ತಿ ಹೊಂದಿದ ಇತರರಲ್ಲಿ ವಂಶಿಕೃಷ್ಣ (ಐಜಿಪಿ ನೇಮಕಾತಿ), ಕಾರ್ತಿಕ್ ರೆಡ್ಡಿ (ಡಿಐಜಿ, ಆಡಳಿತ, ಕೇಂದ್ರ ಕಚೇರಿ), ಕುಲದೀಪ್ ಕುಮಾರ್ ಜೈನ್ (ಜಂಟಿ ಆಯುಕ್ತ(ಆಡಳಿತ), ಬೆಂಗಳೂರು ನಗರ), ಜಿ.ಸಂಗೀತಾ (ಡಿಐಜಿ, ಅರಣ್ಯ ಕೋಶ, ಅಪರಾಧ ತನಿಖಾ ವಿಭಾಗ) ಮತ್ತು ರೇಣುಕಾ ಕೆ. ಸುಕುಮಾರ್ ಅವರನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಡಿಐಜಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಐಎಫ್ಎಸ್ ಬಡ್ತಿ, ವರ್ಗಾವಣೆ: 21 ಐಎಫ್ಎಸ್ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿದ್ದು, ಬಡ್ತಿ ಪಡೆದ 6 ಮಂದಿ ಸೇರಿದಂತೆ ಒಟ್ಟು ಎಂಟು ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

ಕೋಲಾರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಏಡುಕೊಂಡಲು ಅವರಿಗೆ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಬಡ್ತಿಯೊಂದಿಗೆ ಹಾಸನ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಎಪಿಸಿಸಿಎಫ್ ಹುದ್ದೆಗೆ ಬಡ್ತಿ ಪಡೆದ ಕೊಡಗು ವೃತ್ತದ ಸಿಸಿಎಫ್ ಮನೋಜ್‌ಕುಮಾರ್ ತ್ರಿಪಾಠಿ ಅವರನ್ನು ಬೆಂಗಳೂರಿನ ಅರಣ್ಯ ಜಮೀನುಗಳ ದಾಖಲೆ ವಿಭಾಗಕ್ಕೆ, ಚಿಕ್ಕಮಗಳೂರು ವೃತ್ತದ ಸಿಸಿಎಫ್ ಯು.ಪಿ. ಸಿಂಗ್ ಅವರನ್ನು ಸಾಮಾಜಿಕ ಅರಣ್ಯ ಮತ್ತು ಯೋಜನಾ ವಿಭಾಗಕ್ಕೆ, ಭದ್ರಾ ಹುಲಿ ಸಂರಕ್ಷಿತ ಅರಣ್ಯದ ಕ್ಷೇತ್ರ ನಿರ್ದೇಶಕ ಯಶ್‌ಪಾಲ್ ಕ್ಷೀರಸಾಗರ್ ಅವರನ್ನು ಚಿಕ್ಕಮಗಳೂರು ವೃತ್ತಕ್ಕೆ ವರ್ಗಾವಣೆ ಮಾಡಲಾಗಿದೆ.

ಡಿಸಿಎಫ್‌ಗಳಾದ ಪ್ರಭಾಕರ್ ಪ್ರಿಯದರ್ಶಿನಿ ಅವರನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಿಂದ ಯಾದಗಿರಿ ವಿಭಾಗಕ್ಕೆ, ಕಾಜೋಲ್ ಅಜಿತ್ ಪಾಟೀಲ್ ಅವರನ್ನು ಯಾದಗಿರಿ ವಿಭಾಗದಿಂದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ, ಎಸಿಎಫ್ ವಿ. ಅಭಿಷೇಕ್ ಅವರನ್ನು ಎಚ್.ಡಿ. ಕೋಟೆ ವಿಭಾಗದಿಂದ ಕಾಡುಗೋಡಿಗೆ, ಪುಲ್‌ಕಿತ್ ಮೀನಾ ಅವರನ್ನು ಹಾಸನ ವಿಭಾಗದಿಂದ ಭದ್ರಾ ಹುಲಿ ಸಂರಕ್ಷಿತ ಅರಣ್ಯ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ.

ಕೇಂದ್ರ ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಆಪ್ತ ಕಾರ್ಯದರ್ಶಿಯಾಗಿ ನೇಮಕವಾಗಿರುವ ತಕತ್ ಸಿಂಗ್ ರಣಾವತ್ ಅವರಿಗೆ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯಿಂದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಬಡ್ತಿ ನೀಡಲಾಗಿದೆ.

245.	ನಾರಾಯಣಸ್ವಾಮಿ ಬಿನ್ ಕೆ.ಮುನಿಯಪ್ಪ	133/1	1-11	-	1-11
246.	ನಾರಾಯಣಸ್ವಾಮಿ ಬಿನ್ ಕೆ.ಮುನಿಯಪ್ಪ	134/1	0-29	-	0-29
247.	ಎಂ.ಕೃಷ್ಣಪ್ಪ ಬಿನ್ ಲೇ ಕೆ. ಮುನಿಯಪ್ಪ	134/2	2-00	-	2-00
248.	ಅಶ್ವಥಪ್ಪ ಬಿನ್ ಲೇ ಕೆ. ಮುನಿಯಪ್ಪ	134/3	2-00½	0-00½	2-00
249.	ಚಿಕ್ಕಮುನೆಮ್ಮ ಕೋಂ ಲೇ ಕೆ.ಮುನಿಯಪ್ಪ	134/4	1-00½	0-00½	1-00
250.	ಎಸ್.ಪಿ.ನಾರಾಯಣಸ್ವಾಮಿ ಬಿನ್ ಚಿಕ್ಕಪಿಳ್ಳಪ್ಪ	135	1-20	-	1-20
251.	ಪಹಣಿ ಲಭ್ಯವಿಲ್ಲ	136	4-00	-	4-00

ಗ್ರಾಮ: ಹುಂಗೇನಹಳ್ಳಿ ಹೋಬಳಿ : ಕಸಬಾ ತಾಲ್ಲೂಕು: ಮಾಲೂರು ಜಿಲ್ಲೆ: ಕೋಲಾರ

ಕ್ರ. ಸಂ	ಭೂಮಾಲೀಕರ ಹೆಸರು	ಸರ್ವೆ ನಂ.	ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
1.	V. ಮಹೇಂದ್ರಕುಮಾರ್ ಬಿನ್ ವಿಜಯರಾಜ್	27/1	0–18	–	0–18
2.	V. ಮಹೇಂದ್ರಕುಮಾರ್ ಬಿನ್ ವಿಜಯರಾಜ್	27/2	0–16	–	0–16
3.	ವಿ.ಮಹೇಂದ್ರಕುಮಾರ್ ಬಿನ್ ವಿಜಯರಾಜ್, H. V. ಸುಬ್ರಮಣ್ಯಂ ಬಿನ್ ವೆಂಕಟೇಶಗೌಡ, ಹೆಚ್.ವಿ.ಮುನಿನಾರಾಯಣ ಬಿನ್ ವೀರಣ್ಣ, ನಾರಾಯಣಸ್ವಾಮಿ ಬಿನ್ ಪಾಪಣ್ಣ, ಪಾಪಣ್ಣ ಬಿನ್ ಮುನಿವೆಂಕಟಪ್ಪ, ಪಾಪಮ್ಮ ಕೋಂ ಮುನಿಯಪ್ಪ, ಹೆಚ್.ವಿ. ನಾರಾಯಣಸ್ವಾಮಿ, ಬಿನ್ ವೆಂಕಟರಮಣಪ್ಪ, ಮಹಮದ್ ವಿ.ಮಹೇಂದ್ರಕುಮಾರ್ ಬಿನ್ ವಿಜಯರಾಜ್, H. V. ಸುಬ್ರಮಣ್ಯಂ ಬಿನ್ ವೆಂಕಟೇಶಗೌಡ, ಹೆಚ್.ವಿ.ಮುನಿನಾರಾಯಣ ಬಿನ್ ವೀರಣ್ಣ, ನಾರಾಯಣಸ್ವಾಮಿ ಬಿನ್ ಪಾಪಣ್ಣ, ಪಾಪಣ್ಣ ಬಿನ್ ಮುನಿವೆಂಕಟಪ್ಪ, ಪಾಪಮ್ಮ ಕೋಂ ಮುನಿಯಪ್ಪ, ಹೆಚ್.ವಿ. ನಾರಾಯಣಸ್ವಾಮಿ, ಬಿನ್ ವೆಂಕಟರಮಣಪ್ಪ, ಮಹಮದ್ ನಜೀರ್, ಷೇಕ್ ಮುನಾನರ್ ಬಿನ್ ಇಮಾಂಸಾಬಿ, ಇಸ್ಮಾಯಿಲ್ ಬಿನ್ ಗೌಸ್ ಸಾಬಿ, ಪ್ಯಾರೇಜಾನ್ ಬಿನ್ ಗೌಸುಸಾಬಿ, ನಜೀರ್ ಸಾಬಿ ಬಿನ್ ಬಾಷಸಾಬಿ, ರಮೀಜಾ ಬೀ ಕೋಂ ಮಹಮದ್ ಷರೀಪ್ ನನ್ನಾ ಸಾಬಿ, ಬಿ. ವಿಶ್ವನಾಥ್ ಬಿನ್ ಬೀರಪ್ಪ, ರತ್ನಮ್ಮ ಕೋಂ ಮುನಿಯಪ್ಪ, ಅಬ್ದುಲ್ ರಜಾಕ್ ಬಿನ್ ಅಬ್ದುಲ್ ಗೌಸ್, ಸರ್ಕಾರಿ, ಕೃಷ್ಣಪ್ಪ ಬಿನ್ ಹನುಮಂತಪ್ಪ, ಆರ್.ಪಿ.ಮಂಜುನಾಥ ಬಿನ್ ಪಾಪಣ್ಣ, ಹೆಚ್.ಸಿ. ದೇವರಾಜ್ ಬಿನ್ ಹೆಚ್.ಎಸ್. ಚಿಕ್ಕವೀರೇಗೌಡ, ಎಚ್. ಟಿ. ಶಾಮಣ್ಣಗೌಡ ಬಿನ್ ತಿಮ್ಮೇಗೌಡ, ವನಿತಾ.ಹೆಚ್.ಎಂ ಬಿನ್ ಹೆಚ್.ವಿ. ಮುನಿನಾರಾಯಣ, ಸೊಣ್ಣಪ್ಪ ಬಿನ್ ನಾರಾಯಣಪ್ಪ, ಶ್ರೀನಿವಾಸಪ್ಪ ಬಿನ್ ನಾರಾಯಣಪ್ಪ,ಮೇಲಿನ ಜಂಟಿ, ಎಚ್.ಟಿ.ಶ್ಯಾಮಣ್ಣಗೌಡ ಬಿನ್ ಮುನಿತಿಮ್ಮೇಗೌಡ, ಸವಿತಾ.ಹೆಚ್.ಎಂ. ಬಿನ್ ಮುನಿನಾರಾಯಣ ಹೆಚ್.ವಿ, ಮುನಿಶಾಮಿ ಬಿನ್ ತಾಯಪ್ಪ, ರಾಜಣ್ಣ ಬಿನ್ ತಾಯಪ್ಪ, ನಾಗರಾಜ ಬಿನ್ ತಾಯಪ್ಪ, ಮುನಿಯಮ್ಮ ವುಃ ಗುಳ್ಳಮ್ಮ, ತಾಯಪ್ಪ, ಎ.ಆರ್. ನಂಜೇಗೌಡ ಬಿನ್ ರಾಜೇಗೌಡ, ಎ.ಆರ್.ಮಲ್ಲಿಕಾರ್ಜುನ ಬಿನ್ ರಾಜೇಗೌಡ, ಎ.ಆರ್.ಅರುಣ್ ಕುಮಾರ್ ಬಿನ್ ರಾಜೇಗೌಡ, ಎ.ಆರ್.ಸಂಪತ್ ಕುಮಾರ್ ಬಿನ್ ರಾಜೇಗೌಡ, ಆರ್.ಶಂಕರ್ ಬಿನ್ ಎನ್ ರಾಮೇಗೌಡ, ಹೆಚ್.ಸಿ.ರಾಜಣ್ಣ ಬಿನ್ ಹೆಚ್.ಎಸ್. ಚಿಕ್ಕವೀರೇಗೌಡ, ಕೃಷ್ಣೇಗೌಡ ಬಿನ್ ಹೆಚ್ .ಎಸ್. ಚಿಕ್ಕವೀರೇಗೌಡ, ಷೇಕ್ ಮುನಾವರ್ ಬಿನ್ ಲೇ ಇಮಾಂಸಾಬಿ, ಹೆಚ್.ಎನ್. ದೇವರಾಜ್ ಬಿನ್ ಲೇ ನಂಜುಂಡಪ್ಪ, ನಾಗರಾಜಪ್ಪ ಬಿನ್ ರಾಮಯ್ಯ, ಜೈಯಬುನ್ನೀಸಾ ಕೋಂ ಮಹಮದ, ಕೆ. ಮುನಿಯಪ್ಪ ಬಿನ್ ಕುಚ್ಚಪ್ಪ ಹೆಚ್.ಸಿ.ದೇವರಾಜ್ ಬಿನ್ ಹೆಚ್. ಎಸ್. ಚಿಕ್ಕವೀರೇಗೌಡ, ಹೆಚ್.ಸಿ.ಚಂದ್ರೇಗೌಡ ಬಿನ್ ಹೆಚ್.ಎಸ್. ಚಿಕ್ಕವೀರೇಗೌಡ, ಹರೀಶ್ ಬಿನ್ ಲೇ ನಂಜೇಗೌಡ, ಸತೀಶ್ ಬಿನ್ ಲೇ ನಂಜೇಗೌಡ, ಹೆಚ್.ಎಂ. ವೀರೇಗೌಡ ಬಿನ್ ಮುನಿಶಾಮಪ್ಪ, ಸಂಪಂಗಮ್ಮ ಕೋಂ ಅಣ್ಣಯ್ಯಪ್ಪ, ಗುಜ್ಜಮ್ಮ ಕೋಂ ಅಣ್ಣಯ್ಯಪ್ಪ, ಮುನಿಯಪ್ಪ ಬಿನ್ ಮುನಿಶಾಮಪ್ಪ, ತಿಮ್ಮಪ್ಪ ಬಿನ್ ಮುನಿಶಾಮಪ್ಪ, ಭೀಬೀಜಾನ್ ಬಿನ್ ಹಸೇನ್ ಸಾಬ್ , ಷೇಕ್ ನಜೀರ್ ಬಿನ್ ಗೌಸು ಸಾಬಿ, ಜಬ್ಬಾರ್ ಸಾಬಿ, ಕರೀಂ ಸಾಬಿ, ಖಾಸೀಂಸಾಬಿ, ಷೇಕ್ ನಜೀರ್ ಬಿನ್ ಗೌಸುಸಾಬಿ, ರೇಖಾ. ಕೆ ಕೋಂ ಚಂದ್ರಾರೆಡ್ಡಿ ಶ್ರೀರಾಮಕೃಷ್ಣ ಬಿನ್ ಕು. ಮುನೆಪ್ಪ, ಶ್ರೀನಿವಾಸಾಚಾರಿ ಬಿನ್ ಭದ್ರಾಚಾರಿ, ನಂಜುಂಡಚಾರಿ ಬಿನ್ ಭದ್ರಾಚಾರಿ, ಮಾರ್ಕಂಡಾಚಾರಿ ಬಿನ್ ಭದ್ರಾಚಾರಿ, ಎಸ್.ವಿ. ಹನುಮಂತರೆಡ್ಡಿ ಬಿನ್ ವೆಂಕಟರಮಣರೆಡ್ಡಿ, ಎಸ್. ಬಿ. ಹನುಮಂತರೆಡ್ಡಿ ಬಿನ್ ವೆಂಕಟರಮಣರೆಡ್ಡಿ, ಕಮಲಮ್ಮ ಕೋಂ ಹೆಚ್.ವಿ. ಕೃಷ್ಣಪ್ಪ, ಸವಿತಾ ಹೆಚ್.ಎಂ ಬಿನ್ ಮುನಿನಾರಾಯಣ ಹೆಚ್.ವಿ. ಹುಸೇನ್ ಸಾಬಿ , ಮಹಮದ್ ನಜೀರ್ ಬಿನ್ ಗೌಸುಸಾಬಿ, ಬಿ. ಮುನಿಲಿಂಗ ಬಿನ್ ಕೆಂಪ, ಷೇಕ್ ಹೈದರ್ ಬಿನ್ ದಸ್ತಗೀರ್ ಸಾಬಿ, ಕುಂಟನರಸಿಂಹ ಬಿನ್ ತಾಯಪ್ಪ, ವನಿತಾ. ಹೆಚ್.ಎಂ ಬಿನ್ ಮುನಿನಾರಾಯಣ. ಹೆಚ್. ವಿ, ಸಿದ್ದಪ್ಪ ಬಿನ್ ಪುಟಾರಪ್ಪ, ವೆಂಕಟಶಾಮಿ.ಎಸ್. ಕೆ ಬಿನ್ ಜಯಮ್ಮ, ಸರಸ್ವತಮ್ಮ ಬಿನ್ ಕು.ನಾಗಪ್ಪ, ಶಾಂತಮ್ಮ ಬಿನ್ ಕು.ನಾಗಪ್ಪ, ಎಸ್.ವಿ.ಹನುಮಂತರೆಡ್ಡಿ ಬಿನ್ ವೆಂಕಟರಮಣರೆಡ್ಡಿ, ಎಂ. ಜಯಲಕ್ಷ್ಮಿ ಕೋಂ ಎಂ. ಮೂರ್ತಿ, ಎಸ್.ಬಿ. ಹನುಮಂತರೆಡ್ಡಿ ಬಿನ್ ವೆಂಕಟರಮಣರೆಡ್ಡಿ, ಇಸ್ಮಾಯಿಲ್, ಎಸ್.ವಿ.ಹನುಮಂತರೆಡ್ಡಿ ಬಿನ್ ವೆಂಕಟರಮಣರೆಡ್ಡಿ, ನಂಜುಂಡಪ್ಪ ಬಿನ್ ಹನುಮಂತಪ್ಪ, ಕೃಷ್ಣಪ್ಪ ಬಿನ್ ಹನುಮಂತಪ್ಪ, ಎಸ್. ವಿ. ಹನುಮಂತ ರೆಡ್ಡಿ ಬಿನ್ ವೆಂಕಟರಮಣರೆಡ್ಡಿ, ಸರ್ಕಾರಿ, H.T. ನಾರಾಯಣಗೌಡ ಬಿನ್ ಲೇ ಮುನಿತಿಮ್ಮೇಗೌಡ, ಹೆಚ್.ಟಿ. ಶಾಮಣ್ಣ ಗೌಡ ಬಿನ್ ಲೇ ಮುನಿತಮ್ಮಗೌಡ, H.R. ವಿಶಾವನಾಥಗೌಡ ಬಿನ್ ಲೇ ರಾಮೇಗೌಡ, ಹೆಚ್.ಎಂ. ರಾಮಯ್ಯ ಬಿನ್ ಗುಳ್ಳನಾಯಕ ವು. ಮುನಿಶಾಮಪ್ಪ, ಹೆಚ್.ಎಂ.ಶ್ರೀನಾಥ್ ಬಿನ್ ಲೇ ಮುನಿನಾರಾಯಣಗೌಡ, ಹೆಚ್. ಎಂ .ಸತೀಶ್ ಬಿನ್ ಲೇ ಮುನಿನಾರಾಯಣ ಗೌಡ, ಹೆಚ್.ಎಂ.ನಾಗೇಶ್ ಬಿನ್ ಲೇ ಮುನಿನಾರಾಯಣಗೌಡ, ಸರ್ಕಾರಿ, ಕೆ. ರೇಖಾ ಕೋಂ ಚಂದ್ರಾ ರೆಡ್ಡಿ, ನಾರಾಯಣಮ್ಮ ಕೋಂ ನಾರಾಯಣಪ್ಪ, ಸವಿತಾ.ಹೆಚ್. ಎಂ. ಬಿನ್ ಮುನಿನಾರಾಯಣ.ಹೆಚ್.ವಿ, ನಾಗರಾಜ ಬಿನ್ ಚೌಡಪ್ಪ, ಕೃಷ್ಣವೇಣಮ್ಮ ಕೋಂ ವೆಂಕಟಾಚಲ, K.P. ರಮೇಶ್ ಬಿನ್ ಪಾಪಣ್ಣ, ಆರ್.ಪಿ. ನಾರಾಯಣಸ್ವಾಮಿ ಬಿನ್ ಪಾಪಣ್ಣ, ಸರ್ಕಾರಿ ಗೋಮಾಳ, ನಾರಾಯಣಮ್ಮ ಕೋಂ ನಾರಯಣಪ್ಪ, ಗುಲಾಬ್ ಜಾನ್ ಬಿನ್ ಅಬ್ದುಲ್ ರಜಾಕ್, ರಾಮಕ್ಕ ಕೋಂ ಎಸ್. ಕೃಷ್ಣಪ್ಪ, ಹೆಚ್. ಕೆ. ನಾಗೇಂದ್ರ ಕುಮಾರ್ ಬಿನ್ ಎಸ್.ಕೃಷ್ಣಪ್ಪ, ಹೆಚ್.ಕೆ. ಪೃಥ್ವೀರಾಜ್ ಬಿನ್ ಎಸ್. ಕೃಷ್ಣಪ್ಪ, ಹೆಚ್. ಕೆ. ಜಯಕಾಂತ ಬಿನ್ ಎಸ್. ಕೃಷ್ಣಪ್ಪ, ಹೆಚ್. ಕೆ.ಚಂದ್ರ ಶೇಖರ್ ಬಿನ್ ಎಸ್.ಕೃಷ್ಣಪ್ಪ, ಮೇಲಿನ ಜಂಟಿ, ಮುನಿರತ್ನಮ್ಮ ಕೋಂ ತಿಮ್ಮಯ್ಯ , ನಾಗೇಶ್ ಟಿ ಬಿನ್ ಲೇ ತಿಪ್ಪಯ್ಯ, ಅನಂತ್.ಟಿ ಬಿನ್ ಲೇ ತಿಪ್ಪಯ್ಯ, ಬೈಚಮ್ಮ ಕೋಂ ಲೇ ಹೆಚ್.ವಿ. ಮುನಿಯಪ್ಪ, ಹೆಚ್.ವಿ.ವೆಂಕಟಾಚಲಪ್ಪ ಬಿನ್ ಕೆ.ವೆಂಕಟಪ್ಪ, ಶೇಖ್ ಬಹದ್ದೂರ್ ಬಿನ್ ಲೇ ವಲ್ಲಸಾಬಿ, ಜರೇನತಾಜ್ ಕೋಂ ಶೇಖ್ ಬಹದ್ದೂರ್, ಹೆಚ್.ಪಿ.ನಾಗರಾಜ್ ಬಿನ್ ಲೇ ಪಾರ್ವತಯ್ಯ, ಗೌರಮ್ಮ ಬಿನ್ ಲೇ ಪಾರ್ವತಯ್ಯ, ಟಿ.ಆರ್. ಗುರುದೇವ್ ಬಿನ್ ಲೇ ಪಾರ್ವತಯ್ಯ, ಹೆಚ್.ಆರ್.ರಾಜಶೇಖರಯ್ಯ ಬಿನ್ ಲೇ ಪಾರ್ವತಯ್ಯ, ಮೇಲಿನ ಜಂಟಿ, ನಂಜುಂಡಯ್ಯ ಬಿನ್ ಲೇ ಪಾರ್ವತಯ್ಯ, ರೇಣುಕಾರಾಧ್ಯ ಬಿನ್ ಲೇ ಮಲ್ಲೇಶ್, ದೇವೀರಮ್ಮ ಬಿನ್ ಲೇ ಪಾರ್ವತಯ್ಯ, ಪುಟ್ಟಮ್ಮ ಬಿನ್ ಲೇ ಪಾರ್ವತಯ್ಯ, ಮಾಳಿಗೇಶ್ವರಾಚಾರಿ ಬಿನ್ ಲೇ ಬಿ. ವೀರಭದ್ರಾಚಾರಿ, ವಿ.ಸೋಮಾನಂದ ಬಿನ್ ಲೇ ಬಿ. ವೀರಭದ್ರಾಚಾರಿ, ವಿ. ಭುವನೇಶ್ವರ ಬಿನ್ ಲೇ ಬಿ. ವೀರಭದ್ರಾಚಾರಿ, ವಿ.ಕೇಶವ ಬಿನ್ ಲೇ ಬಿ. ವೀರಭದ್ರಾಚಾರಿ, ಬೃಂದ ಬಿನ್ ಲೇ ಮಂಜುನಾಥಾಚಾರಿ, ಭೂಮಿಕಾ ಬಿನ್ ಲೇ ಮಂಜುನಾಥಾಚಾರಿ, ಹರೀಶ್ ಕುಮಾರ್ ಹೆಚ್. ಎಸ್. ಬಿನ್ ಸೊಣ್ಣಪ್ಪ, ಸಂಪತ್ ಕುಮಾರ್ ಬಿನ್ ಲೇ ಹನುಮಂತಪ್ಪ	28 ರ ಪೈಕಿ	141-24	141-24	-
4.	ತೋಪು	29	2-13	-	2-13
5.	ಶ್ರೀನಿವಾಸಗೌಡ ಬಿನ್ ನಾರಾಯಣಪ್ಪ	38/1	1-10	-	1-10
6.	ಭೌರಿದೇವಿ ಕೋಂ ಕೆ. ಮಂಗೀಲಾಲ್	38/2	1-17½	0-03	1-14½
7.	ಸೊಣ್ಣಪ್ಪ ಬಿನ್ ನಾರಾಯಣಪ್ಪ	38/3	1-18	0-02	1-16
8.	ಕೆ. ಮಾಂಗಿಲಾಲ್ ಬಿನ್ ಕೇಶವರಾಂಜೀ	38/4	1-14½	-	1-14½
9.	ಕೃಷ್ಣಪ್ಪ ಬಿನ್ ಹನುಮಂತಪ್ಪ	39/1	0-16	-	0-16
10.	ವೀರೇಗೌಡ. ಹೆಚ್.ಎನ್ ಬಿನ್ ನಾರಾಯಣಪ್ಪ ಭೂ.ಪ.	39/2	0-23	0-03	0-20
11.	ವೆಂಕಟೇಶ ಬಿನ್ ಲೇ ಎಂ. ವೆಂಕಟಶಾಮಿ, ಭೂ.ಪ.	39/3	0-21	0-03	0-18
12.	ವೆಂಕಟೇಶ ಬಿನ್ ಲೇ ವೆಂಕಟಶಾಮಿ. ಎಂ., ಭೂ.ಪ.	39/4	0-25	0-03	0-22
13.	ಆರ್.ಪಿ. ಮಂಜುನಾಥ ಬಿನ್ ಪಾಪಣ್ಣ	39/5	0-21	0-05	0-16
14.	ವೀರೇಗೌಡ. ಹೆಚ್.ಎನ್ ಬಿನ್ ನಾರಾಯಣಪ್ಪ, ಭೂ.ಪ.	39/6	0-23	0-05	0-18
15.	ನಿ. . ವೆಂಕಟಶಾಮಿ ಬಿನ್ ಹನುಮಪ್ಪ	160	2-13	0-01	2-12
16.	ಆರ್.ಪಿ. ಮಂಜುನಾಥ ಬಿನ್ ಪಾಪಣ್ಣ, ಭೂ.ಪ	161/1	2-01	0-01	2-00
17.	ಆರ್.ಪಿ. ಮಂಜುನಾಥ ಬಿನ್ ಪಾಪಣ್ಣ, ಭೂ.ಪ	161/2	0-15	-	0-15
18.	ಆರ್.ಪಿ. ಮಂಜುನಾಥ ಬಿನ್ ಪಾಪಣ್ಣ, ಭೂ.ಪ	162/1	2-01	0-01	2-00
19.	ಆರ್.ಪಿ. ಮಂಜುನಾಥ ಬಿನ್ ಪಾಪಣ್ಣ, ಭೂ.ಪ	162/2	0-12	-	0-12
20.	ಮುನಿಕೃಷ್ಣಪ್ಪ ಬಿನ್ ಲೇ ಚಿಕ್ಕಣ್ಣ, ವೆಂಕಟಪ್ಪ ಬಿನ್ ಲೇಟ್ ತೋಟಿಮುನಿಶಾಮಪ್ಪ, ರಾಜಣ್ಣ ಬಿನ್ ಲೇಟ್ ತೋಟಿಮುನಿಶಾಮಪ್ಪ, ಮುನಿರಾಜು ಬಿನ್ ಲೇಟ್ ವೆಂಕಟಸ್ವಾಮಿ, ಹೆಚ್.ಎಸ್. ಕರಗಪ್ಪ ಬಿನ್ ಲೇಟ್ ಸಾದಪ್ಪ	163/1	1-08	0-02	1-06
21.	ಆರ್.ಪಿ. ಮಂಜುನಾಥ ಬಿನ್ ಪಾಪಣ್ಣ, ಭೂ.ಪ	163/2	1-08	0-02	1-06
22.	ಆರ್.ಪಿ. ನಾರಾಯಣಸ್ವಾಮಿ ಬಿನ್ ಪಾಪಣ್ಣ	164/1	0-31	0-01	0-30
23.	ಆರ್.ಪಿ. ನಾರಾಯಣಸ್ವಾಮಿ ಬಿನ್ ಪಾಪಣ್ಣ	164/2	0-31	0-01	0-30
24.	ಕೃಷ್ಣಪ್ಪ ಬಿನ್ ವೆಂಕಟಸ್ವಾಮಿ– ಭೂ.ಪ ವಿಜಯಲಕ್ಷ್ಮಿ ಕೋಂ ಕೃಷ್ಣಪ್ಪ– ಭೂ.ಪ	164/3	0-31	0-02	0-29
25.	ವೆಂಕಟಮ್ಮ ಕೋಂ ಲೇ ಚಿಕ್ಕಹನುಮಪ್ಪ, ಸೊಣ್ಣಪ್ಪ ಬಿನ್ ಲೇ ಚಿಕ್ಕಹನುಮಪ್ಪ	165	2-09	0-03	2-06
26.	ಮುನಿಯಮ್ಮ ಕೋಂ ಪಾಪಣ್ಣ	166	2-10	0-05	2-05
27.	ತಿಮ್ಮಕ್ಕ ಬಿನ್ ಲೇ ತಿಮ್ಮರಾಯಪ್ಪ, ಅಮರಾವತಿ ಬಿನ್ ಲೇ ತಿಮ್ಮ ರಾಯಪ್ಪ, ವೆಂಕಟಲಕ್ಷ್ಮಿ ಬಿನ್ ಲೇ ತಿಮ್ಮರಾಯಪ್ಪ, ಅನಿತ ಬಿನ್ ಲೇ ತಿಮ್ಮ ರಾಯಪ್ಪ, ಮೇಲಿನ ಜಂಟಿ	167	2-10	0-01	2-09
28.	ಮುನಿಕೃಷ್ಣಪ್ಪ ಬಿನ್ ಲೇ ಚಿಕ್ಕಣ್ಣ	168/1	1-01½	0-01½	1-00
29.	ಹೆಚ್. ಎಂ. ಜಯಮ್ಮ ಕೋಂ ಎನ್ . ಮುನಿಕೃಷ್ಣ	168/2	1-07½	0-01½	1-06
30.	ವೆಂಕಟೇಶ್. ಎಂ ಬಿನ್ ದೊಡ್ಡಮುನಿಯಪ್ಪ	169	2-11	0-01	2-10
31.	ಮಹಮದ್ ನಯೀಮ್ .ಹೆಚ್.ಎಂ ಬಿನ್ ಲೇ ಮಹಮದ್ ನಜೀರ್	170	2-17	0-02	2-15
32.	ವೆಂಕಟೇಶ ಬಿನ್ ವೆಂಕಟಶಾಮಿ. ಎಂ, ಭೂ.ಪ	171/1	0-37	0-11	0-26
33.	ಜಿ.ರಘು ಬಿನ್ ಲೇ ಗುರುಮೂರ್ತಿ ರೆಡ್ಡಿ	171/2	0-28½	-	0-28½
34.	ಹೆಚ್.ಎಂ.ಜಯಮ್ಮ ಕೋಂ ಎನ್ ಮುನಿಕೃಷ್ಣ	171/3	0-23½	-	0-23½
35.	ಕೃಷ್ಣಪ್ಪ ಬಿನ್ ಲೇ ಕಾವಲರಾಮಪ್ಪ, ಮುನಿಯಪ್ಪ ಬಿನ್ ಲೇ ಮುನಿಶಾಮಪ್ಪ ಉ. ಪುಕ್ಕಪ್ಪ, ಮೇಲಿನ ಜಂಟಿ	171/4	0-24	-	0-24
36.	ಪಹಣಿ ಲಭ್ಯವಿಲ್ಲ	172	1-24	0-02	1-22
37.	ಪಹಣಿ ಲಭ್ಯವಿಲ್ಲ	175	1-30	-	1-30
38.	ಪಹಣಿ ಲಭ್ಯವಿಲ್ಲ	176	0-29	-	0-29
39.	ಪಹಣಿ ಲಭ್ಯವಿಲ್ಲ	177	1-26	-	1-26
40.	ಪಹಣಿ ಲಭ್ಯವಿಲ್ಲ	178	1-16	-	1-16
41.	ಪಹಣಿ ಲಭ್ಯವಿಲ್ಲ	179	2-15	-	2-15
42.	ಪಹಣಿ ಲಭ್ಯವಿಲ್ಲ	180	2-38	-	2-38
43.	ಪಹಣಿ ಲಭ್ಯವಿಲ್ಲ	181	1-16	-	1-16
44.	ಪಹಣಿ ಲಭ್ಯವಿಲ್ಲ	182	1-31	-	1-31
45.	ಪಹಣಿ ಲಭ್ಯವಿಲ್ಲ	183	1-27	-	1-27
46.	ಪಹಣಿ ಲಭ್ಯವಿಲ್ಲ	184	1-12	-	1-12
47.	ಪಹಣಿ ಲಭ್ಯವಿಲ್ಲ	185	4-12	-	4-12
48.	ಪಹಣಿ ಲಭ್ಯವಿಲ್ಲ	186	1-17	-	1-17
49.	ಪಹಣಿ ಲಭ್ಯವಿಲ್ಲ	187	0-30	-	0-30
50.	ಪಹಣಿ ಲಭ್ಯವಿಲ್ಲ	188	0-33	-	0-33
51.	ಪಹಣಿ ಲಭ್ಯವಿಲ್ಲ	189	1-00	-	1-00

ಗ್ರಾಮ: ವರದೇನಹಳ್ಳಿ ಹೋಬಳಿ : ಕಸಬಾ ತಾಲ್ಲೂಕು: ಮಾಲೂರು ಜಿಲ್ಲೆ: ಕೋಲಾರ

ಕ್ರ. ಸಂ	ಭೂಮಾಲೀಕರ ಹೆಸರು	ಸರ್ವೆ ನಂ.	ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
1.	ಎಸ್.ತಿಮ್ಮರಾಯಪ್ಪ ಬಿನ್ ಚನ್ನಪ್ಪ	61	4-07	-	4-07
2.	ಎಸ್.ತಿಮ್ಮರಾಯಪ್ಪ ಬಿನ್ ಚನ್ನಪ್ಪ , ಮುನಿಯಮ್ಮ ಕೋಂ ಹೆಚ್. ಎಂ.ನಂಜಪ್ಪ	62	3-16	-	3-16
3.	ವರಲಕ್ಷ್ಮಮ್ಮ ಬಿನ್ ಕೃಷ್ಣಪ್ಪ , ಶಾರದಮ್ಮ ಬಿನ್ ಕೃಷ್ಣಪ್ಪ. ಮೇಲಿನ ಜಂಟಿ	63/1	2-07	-	2-07
4.	ಹರಿದಾಸ್. ಕೆ.ಎ. ಬಿನ್ ಆಂಜಿನೇಯಪ್ಪ. ಕೆ.ಎಂ	63/2	1-25	-	1-25
5.	ಹರಿದಾಸ್. ಕೆ.ಎ. ಬಿನ್ ಆಂಜಿನೇಯಪ್ಪ. ಕೆ.ಎಂ	63/3	0-37	-	0-37
6.	ಎಸ್.ಟಿ.ಹೇಮೆಗೌಡ ಬಿನ್ ಲೇ ಎಂ. ತಿಮ್ಮಯ್ಯ	63/4	0-31	-	0-31
7.	ಜುಬೇದಾ ಬೇಗಂ ಕೋಂ ಚಾನ್ ಪಾಷ	64/1	2-12	-	2-12
8.	ಜುಬೇದಾ ಬೇಗಂ ಕೋಂ ಚಾನ್ ಪಾಷ	64/2	2-22	-	2-22
9.	ವನಿತಾ ಹೆಚ್.ಎಂ ಬಿನ್ H.V. ಮುನಿನಾರಾಯಣ	65/1	1-35	0-18	1-17
10.	ಎಸ್.ಹೆಚ್.ವೇಣುಗೋಪಾಲ್ ಬಿನ್ ಎಸ್.ವಿ.ಹನುಮಂತರೆಡ್ಡಿ	65/2	0-19½	0-01½	0-18
11.	ಕಮಲಮ್ಮ ಕೋಂ ಹೆಚ್.ವಿ. ಕೃಷ್ಣಪ್ಪ	65/3	0-09½	0-00½	0-09
12.	ಆರ್.ಪಿ.ಮಂಜುನಾಥ ಬಿನ್ ಪಾಪಣ್ಣ, ಕೃಷ್ಣೇಗೌಡ ಬಿನ್ ಪಾಪಣ್ಣ	66/1	1-01	-	1-01
13.	ಆರ್.ಪಿ. ಕೃಷ್ಣೇಗೌಡ ಬಿನ್ ಪಾಪಣ್ಣ	66/2	1-00	-	1-00
14.	ಆರ್.ಪಿ. ಕೃಷ್ಣೇಗೌಡ ಬಿನ್ ಪಾಪಣ್ಣ	66/3	1-00	-	1-00
15.	ಆರ್.ಪಿ.ನಾರಾಯಣಸ್ವಾಮಿ ಬಿನ್ ಪಾಪಣ್ಣ	67/1	3-00	-	3-00
16.	ಆರ್.ಷಣ್ಮುಗಂ ಬಿನ್ ಎನ್.ರಾಮಚಂದ್ರ	67/2	2-20	-	2-20
17.	ಎಸ್.ಕೆ.ಶಿವಣ್ಣ ಬಿನ್ ಎಸ್.ಸಿ. ಕಲ್ಲಪ್ಪ	68	4-01	-	4-01
18.	ತಿಮ್ಮಕ್ಕ ಬಿನ್ ಲೇ ತಿಮ್ಮರಾಯಪ್ಪ, ಅಮರಾವತಿ ಬಿನ್ ಲೇ ತಿಮ್ಮರಾಯಪ್ಪ, ವೆಂಕಟಲಕ್ಷ್ಮಿ ಬಿನ್ ಲೇ ತಿಮ್ಮರಾಯಪ್ಪ, ಅನಿತ ಬಿನ್ ಲೇ ತಿಮ್ಮರಾಯಪ್ಪ	69/1	1-10	-	1-10
19.	ಕೃಷ್ಣಪ್ಪ. ಎಸ್ ಬಿನ್ ಸುಂದರಪ್ಪ, ಗೌರಮ್ಮ ಬಿನ್ ತಿಮ್ಮಯ್ಯ	69/2	1-26	-	1-26
20.	ಹೆಚ್.ವಿ.ಶಿವಶಂಕರ್ ಬಿನ್ ಎಂ.ವೆಂಕಟರಮಣ	69/3	0-32	-	0-32
21.	H. R.ವೆಂಕಟೇಶರೆಡ್ಡಿ ಬಿನ್ ರಾಮಯ್ಯರೆಡ್ಡಿ	70/1	2-03	-	2-03
22.	H.R.ವೆಂಕಟೇಶರೆಡ್ಡಿ ಬಿನ್ ರಾಮಯ್ಯರೆಡ್ಡಿ	70/2	2-02	-	2-02

–: ಘೋಷ್ವಾರೆ :–

ಕ್ರ.ಸಂ	ಗ್ರಾಮ	ವಿಸ್ತೀರ್ಣ		
		ಐನ್ಎ–ಗು	ಖರಾಬು ಎ–ಗು	ಬಾಕಿ ಎ–ಗು
1	ಜಕ್ಕಸಂದ್ರ	153-21¾	83-27	69-34¾
2	ಶಿವಾರಪಟ್ಟಣ	536-37	233-07	303-30
3	ರಾಮೇನಹಳ್ಳಿ	217-36	20-34	197-02
4	ಕಣಿವೇನಹಳ್ಳಿ	479-24¾	9-00½	470-24¼
5	ಹುಂಗೇನಹಳ್ಳಿ	208-26	143-07	65-19
6	ವರದೇನಹಳ್ಳಿ	40-36	0-20	40-16
	ಒಟ್ಟು	**1637-21½**	**490-15½**	**1147-06**

ಸಹಿ/– ವಿಶೇಷ ಸ್ವಾಧೀನಾಧಿಕಾರಿಕಾರಿ–1, ಕೆ.ಐ.ಎ.ಡಿ.ಬಿ., ಅರಮನೆ ರಸ್ತೆ, ಬೆಂಗಳೂರು .





ಮದ್ಯ ವ್ಯಾಪಾರ ಭರ್ಜರಿ

ಪಬ್ ಮತ್ತು ಬೇಕರಿಗಳಲ್ಲಿ ಭರ್ಜರಿ ವ್ಯಾಪಾರ ನಡೆಯಿತು. ಬೇಕರಿಗಳಲ್ಲಿ ವಿಭಿನ್ನವಾದ ಕೇಕ್ ತಯಾರಿಸಲಾಗಿತ್ತು. ಬೆಳಿಗ್ಗೆಯಿಂದಲೂ ಬೇಕರಿಗಳ ಮುಂದೆ ಜನದಟ್ಟಣೆ ಕಂಡುಬಂತು. ವಿವಿಧ ಮಾದರಿಯ, ಆಕೃತಿಯ, ಬಣ್ಣದ, ಸವಿಯ ಕೇಕ್‌ಗಳು ಮಾರಾಟವಾದವು.

ಬಾರ್, ಪಬ್, ವೈನ್ ಸ್ಟೋರ್ ಸೇರಿದಂತೆ ಮದ್ಯದಂಗಡಿಗಳಲ್ಲಿ ಭರ್ಜರಿ ವ್ಯಾಪಾರ ಇತ್ತು. ಮಂಗಳವಾರ ಮಧ್ಯಾಹ್ನದಿಂದಲೇ ಮದ್ಯದಂಗಡಿಗಳಲ್ಲಿ ಭಾರಿ ಜನದಟ್ಟಣೆ ಕಂಡುಬಂತು.

ನಗರದ ಪಬ್, ರೆಸ್ಟೋರೆಂಟ್ , ರೆಸಾರ್ಟ್‌ಗಳು ಜನರಿಂದ ಭರ್ತಿಯಾಗಿದ್ದವು. ರೆಸಾರ್ಟ್‌ನ ಹೊರ ಆವರಣದಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕೆಲವರು ಹೊರ ಜಿಲ್ಲೆಗಳಾದ ಹಾಸನ, ಚಿಕ್ಕಮಗಳೂರು, ಮಡಿಕೇರಿ, ಮಂಗಳೂರು, ಉಡುಪಿ, ಮೂಡಿಗೆರೆ, ಶಿವಮೊಗ್ಗಕ್ಕೆ ಹೊಸ ವರ್ಷಾಚರಣೆಗೆ ತೆರಳಿದ್ದರು.

ಚರ್ಚ್ ಸ್ಟ್ರೀಟ್‌ನ ಪಬ್‌ವೊಂದರಲ್ಲಿ ಯುವಕ ಯುವತಿಯರು ಹೊಸ ವರ್ಷವನ್ನು ಸ್ವಾಗತಿಸಿದರು – ಚಿತ್ರ: ರಂಜು. ಪಿ



ಬ್ರಿಗೇಡ್ ರಸ್ತೆಯಲ್ಲಿ ಯುವತಿಯರ ಸಂಭ್ರಮ – ಚಿತ್ರ: ಬಿ.ಕೆ. ಜನಾರ್ದನ್



ಯುಬಿ ಸಿಟಿಯಲ್ಲಿ ಹೊಸ ವರ್ಷದ ಸ್ವಾಗತದಲ್ಲಿ ಸಿಡಿಮದ್ದಿನ ಸೊಬಗು ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಹೊಸ ವರ್ಷದ ಹೊನಲು ಖುಷಿಯ ಅಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಸಿಹಿ–ಕಹಿ ಅನುಭವಗಳನ್ನು ನೀಡಿದ '2024'ಕ್ಕೆ ನಗರದ ಜನರು ಮಂಗಳವಾರ ಮಧ್ಯರಾತ್ರಿ ವಿದಾಯ ಹೇಳಿ, ಸಂಭ್ರಮದಿಂದ ಹೊಸ ಕನಸುಗಳೊಂದಿಗೆ ನವವರ್ಷವನ್ನು ಸ್ವಾಗತಿಸಿದರು.

ಮಧ್ಯರಾತ್ರಿ 12 ಗಂಟೆಯಾಗುತ್ತಿದ್ದಂತೆ ಆಗಸದಲ್ಲಿ ಸಿಡಿಮದ್ದುಗಳ ಚಿತ್ತಾರ ಮೂಡಿತು. ಯುವಜನರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಖುಷಿಯ ಅಲೆಯಲ್ಲಿ ಜನರು ಮಿಂದೆದ್ದರು. ಶಾಂಪೇನ್ ಚಿಮ್ಮಿಸಿದರು. ಹಾಡು, ನೃತ್ಯ, ಕೇಕೆ ಹಾಗೂ ಶಿಳ್ಳೆಗಳ ಮೂಲಕ ಜನ ಹೊಸ ವರ್ಷಕ್ಕೆ ಸ್ವಾಗತ ಕೋರಿದರು. ಹಲವರು ಕೇಕ್ ಕತ್ತರಿಸಿ, ಹಂಚಿಕೊಂಡು ತಿಂದರು.

ರಸ್ತೆಗಳು, ಹೋಟೆಲ್, ಪಬ್, ಬಾರ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ನೆಚ್ಚಿನ ಹಾಡುಗಳಿಗೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದ ಯುವಕ–ಯುವತಿಯರು, 'ವೆಲ್‌ಕಮ್–2025', 'ಹ್ಯಾಪಿ ನ್ಯೂ ಇಯರ್', 'ಹೊಸ ವರ್ಷದ ಶುಭಾಶಯಗಳು' ಎಂಬ ಘೋಷಣೆ ಮೊಳಗಿಸಿದರು.

ಈ ಸಂಭ್ರಮ ವರ್ಷಪೂರ್ತಿ ಮುಂದುವರೆಯಲಿ ಎಂದು ಶುಭಾಶಯ ವಿನಿಮಯ ಮಾಡಿಕೊಂಡರು. ಆತ್ಮೀಯ ಅಪ್ಪುಗೆ ಹೊಸ ಬಾಂಧವ್ಯಗಳನ್ನು ಬೆಸೆದಿತ್ತು.

ಹೋಟೆಲ್, ಪಬ್, ಪಾರ್ಟಿ ಹಾಲ್‌ಗಳಲ್ಲಿ ಕೆಲವರು ಸಂತೋಷ ಕೂಟಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದರೆ, ಹಲವರು ತಮ್ಮ ಸ್ನೇಹಿತರ ಕೊಠಡಿಗಳು, ಮನೆಯ ಚಾವಣಿ ಮೇಲೆ ವೇದಿಕೆ ಸಿದ್ಧಪಡಿಸಿಕೊಂಡಿದ್ದರು. ತೇಲಿ ಬರುತ್ತಿದ್ದ ಸಂಗೀತಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ, ಮದಿರೆ ಹೀರುತ್ತ 'ನಶೆ'ಯಲ್ಲಿ ತೇಲುತ್ತಿದ್ದರು.

ಕೆಲವು ಬಡಾವಣೆಗಳಲ್ಲಿ ಮಕ್ಕಳು, ಗೃಹಿಣಿಯರು ಪಾಶ್ಚಾತ್ಯ ಸಂಗೀತ, ಸಿನಿಮಾ ಹಾಡುಗಳಿಗೆ ನೃತ್ಯ ಮಾಡುತ್ತ ಸಂಭ್ರಮಿಸಿದರು.

ಎಂಜಿನಿಯರಿಂಗ್, ವೈದ್ಯಕೀಯ ವಿದ್ಯಾರ್ಥಿಗಳ ಹಾಸ್ಟೆಲ್ ಹಾಗೂ ಪೇಯಿಂಗ್ ಗೆಸ್ಟ್ ಕಟ್ಟಡಗಳಲ್ಲಿ ಹೊಸ ವರ್ಷದ ಸಂಭ್ರಮ ಹೆಚ್ಚು ಕಾಣಿಸಿತು. ಕೆಲವರು ವಾಹಿನಿಗಳಲ್ಲಿನ ಹೊಸ ವರ್ಷದ ಕಾರ್ಯಕ್ರಮಗಳನ್ನು ವೀಕ್ಷಿಸುತ್ತ ಕಾಲ ಕಳೆದರು.

ನಗರದ ಮಹಾತ್ಮ ಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಚರ್ಚ್ ಸ್ಟ್ರೀಟ್, ಕಮರ್ಷಿಯಲ್ ಸ್ಟ್ರೀಟ್, ಒಪೆರಾ ಜಂಕ್ಷನ್, ರೆಸ್ಟ್‌ಹೌಸ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ರಿಚ್ಮಂಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಮಲ್ಲೇಶ್ವರದ ಸಂಪಿಗೆ ರಸ್ತೆ ಹಾಗೂ ಹೊಸೂರು ರಸ್ತೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ಪಬ್, ರೆಸ್ಟೋರೆಂಟ್‌ಗಳು ಭರ್ತಿಯಾಗಿದ್ದವು. ರಸ್ತೆಗಳು ರಂಗೇರಿದ್ದವು.

ಕೋರಮಂಗಲ, ಇಂದಿರಾನಗರದ 100 ಅಡಿ ರಸ್ತೆಯ ಹಳೇ ಮದ್ರಾಸ್ ರಸ್ತೆ, 12ನೇ ಮುಖ್ಯರಸ್ತೆಯ 80 ಅಡಿ ರಸ್ತೆಯ–ಡಬಲ್ ರೋಡ್ ಜಂಕ್ಷನ್, ಮಹದೇವಪುರದ ಐಟಿಪಿಎಲ್ ಮುಖ್ಯರಸ್ತೆ, ಗರುಡಾಚಾರ್ ಪಾಳ್ಯ, ಕೋರಮಂಗಲದ ನ್ಯಾಷನಲ್ ಗೇಮ್ ವಿಲೇಜ್, ಯುಕೊ ಬ್ಯಾಂಕ್ ರಸ್ತೆ, ವೈಡಿ ಮಠ ರಸ್ತೆ, ಬ್ಯಾಟರಾಯನಪುರದ ಮಾಲ್ ಆಫ್ ಏಷಿಯಾ, ರಾಜಾಜಿನಗರದ ಓರಾಯನ್ ಮಾಲ್‌ಗಳ ಮುಂದೆ ಜನರು ಜಮಾಯಿಸಿ, ಸಂಭ್ರಮದಿಂದ ಹೊಸ ವರ್ಷ ಆಚರಿಸಿದರು.

ಫೀನಿಕ್ಸ್ ಮಾಲ್, ವೈಟ್‌ಫೀಲ್ಡ್, ಬೆಳ್ಳಂದೂರು, ಕೊತ್ತನೂರು, ಎಚ್‌ಎಸ್‌ಆರ್ ಲೇಔಟ್‌ಗಳ ಜನರು ಹೊಸ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಿದರು.

ನಗರದಲ್ಲಿ ಮಂಗಳವಾರ ಮಧ್ಯರಾತ್ರಿ 1 ಗಂಟೆ ವರೆಗೆ ಹೊಸ ವರ್ಷಾಚರಣೆಗೆ ಪೊಲೀಸರು ಅವಕಾಶ ಕಲ್ಪಿಸಿದ್ದರು. ಹಲವೆಡೆ ಅವಧಿಗೂ ಮೀರಿ ಆಚರಣೆ ನಡೆಯಿತು.

ರಾತ್ರಿ 10 ಗಂಟೆ ಬಳಿಕ ಎಂ.ಜಿ ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆಯತ್ತ ಬರುವ ಜನರ ಸಂಖ್ಯೆ ಹೆಚ್ಚಾಗಿತ್ತು. ಸ್ಥಳದಲ್ಲಿದ್ದ ಪೊಲೀಸರು ದಟ್ಟಣೆ ನಿಯಂತ್ರಣಕ್ಕೆ ಹರಸಾಹಸ ಪಟ್ಟರು. ರಸ್ತೆಗಳಲ್ಲಿ ಗುಂಪು ಗುಂಪಾಗಿ ಕೇಕೆ ಹಾಕುತ್ತಾ ಸಾಗಿದರು. ಹಲವು ಅಪಾರ್ಟ್ ಮೆಂಟ್‌ಗಳು ವಿದ್ಯುತ್ ದೀಪಾಲಂಕಾರದಿಂದ ಝಗಮಗಿಸುತ್ತಿದ್ದವು. ಅಪಾರ್ಟ್‌ಮೆಂಟ್ ಸಂಘದವರೂ ಪಾರ್ಟಿಗಳನ್ನು ಆಯೋಜಿಸಿದ್ದರು. ಹಾಡು, ನೃತ್ಯ ಸಂಗೀತ ಕಾರ್ಯಕ್ರಮಗಳು ನಡೆದವು.

ರಾಜರಾಜೇಶ್ವರಿ ನಗರ, ಮಹಾಲಕ್ಷ್ಮಿ ಬಡಾವಣೆ, ಅಶೋಕ ನಗರ, ಮತ್ತಿಕೆರೆ, ಕೆಂಗೇರಿ, ಬಸವನಗುಡಿ, ಜಯನಗರ, ಜೆಪಿ ನಗರ, ಪೀಣ್ಯ, ಮಲ್ಲೇಶ್ವರ, ಶೇಷಾದ್ರಿಪುರ, ದೀಪಾಂಜಲಿ ನಗರ, ಸುಬ್ರಹ್ಮಣ್ಯ ನಗರ, ಯಶವಂತಪುರ, ಜಾಲಹಳ್ಳಿ, ದಾಸರಹಳ್ಳಿ, ಎಚ್‌ಎಸ್‌ಆರ್ ಲೇಔಟ್, ಇಂದಿರಾನಗರ, ದೊಮ್ಮಲೂರು ಸೇರಿ ನಗರದ ಎಲ್ಲೆಡೆ ಹೊಸವರ್ಷವನ್ನು ಅದ್ದೂರಿಯಿಂದ ಸ್ವಾಗತಿಸಲಾಯಿತು.

ಕಳೆದ ವರ್ಷ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆಗಳಲ್ಲಿ ನೂಕುನುಗ್ಗಲು ಉಂಟಾಗಿತ್ತು. ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆಯಾಗಿ ಈ ಬಾರಿ ಹೆಚ್ಚಿನ ಭದ್ರತೆ ಕೈಗೊಳ್ಳಲಾಗಿತ್ತು.



ಕೋರಮಂಗಲದಲ್ಲಿ ಸಂಭ್ರಮಾಚರಣೆಯಲ್ಲಿ ತೊಡಗಿದ್ದ ಜನಸ್ತೋಮ – ಚಿತ್ರ: ಪುಷ್ಕರ್ ವಿ.



ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಸಂಭ್ರಮವನ್ನು ಕಣ್ತುಂಬಿಕೊಂಡ ಪುಟಾಣಿ – ಪ್ರಜಾವಾಣಿ ಚಿತ್ರ

ಮಾಸ್ಕ್ ನಿಷೇಧ, ಮೇಲ್ಸೇತುವೆ ಬಂದ್

ಮಂಗಳವಾರ ರಾತ್ರಿ 9ರಿಂದಲೇ ನಗರದ ಹಲವು ಮೇಲ್ಸೇತುವೆಗಳಲ್ಲಿ ಎಲ್ಲ ಮಾದರಿಯ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿತ್ತು. ಇದರಿಂದ ದೂರದ ಸ್ಥಳಕ್ಕೆ ತೆರಳಬೇಕಾದವರು ಪರ್ಯಾಯ ಮಾರ್ಗದಲ್ಲಿ ಸಂಚರಿಸಿದರು.

ಹೆಣ್ಣೂರು, ಐಟಿಸಿ, ಬಾಣಸವಾಡಿ, ಲಿಂಗರಾಜಪುರ, ಕಲ್ಪಳ್ಳಿ, ದೊಮ್ಮಲೂರು, ನಾಗವಾರ, ಮೇಡಹಳ್ಳಿ, ಎಎಂ ರಸ್ತೆ, ದೇವರಬಿಸನಹಳ್ಳಿ, ಮಹದೇವಪುರ, ದೊಡ್ಡಕ್ಕುಂದಿ ಮೇಲ್ಸೇತುವೆಯಲ್ಲಿ ರಾತ್ರಿ ಪೂರ್ತಿ ಯಾವುದೇ ವಾಹನ ಸಂಚಾರಕ್ಕೆ ಅವಕಾಶ ನೀಡಿರಲಿಲ್ಲ. ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರನ್ನು ಪೊಲೀಸರು ತಪಾಸಣೆಗೆ ಒಳಪಡಿಸಿ, ದಂಡ ವಿಧಿಸಿದರು.


ಪೀಪಿ ಬಳಕೆಗೆ ನಿಷೇಧ: ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಪೀಪಿ ಬಳಕೆ ಹಾಗೂ ವಿ–ಮಾಸ್ಕ್‌ಗೆ ನಿಷೇಧ ಹೇರಲಾಗಿತ್ತು. ಆದರೂ ಪೀಪಿ ಊದುತ್ತಾ ತೆರಳಿದ ದೃಶ್ಯ ಕಾಣಿಸಿತು. ಕೆಲವು ರಸ್ತೆಗಳಲ್ಲಿ ಯುವಕ– ಯುವತಿಯರು ತಲೆಯ ಮೇಲೆ ಬಣ್ಣದ ಕ್ಯಾಪ್ ಧರಿಸಿದ್ದು ಕಂಡುಬಂತು.

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್ ಹಾಗೂ ಬ್ರಿಗೇಡ್ ರಸ್ತೆಯಲ್ಲಿ ಹೆಜ್ಜೆ ಹೆಜ್ಜೆಗೂ ಪೊಲೀಸ್ ಬಂದೋಬಸ್ತ್ ಕಂಡುಬಂತು. ಮಂಗಳವಾರ ಸಂಜೆಯಿಂದಲೇ ಪೊಲೀಸರು ತಮ್ಮ ಸ್ಥಳಗಳಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರು. ಈ ಬಾರಿ ಗೃಹ ರಕ್ಷಕ ದಳದ ಸಿಬ್ಬಂದಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಂದೋಬಸ್ತ್‌ಗೆ ಬಳಕೆ ಮಾಡಿಕೊಳ್ಳಲಾಗಿತ್ತು.

ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಕೇಂದ್ರ ವಿಭಾಗದ ಡಿಸಿಪಿ ಶೇಖರ್, ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಸೇರಿ ಹಲವು ಪೊಲೀಸ್ ಅಧಿಕಾರಿಗಳು ನಗರ ಪ್ರದಕ್ಷಿಣೆ ಹಾಕಿದರು.



ಎಂ.ಜಿ ರಸ್ತೆಯಲ್ಲಿ ರಾತ್ರಿ 1ರ ನಂತರವೂ ಸಂಭ್ರಮಾಚರಣೆಯಲ್ಲಿ ತೊಡಗಿದ್ದ ಜನರನ್ನು ಪೊಲೀಸರು ಚದುರಿಸಿದರು – ಚಿತ್ರ: ಎಚ್. ಜಿ. ಪ್ರಶಾಂತ್




ಸುರಕ್ಷತೆಯ ಕ್ರಮವಾಗಿ ನಗರದ ಶಿವಾನಂದ ವೃತ್ತದ ಮೇಲ್ಸೇತುವೆಯಲ್ಲಿ ಸಂಚಾರ ನಿರ್ಬಂಧಿಸಲಾಗಿತ್ತು

ಕಿಕ್ಕಿರಿದು ತುಂಬಿದ ಮೆಟ್ರೊ

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ಗಳಲ್ಲಿ ಹೆಚ್ಚಿನ ಜನರು ಬಂದ ಕಾರಣ 'ನಮ್ಮ ಮೆಟ್ರೊ' ಪ್ರಯಾಣಿಕರಿಂದ ತುಂಬಿ ಹೋಗಿತ್ತು. ರಾತ್ರಿ 11 ಗಂಟೆ ಬಳಿಕ ನಿಂತುಕೊಳ್ಳುವುದಕ್ಕೂ ಜಾಗ ಇಲ್ಲದಷ್ಟು ಜನರು ಸೇರಿದ್ದರು.

ಜನದಟ್ಟಣೆಯ ಕಾರಣ ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣದಿಂದ ತೆರಳಲು ಅವಕಾಶ ಇರಲಿಲ್ಲ. 11ರ ಬಳಿಕ ಎಂ.ಜಿ. ರಸ್ತೆ ನಿಲ್ದಾಣದಲ್ಲಿ ನಿಲುಗಡೆ ನೀಡುವುದನ್ನು ನಿಲ್ಲಿಸಲಾಯಿತು. ಎಂ.ಜಿ. ರಸ್ತೆಯಿಂದ ಟ್ರಿನಿಟಿ ನಿಲ್ದಾಣ ಅಥವಾ ಕಬ್ಬನ್ ಪಾರ್ಕ್ ನಿಲ್ದಾಣಕ್ಕೆ ತೆರಳಿ ಮೆಟ್ರೊದಲ್ಲಿ ಪ್ರಯಾಣಿಸಿದರು.

ರಾತ್ರಿ 2.45ರ ವರೆಗೂ ಮೆಟ್ರೊ ಸೇವೆಯನ್ನು ವಿಸ್ತರಿಸಲಾಗಿತ್ತು. ಪ್ರತಿ 10 ನಿಮಿಷಕ್ಕೊಂದು ರೈಲು ಸಂಚರಿಸಿದವು. ಕೊನೆಯ ಮೆಟ್ರೊ ಮೆಜೆಸ್ಟಿಕ್‌ನಿಂದ 2.45ಕ್ಕೆ ಹೊರಟಿತು.



ಯುಬಿ ಸಿಟಿಯಲ್ಲಿ ಕುಣಿದು ಕುಪ್ಪಳಿಸಿದ ಯುವಜನರು – ಪ್ರಜಾವಾಣಿ ಚಿತ್ರ

ಎಲ್ಲೆಲ್ಲಿ ಏನು ನಡೆಯಿತು...

- ಕೋರಮಂಗಲದಲ್ಲಿ ಕಣ್ಮರೆಯಾಗಿದ್ದ ಮಗುವನ್ನು ಪತ್ತೆಹಚ್ಚಿ ತಾಯಿ ಮಡಿಲು ಸೇರಿಸಿದ ಪೊಲೀಸರು
- ರಾತ್ರಿ 12 ಕಳೆಯುತ್ತಿದ್ದಂತೆಯೇ ಸಂಭ್ರಮಾಚರಣೆಯಲ್ಲಿ ಭಾಗಿಯಾಗಿದ್ದ ಯುವಕ –ಯುವತಿಯರನ್ನು ಸ್ಥಳದಿಂದ ಪೊಲೀಸರು ಚದುರಿಸಿದರು
- ಮಹಿಳೆಯರ ಸುರಕ್ಷತೆಗಾಗಿ ಮಹಿಳಾ ಪೊಲೀಸರ ನಿಯೋಜನೆ ಮಾಡಲಾಗಿತ್ತು. ಮದ್ಯದ ಅಮಲಿನಲ್ಲಿ ತೂರಾಡುತ್ತಾ ಬಂದವರಿಗೆ ಪೊಲೀಸರು ಬುದ್ಧಿಮಾತು ಹೇಳಿ ಕಳುಹಿಸಿದರು
- ನಿರ್ಬಂಧ ನಡುವೆಯೂ ಲೌಡ್ ಸ್ಪೀಕರ್, ಪಟಾಕಿ ಸಿಡಿಸಿದ್ದು ಕಂಡುಬಂತು
- ಅನುಮತಿ ಪಡೆದ ಕಡೆ ಮಾತ್ರ ಹೆಚ್ಚು ಜನರು ಸೇರಿ ಆಚರಣೆಗೆ ಅವಕಾಶ ಕಲ್ಪಿಸಲಾಗಿತ್ತು
- ಮದ್ಯ ಸೇವಿಸಿ ವಾಹನ ಚಾಲನೆ ಹಾಗೂ ವ್ಹೀಲಿ ನಡೆಸಿದ್ದವರ ವಿರುದ್ಧ ಪೊಲೀಸರು ಕ್ರಮ ತೆಗೆದುಕೊಂಡರು
- ಅನುಚಿತ ವರ್ತನೆ ಮಾಡಿದ್ದವರನ್ನು ವಶಕ್ಕೆ ಪಡೆದುಕೊಂಡರು
- ಹಲವು ಪಬ್ ಹಾಗೂ ರೆಸ್ಟೋರೆಂಟ್‌ಗಳ ಮೇಲೆ ಪೊಲೀಸರು ದಿಢೀರ್ ದಾಳಿ ನಡೆಸಿ ಪರಿಶೀಲಿಸಿದರು
- ಬ್ರಿಗೇಡ್ ರಸ್ತೆಯಲ್ಲಿ ಪೊಲೀಸರು ಮತ್ತು ಜನರ ನಡುವೆ ವಾಗ್ವಾದ ನಡೆಯಿತು

ಯೋಧನ ಅಂತ್ಯಕ್ರಿಯೆ ಇಂದು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಈಚೆಗೆ ಸೇನಾ ವಾಹನವು ಕಂದಕಕ್ಕೆ ಉರುಳಿ ನಿಧನರಾಗಿದ್ದ ಕೊಡಗು ಜಿಲ್ಲೆಯ ಶನಿವಾರಸಂತೆ ಸಮೀಪದ ಆಲೂರು ಸಿದ್ದಾಪುರದ ಮಾಲಂಬಿ ಗ್ರಾಮದ ಸೈನಿಕ ಪಿ.ಪಿ. ದಿವಿನ್ (28) ಅವರ ಪಾರ್ಥಿವ ಶರೀರ ಮಂಗಳವಾರ ಬೆಂಗಳೂರಿಗೆ ತಲುಪಿದೆ.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಮೈಸೂರು - ಕೊಡಗು ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೇನಾ ಗೌರವದೊಂದಿಗೆ ದಿವಿನ್ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸೋಮವಾರಪೇಟೆ ತಹಶೀಲ್ದಾರ್ ಶ್ರೀಧರ್, 'ಬೆಂಗಳೂರಿನಿಂದ ಪಾರ್ಥಿವ ಶರೀರ ಹೊತ್ತ ವಾಹನವು ರಸ್ತೆ ಮಾರ್ಗದಲ್ಲಿ ಶನಿವಾರ ಸಂತೆಯ ಆಲೂರು ಸಿದ್ದಾಪುರ ತಲುಪಲಿದೆ. ಜ.1ರಂದು ಬೆಳಿಗ್ಗೆ 10.30ಕ್ಕೆ ಗ್ರಾಮದ ಶಾಲೆಯ ಮೈದಾನದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ಮಧ್ಯಾಹ್ನದ ವೇಳೆ ಅಂತಿಮ ವಿಧಿ ವಿಧಾನಗಳು ನಡೆಯಲಿವೆ' ಎಂದರು.

ಸೇನಾ ವಾಹನ ಪ್ರಪಾತಕ್ಕೆ ಬಿದ್ದಾಗ ದಿವಿನ್ ಅವರ ಶ್ವಾಸಕೋಶಕ್ಕೆ ತೀವ್ರ ಹಾನಿಯಾಗಿತ್ತು. ನಂತರ ಶ್ರೀನಗರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಭಾನುವಾರ ಇವರು ನಿಧನರಾಗಿದ್ದರು.

ಕೊಡಗಿಗೆ 8 ಲಕ್ಷಕ್ಕೂ ಅಧಿಕ ಪ್ರವಾಸಿಗರ ಲಗ್ಗೆ

• ಕೆ.ಎಸ್.ಗಿರೀಶ


ಮಡಿಕೇರಿ: ಕೊಡಗು ಜಿಲ್ಲೆಗೆ 2024ರ ಡಿಸೆಂಬರ್‌ನಲ್ಲಿ ಬರೋಬ್ಬರಿ 8 ಲಕ್ಷಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡಿದ್ದು, ಇದು ಸಾರ್ವಕಾಲಿಕ ದಾಖಲೆ ಎನಿಸಿದೆ. ಅದರಲ್ಲೂ ಮಾಸಾಂತ್ಯದಲ್ಲಿ ಲಕ್ಷಾಂತರ ಪ್ರವಾಸಿಗರು ಲಗ್ಗೆ ಇಟ್ಟಿದ್ದಾರೆ.

ಇಲ್ಲಿರುವ 150ಕ್ಕೂ ಅಧಿಕ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳು ಮತ್ತು 4 ಸಾವಿರಕ್ಕೂ ಅಧಿಕ ಹೋಂಸ್ಟೇಗಳು ಭರ್ತಿಯಾಗಿವೆ. ಪ್ರವಾಸಿಗರು ಪ್ರವಾಹದಂತೆ ಜಿಲ್ಲೆಗೆ ಬರುತ್ತಲೇ ಇದ್ದು, ಸಂಚಾರ ದಟ್ಟಣೆ ಹೆಚ್ಚಾಗಿದೆ. ಡಿ. 26ರಂದು ಒಂದೇ ದಿನ ಇಲ್ಲಿನ ಕುಶಾಲನಗರದಲ್ಲಿರುವ ನಿಸರ್ಗಧಾಮ ಉದ್ಯಾನಕ್ಕೆ 6 ಸಾವಿರಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡಿದ್ದರು.

ಇಲ್ಲಿನ ಅಬ್ಬಿಫಾಲ್ಸ್, ರಾಜಾಸೀಟ್ ಸೇರಿದಂತೆ ಬಹುತೇಕ ಎಲ್ಲ ಪ್ರವಾಸಿ ಸ್ಥಳಗಳಲ್ಲೂ ಅಪಾರ ಜನಜಂಗುಳಿ ಕಂಡು ಬರುತ್ತಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಅನಿತಾ ಭಾಸ್ಕರ್, 'ಡಿಸೆಂಬರ್‌ನಲ್ಲಿ 8 ಲಕ್ಷಕ್ಕೂ ಅಧಿಕ ಪ್ರವಾಸಿಗರು ಜಿಲ್ಲೆಗೆ ಬಂದಿದ್ದು, ಇಷ್ಟು ಪ್ರವಾಸಿಗರು ಒಂದೇ ತಿಂಗಳಿನಲ್ಲಿ ಈ ಹಿಂದೆ ಬಂದಿರಲಿಲ್ಲ' ಎಂದರು.

ಕೊಡಗು ಜಿಲ್ಲಾ ರೆಸಾರ್ಟ್, ಹೋಟೆಲ್, ರೆಸ್ಟೋರೆಂಟ್ ಅಸೋಸಿಯೇಷನ್‌ನ ಅಧ್ಯಕ್ಷ ದಿನೇಶ್ ಕಾರ್ಯಪ್ಪ ಪ್ರತಿಕ್ರಿಯಿಸಿ, '2024ರಲ್ಲಿ ಶೇ 15ರಷ್ಟು ಹೋಟೆಲ್, ರೆಸಾರ್ಟ್‌ಗಳು ಹೊಸದಾಗಿ ತೆರೆದಿವೆ. ಕುಶಾಲನಗರದಲ್ಲಿ ಪ್ರವಾಸೋದ್ಯಮ ಬೆಳವಣಿಗೆ ಕಾಣುತ್ತಿದೆ' ಎಂದರು.



ಸಿ.ಎಂ. ಭೇಟಿ

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಪುನರ್ ಆಯ್ಕೆಯಾದ ಸಿ.ಎಸ್. ಷಡಾಕ್ಷರಿ, ಖಜಾಂಚಿ ವಿ.ವಿ. ಶಿವರುದ್ರಯ್ಯ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಪುಷ್ಪಗುಚ್ಛ ನೀಡಿ ಗೌರವ ಸಲ್ಲಿಸಿದರು



ಸುಭಾಷಿತ

ಎಂತಹ ಕಟು ಅನುಭವದ ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿ ಆಗಿ ಇರುವುದರ ರಹಸ್ಯ.

-ದ.ರಾ.ಬೇಂದ್ರೆ

ಹೊಸ ವರ್ಷವೆಂದರೆ ಹೊಸ ಭರವಸೆ ಒಂದಿಷ್ಟು ಮೆಲುಕು, ಕೆಲವು ಮುನ್ನೋಟ

ಹೊಸ ವರ್ಷದ ಸಂಭ್ರಮವು ಭವಿಷ್ಯದತ್ತ ನೋಟ ಹಾಯಿಸುವುದರ ಜೊತೆಗೆ, ಸಾಗಿಬಂದ ಹಾದಿಯನ್ನು ಅವಲೋಕಿಸುವುದನ್ನೂ ಒಳಗೊಂಡಿರುತ್ತದೆ. ಹೊಸ ವರ್ಷದ ಮೊದಲ ದಿನವು ಎಷ್ಟರಮಟ್ಟಿಗೆ ಒಳ್ಳೆಯದೋ ವರ್ಷದ ಇತರ ದಿನಗಳೂ ಅಷ್ಟೇ ಒಳ್ಳೆಯವು ಎಂಬುದು ತಾರ್ಕಿಕವಾಗಿ ನಿಜ. ಆದರೆ ಹೊಸ ವರ್ಷದ ಮೊದಲ ದಿನವು ಒಂದಿಷ್ಟು ನೆನಪುಗಳನ್ನು ಮೆಲುಕು ಹಾಕಲು ಹಾಗೂ ಹೊಸ ಭರವಸೆಗಳೊಂದಿಗೆ ಮುಂದಿನ ದಿನಗಳತ್ತ ನೋಟ ಹಾಯಿಸಲು ನೆಪವಾಗಿ ಒದಗಿಬರುವುದು ಸತ್ಯ. ಹೊಸ ವರ್ಷವನ್ನು ಪ್ರತಿ ವ್ಯಕ್ತಿಯೂ ವಿಶಿಷ್ಟವಾಗಿ ಎದುರುಗೊಳ್ಳಬಹುದು. ಏಕೆಂದರೆ ಗತ ಹಾಗೂ ಭವಿಷ್ಯವು ಪ್ರತಿಯೊಬ್ಬರಿಗೂ ವಿಶಿಷ್ಟ. ಆಗಿಹೋದ ಒಂದು ವರ್ಷದ ಹಾದಿಯಲ್ಲಿ ಪ್ರತಿಯೊಬ್ಬರ ಅನುಭವ ಭಿನ್ನ, ಹೊಸ ವರ್ಷಕ್ಕೆ ಇರಿಸಿಕೊಳ್ಳುವ ಭರವಸೆಗಳು ಕೂಡ ಭಿನ್ನ. ಹೀಗಿದ್ದರೂ ಕುಟುಂಬ, ಸಮುದಾಯ, ದೇಶಗಳ ಮಟ್ಟದಲ್ಲಿ ದೃಷ್ಟಿಕೋನಗಳು ರೂಪುಗೊಳ್ಳುವ ಕಾರಣ, ಅನುಭವ ಮತ್ತು ಭರವಸೆಗಳಲ್ಲಿಯೂ ಸಮಾನ ಅಂಶಗಳು ಇದ್ದೇ ಇರುತ್ತವೆ. ಬಯಸಿದ ಬಗೆಯಲ್ಲೇ ನಡೆದ ಸಂಗತಿಗಳ ಬಗ್ಗೆ ವೈಯಕ್ತಿಕ ಮಟ್ಟದಲ್ಲಿ ತೃಪ್ತಿ ಇರಬಹುದು. ಬಯಸಿದಂತೆ ನಡೆಯದ ಸಂಗತಿಗಳ ಬಗ್ಗೆ ಬೇಸರ ಇದ್ದಿರಬಹುದು. ಹೊಸ ವರ್ಷದ ಆರಂಭದಲ್ಲಿ ನಿರ್ಣಯಗಳನ್ನು ಕೈಗೊಳ್ಳುವುದು, ಹಲವರು ಅದನ್ನು ಕಟ್ಟುನಿಟ್ಟಾಗಿ ಪಾಲಿಸುವುದು, ಕೆಲವರು ನಿರ್ಣಯಗಳನ್ನು ಮುರಿಯುವುದು ಇದ್ದೇ ಇರುತ್ತದೆ. ಇವುಗಳ ನಡುವೆ, ಹೊಸ ವರ್ಷವನ್ನು ಮನುಕುಲವು ಹೊಸ ಭರವಸೆಗಳೊಂದಿಗೆ ಬರಮಾಡಿಕೊಳ್ಳುವುದು ಮಾತ್ರ ಅನೂಚಾನವಾಗಿ ನಡೆದುಕೊಂಡು ಬಂದಿರುವುದು ದಿಟ.



ಹೊಸ ವರ್ಷದ ಮೊದಲ ದಿನ, ಒಂದಿಷ್ಟು ನೆನಪುಗಳನ್ನು ಮೆಲುಕು ಹಾಕುತ್ತಾ ಹೊಸ ಭರವಸೆಗಳೊಂದಿಗೆ ಮುಂದಿನ ದಿನಗಳತ್ತ ನೋಟ ಹರಿಸೋಣ

ದೇಶವು ಈಗ ಹೊಸ ವರ್ಷಕ್ಕೆ ಕಾಲಿರಿಸಿದೆ. ಈ ಹೊತ್ತಿನಲ್ಲಿ 2024ನೇ ಇಸವಿಯ ಮೇಲೆ ನೋಟ ಹರಿಸಿದಾಗ, ಪ್ರಜಾತಂತ್ರವು ಜಯ ಸಾಧಿಸಿದ್ದು ಮತ್ತು ದೇಶವು ಸಂವಿಧಾನವನ್ನು ಅಂಗೀಕರಿಸಿದ್ದಕ್ಕೆ 75 ವರ್ಷಗಳು ತುಂಬಿದ್ದು ಪ್ರಮುಖವಾಗಿ ಕಾಣುತ್ತವೆ. ಆತ್ಮವಿಶ್ವಾಸದಿಂದ ಬೀಗುತ್ತಿದ್ದ, ಕೇಂದ್ರದಲ್ಲಿ ಮತ್ತೆ ಬಹುಮತದೊಂದಿಗೆ ಅಧಿಕಾರಕ್ಕೆ ಮರಳುವ ವಿಶ್ವಾಸದಲ್ಲಿ ಇದ್ದ ಪಕ್ಷದ ಸಂಖ್ಯಾಬಲವನ್ನು ಮತದಾರರು ಕಡಿಮೆ ಮಾಡಿದರು. ಆ ಪಕ್ಷಕ್ಕೆ ಸ್ವಂತ ಬಲದ ಮೇಲೆ ಸರ್ಕಾರ ರಚಿಸುವ ಅಧಿಕಾರ ನೀಡದ ಮತದಾರರು, ಮಿತ್ರಪಕ್ಷಗಳನ್ನು ಅದು ನೆಚ್ಚಿಕೊಳ್ಳಲೇಬೇಕು ಎಂಬ ಆದೇಶ ಇತ್ತರು. ನಾಯಕರ ಸುತ್ತ ಕಟ್ಟಲಾಗುವ ಪ್ರಭಾವಳಿಯು ತಮ್ಮನ್ನು ಸರ್ವಕಾಲಕ್ಕೂ ಪ್ರಭಾವಿಸುವುದಿಲ್ಲ ಎಂಬುದನ್ನು ಮತದಾರರು ತೋರಿಸಿಕೊಟ್ಟರು. ಸಂವಿಧಾನ ಮತ್ತು ಅದರ ಕುರಿತ ಮಾತುಗಳು ವರ್ಷದುದ್ದಕ್ಕೂ ಅನುರಣಿಸಿದವು. ಭಾರತವೆಂಬ ಗಣರಾಜ್ಯಕ್ಕೆ ಮಾರ್ಗದರ್ಶನ ನೀಡುವ ಸನ್ನದಿನಂತೆ ಇರುವ ಈ ಗ್ರಂಥವು ಹೆಮ್ಮೆಯಿಂದ ತಲೆ ಎತ್ತಿ ನಿಂತಿತು. ಲೋಕಸಭಾ ಚುನಾವಣೆಯಲ್ಲಿ ಗಳಿಸಿದ್ದ ಚೈತನ್ಯವನ್ನು ಉಳಿಸಿಕೊಳ್ಳಲು ವಿರೋಧ ಪಕ್ಷಗಳಿಗೆ ಆಗಲಿಲ್ಲ. ದೇಶದಲ್ಲಿ ನಾಗರಿಕ ಹಕ್ಕುಗಳಿಗೆ ಎದುರಾಗಿರುವ ಸವಾಲುಗಳು ಮುಂದುವರಿದವು, ತಾರತಮ್ಯವನ್ನು ಸಹಜವೆಂದು ಹೇಳುವಂತಹ ಭಾಷಣಗಳು ಹಾಗೂ ಕೃತ್ಯಗಳು ಬಹಳಷ್ಟು ಸಂಖ್ಯೆಯಲ್ಲಿ ವರದಿಯಾದವು. ದೇಶದ ಷೇರುಪೇಟೆಯು 2024ರಲ್ಲಿ ಜಿಗಿಯಿತು. ಆದರೆ ದೇಶದ ದೊಡ್ಡ ವರ್ಗದ ಜನರಿಗೆ ಹಣವು ದುಬಾರಿಯಾಯಿತು, ಬಡತನವು ಅವರ ಪಾಲಿಗೆ ನಿತ್ಯದ ಸಂಗಾತಿಯಾಗಿಯೇ ಉಳಿಯಿತು. ಇವೆಲ್ಲವುಗಳ ನಡುವೆಯೂ ದೇಶವು ಯೌವನದ ಉತ್ಸಾಹವನ್ನು ಉಳಿಸಿಕೊಂಡಿದೆ.

ಜಾಗತಿಕ ಮಟ್ಟದಲ್ಲಿ ಎರಡು ಭೀಕರ ಯುದ್ಧಗಳು ಮುಂದುವರಿದಿವೆ. ಈ ಯುದ್ಧಗಳನ್ನು ನಿಲ್ಲಿಸಲು ಜಾಗತಿಕ ಸಮುದಾಯಕ್ಕೆ ಹಾಗೂ ಜಾಗತಿಕ ಸಮುದಾಯವು ಕಟ್ಟಿರುವ ಸಂಸ್ಥೆಗಳಿಗೆ ಸಾಧ್ಯವಾಗದೇ ಇರುವುದು, ಈ ಸಮುದಾಯ ಮತ್ತು ಸಂಸ್ಥೆಗಳು ತಮ್ಮ ನೈತಿಕ ಬಲವನ್ನು ಕಳೆದುಕೊಂಡಿರುವುದನ್ನು ಸ್ಪಷ್ಟವಾಗಿ ಹೇಳುತ್ತಿದೆ. ಪುಂಡ ರಾಷ್ಟ್ರಗಳನ್ನು ಕೂಡ ಹದ್ದುಬಸ್ತಿನಲ್ಲಿ ಇರಿಸಲು ಈ ಸಂಸ್ಥೆಗಳಿಗೆ ಆಗುತ್ತಿಲ್ಲ ಎಂಬುದನ್ನು ಇದು ಸಾರುತ್ತಿದೆ. ವಿಶ್ವದ ಅತ್ಯಂತ ಶಕ್ತಿಶಾಲಿ ರಾಷ್ಟ್ರಕ್ಕೆ ಹೊಸ ಅಧ್ಯಕ್ಷರು ಶೀಘ್ರವೇ ಬರಲಿದ್ದಾರೆ. ಇದು ಭವಿಷ್ಯದ ಬಗ್ಗೆ ಒಂದಿಷ್ಟು ಪ್ರಶ್ನೆಗಳನ್ನು, ಭೀತಿಯನ್ನು ಸೃಷ್ಟಿಸಿದೆ. ವಿಶ್ವದ ಇನ್ನೊಂದು ಸೂಪರ್‌ಪವರ್ ದೇಶವು ಆರ್ಥಿಕ ಬೆಳವಣಿಗೆ ಕುಸಿತದ ಕಾರಣದಿಂದಾಗಿ ದುರ್ಬಲಗೊಂಡಿದೆ. ಹವಾಮಾನ ಬದಲಾವಣೆ ಎಂಬುದು ವಾಸ್ತವ. ಅದರ ಪರಿಣಾಮಗಳನ್ನು ಮನುಕುಲ ಎದುರಿಸುತ್ತಿದೆ. ಆದರೆ ಅದನ್ನು ನಿರ್ವಹಿಸುವುದು ಹೇಗೆ ಎಂಬ ವಿಚಾರದಲ್ಲಿ ಒಮ್ಮತಕ್ಕೆ ಬರಲು ಜಾಗತಿಕ ಸಮುದಾಯಕ್ಕೆ ಇನ್ನೂ ಸಾಧ್ಯವಾಗಿಲ್ಲ. 2024ರ ಸಿಹಿ–ಕಹಿ ಏನೇ ಇರಲಿ, ಹೊಸ ವರ್ಷದ ಹೊಸ್ತಿಲಲ್ಲಿ ನಿಂತು, ಈಗಷ್ಟೇ ಸರಿದುಹೋದ ವರ್ಷದಲ್ಲಿ ಕಂಡಂತಹ ವಿಪತ್ತುಗಳು, ಉಂಡ ಕಹಿಗಳು 2025ರಲ್ಲಿ ಎದುರಾಗದೇ ಇರಲಿ ಎಂಬ ಹಾರೈಕೆಯನ್ನು ಹೊಂದಬಹುದು.

ಈ ಶತಮಾನದ ಈ ತನಕದ ಮಾದರಿ ಮುಂದಿನ ದಿನಗಳ ಬಗ್ಗೆ ದಿಗಿಲು ಹುಟ್ಟಿಸುತ್ತದೆ...

ಕಾಲು ಶತಮಾನದ ಕತೆ, ವ್ಯಥೆ...



ಅನುರಣನ

ನಾರಾಯಣ ಎ.

ನಿನ್ನೆ ಸೂರ್ಯಾಸ್ತವಾಗುವುದರೊಂದಿಗೆ ಅಂತ್ಯವಾಗಿದ್ದು ಇಸವಿ- 2024 ಮಾತ್ರವಲ್ಲ, 21ನೇ ಶತಮಾನದ ಕಾಲುಭಾಗವೂ ಹೌದು. ಕಾಲಕ್ಕೆ ಅದರದ್ದೇ ಆದ ಅರ್ಥ ಇರುವುದಿಲ್ಲ. ಆಯಾ ಕಾಲದಲ್ಲಿ ಆಯಾ ದೇಶದಲ್ಲಿ ನಡೆಯುವ ಮಾನವ ಚಟುವಟಿಕೆಗಳು ಕಾಲಕ್ಕೊಂದು ಅರ್ಥ ನೀಡುತ್ತವೆ. ಈ ಅರ್ಥದಲ್ಲಿ, ಕಳೆದ ಕಾಲು ಶತಮಾನವನ್ನು ಭಾರತದ ಮಟ್ಟಿಗೆ ಹೇಗೆ ಅರ್ಥೈಸಿಕೊಳ್ಳುವುದು?

ಈ ಶತಮಾನದ ಮೊದಲ ಇಪ್ಪತ್ತೈದು ವರ್ಷಗಳನ್ನು (2000- 2024) ಅರ್ಥೈಸಿಕೊಳ್ಳಲು ಈ ಅವಧಿಯನ್ನು ಹಿಂದಿನ ಶತಮಾನದ ಕೊನೆಯ ಇಪ್ಪತ್ತೈದು ವರ್ಷಗಳ (1975- 1999) ಜತೆಗೆ ಹೋಲಿಸಿ ನೋಡಬೇಕಾಗುತ್ತದೆ. ಇದು ಕಾಲವನ್ನು ಅರ್ಥೈಸಿಕೊಳ್ಳಲು ಸಮಾಜವಿಜ್ಞಾನ ಬಳಸಿಕೊಳ್ಳುವ ಒಂದು ವಿಧಾನವೂ ಹೌದು. ಹಿಂದಿನ ಶತಮಾನದ ಕೊನೆಯ ಇಪ್ಪತ್ತೈದು ವರ್ಷಗಳು ಮೇಲ್ನೋಟಕ್ಕೆ ಮಹಾನ್ ಕ್ಷೋಭೆಯ ಕಾಲ, ಭಾರತವು ರಾಜಕೀಯವಾಗಿ ಅಸ್ಥಿರಗೊಂಡು ಕುಸಿದ ಕಾಲ. ಆದರೆ, ಆ ಅವಧಿಯ ಬೆಳವಣಿಗೆಗಳು ಭಾರತದಲ್ಲಿ ಸಂವಿಧಾನ ಪ್ರಜ್ಞೆಯನ್ನು ಜಾಗೃತಗೊಳಿಸಿದ್ದವು ಎಂಬುದೂ ನಿಜ. ನಿನ್ನೆಗೆ ಮುಗಿದುಹೋದ ಈ ಶತಮಾನದ ಮೊದಲ ಕಾಲುಭಾಗ ಮೇಲ್ನೋಟಕ್ಕೆ ಮಹಾನ್ ರಾಜಕೀಯ ಸ್ಥಿರತೆಯ ಕಾಲ, ಭಾರತ ಮೈಕೊಡವಿ ಮೇಲೆದ್ದ ಕಾಲ ಎನ್ನುವ ಪ್ರಚಾರ ಭರ್ಜರಿಯಾಗಿ ನಡೆಯುತ್ತಿದೆ. ವಾಸ್ತವದಲ್ಲಿ ಈ ಅವಧಿ ಭಾರತ ಪ್ರಜಾತಾಂತ್ರಿಕವಾಗಿ ಕುಸಿದ ಕಾಲ. ಅದರ ಪರಿಣಾಮಗಳನ್ನು ಗ್ರಹಿಸಿ ಅದಕ್ಕೊಂದು ಪ್ರತಿರೋಧವನ್ನು ರೂಪಿಸಲಾರದಷ್ಟು ಸೊರಗಿಹೋದ ಕಾಲ.

ಹೋದ ಶತಮಾನದ ಕೊನೆಯ ಇಪ್ಪತ್ತೈದು ವರ್ಷಗಳ ಆರಂಭದ ವರ್ಷವನ್ನು (1975) ದೇಶ ನೆನಪಿಸಿಕೊಳ್ಳುವುದು ತುರ್ತುಪರಿಸ್ಥಿತಿ ಹೇರಿಕೆಯಾದ ವರ್ಷ ಎಂದು. ಹಾಗೆ ನೋಡಿದರೆ ಅದು ಆ ಅವಧಿಯ ನಿರ್ಣಾಯಕ ಬೆಳವಣಿಗೆಯೇನಲ್ಲ. ಅದರಾಚೆಗೂ ಅದೊಂದು ಮಹಾನ್ ರಾಜಕೀಯ ಅಸ್ಥಿರತೆಯ ಕಾಲವಾಗಿತ್ತು. ಆ ಅವಧಿಯಲ್ಲಿ ದೇಶ ಎಂಟು ಚುನಾವಣೆಗಳನ್ನು, ಒಂಬತ್ತು ಮಂದಿ ಪ್ರಧಾನಿಗಳನ್ನು ಕಂಡಿತು. ಪ್ರತ್ಯೇಕತಾವಾದ ಇನ್ನಿಲ್ಲದ ಸವಾಲೊಡ್ಡಿದ ಕಾಲವದು. ಇಂದಿರಾ ಗಾಂಧಿಯವರ ಹತ್ಯೆ, ಸಿಖ್ ವಿರೋಧಿ ದಂಗೆ, ರಾಜೀವ್ ಗಾಂಧಿಯವರ ಹತ್ಯೆ, ಕಾರ್ಗಿಲ್ ಯುದ್ಧ ಹೀಗೆ ಹಿಂಸಾತ್ಮಕ ಪ್ರಕರಣಗಳ ಸರಮಾಲೆ. ಮಂಡಲ್ ವರದಿ ಜಾರಿಯಿಂದ ವಿವಿಧ ಜಾತಿಗಳ ನಡುವಣ ಸಮತೋಲನ ಅಸ್ತವ್ಯಸ್ತವಾದರೆ, ಬಾಬರಿ ಮಸೀದಿ ಧ್ವಂಸವಾದ ಕಾರಣಕ್ಕೆ ಅಂತರ್ಧರ್ಮೀಯ ಸಂಬಂಧಗಳು ಕುಸಿದುಬಿದ್ದವು. ಮತ್ತೆಮತ್ತೆ ಚುನಾವಣೆಗಳು ನಡೆದದ್ದು ಒಂದೆಡೆಯಾದರೆ, ಎರಡು ಚುನಾವಣೆಗಳ ನಡುವೆ ರಾಜಕೀಯ ಸ್ಥಿರತೆ, ಸಾಮಾಜಿಕ ನೆಮ್ಮದಿ ಮರೀಚಿಕೆಯಾಗಿದ್ದು ಇನ್ನೊಂದೆಡೆ.

ಆದರೆ ಅದೇ ಇಪ್ಪತ್ತೈದು ವರ್ಷಗಳಲ್ಲಿ ಈ ದೇಶದಲ್ಲಿ ಸಾಂವಿಧಾನಿಕ ಸಂವೇದನೆಯೊಂದು ಜೀವಂತವಾಗಿದೆ ಎನ್ನುವುದೂ ಸಾಬೀತಾಗಿತ್ತು. ತುರ್ತುಪರಿಸ್ಥಿತಿಯ ಹೇರಿಕೆಯಾಗಿದ್ದೇ ದೇಶದಲ್ಲಿ ತಲೆಯೆತ್ತುತ್ತಿದ್ದ ಸರ್ವಾಧಿಕಾರಿ ಧೋರಣೆ ವಿರೋಧಿಸಿ ಜಯಪ್ರಕಾಶ ನಾರಾಯಣ್ ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಸಂಪೂರ್ಣಕ್ರಾಂತಿ ಆಂದೋಲನವನ್ನು ಹತ್ತಿಕ್ಕುವುದಕ್ಕಾಗಿ. ತುರ್ತುಪರಿಸ್ಥಿತಿ ಆ ಸಾಂವಿಧಾನಿಕ ಸಂವೇದನೆಯ ಪ್ರಕಟಣೆಯನ್ನು ತಾತ್ಕಾಲಿಕವಾಗಿ ಅದುಮಿ ಹಿಡಿಯಿತಾದರೂ 1977ರ ಚುನಾವಣೆಯ ಫಲಿತಾಂಶದಲ್ಲಿ ದೇಶದ ಬಹುತೇಕ ಜನ ಸಂವಿಧಾನದ ದುರ್ಬಳಕೆಯನ್ನು ತಾತ್ಕಾಲಿಕವಾಗಿಯೂ ಸಹಿಸುವುದಿಲ್ಲ ಎಂಬ ಸಂದೇಶವಿತ್ತು. ಎಲ್ಲಕ್ಕಿಂತ ಮಿಗಿಲಾಗಿ ತುರ್ತುಪರಿಸ್ಥಿತಿಯ ನಂತರ ತುರ್ತುಪರಿಸ್ಥಿತಿಯನ್ನು ಮತ್ತೊಮ್ಮೆ ಸುಲಭದಲ್ಲಿ ಹೇರದಂತೆ ಸಂವಿಧಾನಕ್ಕೆ ತಿದ್ದುಪಡಿಯಾಯಿತು. ಹಾಗಾಗಿ, ವಿಪರ್ಯಾಸ ಎನಿಸಿದರೂ ಸತ್ಯವೇನೆಂದರೆ, ತುರ್ತುಪರಿಸ್ಥಿತಿಯಿಂದಾಗಿ ಸಂವಿಧಾನ ಇನ್ನಷ್ಟು ಗಟ್ಟಿಯಾಯಿತು.

ಮಂಡಲ್ ವರದಿ ಜಾರಿ ನಂತರದ ರಾಜಕೀಯದಿಂದಾಗಿ ಅಂಚಿನ ಸಮುದಾಯಗಳತ್ತ ರಾಜಕೀಯ ಅಧಿಕಾರ ಪ್ರವಹಿಸಿದ್ದು, ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯಿಂದಾಗಿ ಅಧಿಕಾರವು ಸ್ಥಳೀಯ ರಾಜಕೀಯ ಕಾರ್ಯಕರ್ತರತ್ತ ಹರಿದದ್ದು ಕೂಡ ಈ ಅವಧಿಯಲ್ಲೇ. ಅಲ್ಲಿಯವರೆಗೂ ಅಧಿಕಾರವು ರಾಷ್ಟ್ರ ಮತ್ತು ರಾಜ್ಯ ಮಟ್ಟದ ನಾಯಕರ ಕೈಯಲ್ಲೇ ಉಳಿದಿತ್ತು. ಒಂದು ಮಟ್ಟಿಗಾದರೂ ಪ್ರಜಾತಂತ್ರ ಆಳವಾಯಿತು, ವಿಸ್ತರಣೆಗೊಂಡಿತು. ಒಟ್ಟಿನಲ್ಲಿ, ಆ ಕಾಲ ಯಾವ ನಾಯಕರ ಅತಿರೇಕವನ್ನೂ ಸಹಿಸಲಿಲ್ಲ. ಪ್ರಜಾತಂತ್ರದ ಯಾವ ಅಂಗವೂ ದಾರಿತಪ್ಪಲು ಬಿಡಲಿಲ್ಲ.

ನಿನ್ನೆ ಕೊನೆಗೊಂಡ ಈ ಶತಮಾನದ ಮೊದಲ ಇಪ್ಪತ್ತೈದು ವರ್ಷಗಳು ಇದಕ್ಕೆ ವ್ಯತಿರಿಕ್ತ. ಮೇಲ್ನೋಟಕ್ಕೆ ಈ ಅವಧಿ ಭಾರಿ ರಾಜಕೀಯ ಸ್ಥಿರತೆಯ ಅವಧಿ, ದೊಡ್ಡ ಮಟ್ಟದ ದೇಶವ್ಯಾಪಿ ಕ್ಷೋಭೆಗಳಿಂದ ಮುಕ್ತವಾದ ಅವಧಿ. ಬಲಿಷ್ಠ ನಾಯಕ, ಬಲಿಷ್ಠ ಸರ್ಕಾರಗಳ ಅವಧಿ. ಮನಸ್ಸು ಮಾಡಿದ್ದರೆ ಪ್ರಜಾತಂತ್ರವನ್ನು ಇನ್ನಷ್ಟು ಎತ್ತರಕ್ಕೆ ಏರಿಸಬಹುದಾಗಿದ್ದ ಅವಧಿ. ಕಾಲಕ್ರಮದಂತೆ ನಡೆದದ್ದು ಐದು ಚುನಾವಣೆಗಳು ಮಾತ್ರ. ನಾಲ್ಕು ವರ್ಷಗಳ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಅವಧಿಯನ್ನು ಬಿಟ್ಟರೆ, ಇದು ಇಬ್ಬರೇ ಪ್ರಧಾನಮಂತ್ರಿಗಳನ್ನು– ಮನಮೋಹನ ಸಿಂಗ್ ಮತ್ತು ನರೇಂದ್ರ ಮೋದಿ– ಕಂಡ ಕಾಲ. ಯುದ್ಧವಿಲ್ಲದ ಕಾಲ, ಪ್ರತ್ಯೇಕತಾವಾದ ದೊಡ್ಡ ಮಟ್ಟದಲ್ಲಿ ತಲೆಯೆತ್ತದ ಕಾಲ, ರಾಜಕೀಯ ಹತ್ಯೆಗಳನ್ನು ಕಾಣದ ಕಾಲ, ಜನರ ಆರ್ಥಿಕ ಸಂಕಷ್ಟಗಳೇನೇ ಇರಲಿ ದೇಶ ಆರ್ಥಿಕವಾಗಿ ಬಿಕ್ಕಟ್ಟನ್ನು ಎದುರಿಸದ ಕಾಲ. ಇಡೀ ಜಗತ್ತಿಗೆ ಎರಗಿದ ಕೋವಿಡ್ ಸಾಂಕ್ರಾಮಿಕವೊಂದನ್ನು ಬಿಟ್ಟರೆ ಬಿಕ್ಕಟ್ಟು ಎನ್ನುವಂತಹದ್ದೇನೂ ಇಲ್ಲದೇಹೋದ ಕಾಲ. ಹೀಗೆ ಎಲ್ಲವೂ ಸರಿ ಇದ್ದ ಕಾಲದಲ್ಲೇ ದೇಶವು ಸಂವಿಧಾನ ತೋರಿದ ಮಾರ್ಗದಿಂದ ದೂರ ಸರಿಯಲಾರಂಭಿಸಿದ್ದು ಮತ್ತು ದೂರ ಸರಿಯುತ್ತಲೇ ಇರುವುದು ಕಾಲದ ವಿಪರ್ಯಾಸ.



ಹೀಗೆಲ್ಲಾ ಆಗತೊಡಗಿದ್ದು 2014ರಲ್ಲಿ ಬಿಜೆಪಿ ಪೂರ್ಣ ಬಹುಮತ ಪಡೆದ ನಂತರ ಅಂತ ಅನ್ನಿಸಬಹುದು. ಆದರೆ, ಈ ವಿಮುಖತೆಗೆ ಅದಕ್ಕಿಂತ ಹಿಂದೆ ಆಡಳಿತ ನಡೆಸಿದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಕೆಲ ನಿಷ್ಕ್ರಿಯ ನಿಲುವುಗಳೂ ಕಾರಣವಾಗಿವೆ. ಶತಮಾನದ ಆದಿಯಲ್ಲಿ ಗುಜರಾತ್‌ನಲ್ಲಿ ನಡೆದ ನರಮೇಧ, ಅನಂತರ ಅದರ ಸುತ್ತ ಹುಟ್ಟಿಕೊಂಡ ಹಿಂದೂ ಮತಗಳ ಧ್ರುವೀಕರಣ ದಂತಹವೆಲ್ಲ ನಡೆಯುತ್ತಿದ್ದಾಗ ಯುಪಿಎ ಸರ್ಕಾರವು ಕಣ್ಣುಮುಚ್ಚಿ ಕುಳಿತಿತ್ತು. ದೇಶದಲ್ಲಿ ಸಂವಿಧಾನ ವಿರೋಧಿ ರಾಜಕೀಯವೊಂದು ಹಿಂದುತ್ವದ ಹೆಸರಿನಲ್ಲಿ ರೂಪುಗೊಳ್ಳುತ್ತಿರುವುದರತ್ತ ನಿರ್ಲಕ್ಷ್ಯ ವಹಿಸಿತ್ತು.

ಪರಿಣಾಮವಾಗಿ, 25 ವರ್ಷಗಳ ಸ್ಥಿರ ರಾಜಕೀಯದ ಅವಧಿಯಲ್ಲಿ ದೇಶವು ಸಂವಿಧಾನದ ಹಾದಿ ಬಿಟ್ಟು ತುರ್ತುಪರಿಸ್ಥಿತಿಯ ಕಾಲಕ್ಕಿಂತ ನೂರ್ಮಡಿ ದೂರ ಸರಿದಿದೆ. ಚುನಾವಣೆಗಳೂ ಅರ್ಥ ಕಳೆದುಕೊಳ್ಳುತ್ತಿವೆ. ಅಧಿಕಾರ ದುರುಪಯೋಗವೇ ಅಧಿಕಾರ ಚಲಾವಣೆ ಎಂಬಂತಾಗಿದೆ. ಪ್ರಜಾತಂತ್ರದ ನಾಲ್ಕೂ ಅಂಗಗಳು ನಿಸ್ತೇಜವಾಗಿವೆ. ಸಂಸತ್ತು 2024ರ ಚುನಾವಣೆಯ ನಂತರ ತುಸು ಚಿಗುರಿಕೊಂಡಿದೆ ಎನ್ನುವ ಆಂಶಿಕ ಸತ್ಯವೊಂದನ್ನುಳಿದು ಏನೂ ಬದಲಾಗಿಲ್ಲ. ತುರ್ತುಪರಿಸ್ಥಿತಿಯ ಕಾಲದಲ್ಲಿ ಮಾಧ್ಯಮಗಳ ಮೇಲೆ ನಿರ್ಬಂಧವಿತ್ತು. ಈಗ ಮಾಧ್ಯಮಗಳು ಆಳುವ ಪಕ್ಷದ ಹೊಗಳುಭಟರಂತೆ ವರ್ತಿಸುತ್ತಿರುವುದು ಮಾಧ್ಯಮ ನಿರ್ಬಂಧಗಳಿಗಿಂತ ಅಪಾಯಕಾರಿ ಬೆಳವಣಿಗೆ. ತುರ್ತುಪರಿಸ್ಥಿತಿಯ ಕಾಲದಲ್ಲಿ ನ್ಯಾಯಾಂಗ ತಾತ್ಕಾಲಿಕವಾಗಿ ವಿಚಲಿತಗೊಂಡಿತ್ತು. ಈಗ ನ್ಯಾಯಾಂಗದ ಪ್ರಮುಖ ಹುದ್ದೆಗಳಲ್ಲಿ ಇರುವ ಕೆಲವರು ಆಳುವ ಪಕ್ಷದ ಸೈದ್ಧಾಂತಿಕ ಸಮರ್ಥಕರಂತೆ ಮಾತನಾಡಿರುವುದು ವರದಿಯಾಗಿದೆ.

ತುರ್ತುಪರಿಸ್ಥಿತಿಯ ಕಾಲದಲ್ಲಿ ಅಧಿಕಾರಿವರ್ಗ ಅಸಹಾಯಕವಾಗಿತ್ತು ಅಥವಾ ಗುಲಾಮಗಿರಿಯನ್ನು ತಾತ್ಕಾಲಿಕವಾಗಿ ಒಪ್ಪಿಕೊಂಡಿತ್ತು. ಈಗ ಆಡಳಿತದ ಉಕ್ಕಿನ ಆವರಣ ಎನಿಸಿಕೊಂಡಿರುವ ಅಖಿಲ ಭಾರತ ಸೇವೆಗೆ ಸೇರಿದ ಮಂದಿ 'ಬಾಬರಿ ಮಸೀದಿ ಉರುಳಿದಾಗ ನಾವು ಸಿಹಿ ಹಂಚಿಕೊಂಡೆವು' ಅಂತ ಅಳುಕಿಲ್ಲದೆ ಹೇಳಿಕೊಳ್ಳುವಲ್ಲಿಯವರೆಗೆ ಪರಿಸ್ಥಿತಿ ಬಿಗಡಾಯಿಸಿದೆ.

ಭಾರತೀಯರ ಸಾಂವಿಧಾನಿಕ ಸಂವೇದನೆಗಳು ಜಡ್ಡುಗಟ್ಟದೇ ಹೋಗಿದ್ದರೆ ಇಷ್ಟೊತ್ತಿಗೆ 'ಸಂಪೂರ್ಣ ಕ್ರಾಂತಿ' ಮಾದರಿಯ ಪ್ರಯತ್ನವೊಂದು ಹುಟ್ಟಿಕೊಳ್ಳುತ್ತಿತ್ತು. 2024ರ ಚುನಾವಣಾ ಫಲಿತಾಂಶವು 1977ರ ಫಲಿತಾಂಶದಂತೆ ನಿರ್ಣಾಯಕವಾಗಿರುತ್ತಿತ್ತು. ಇಂದಿನಿಂದ ಪ್ರಾರಂಭವಾಗುವ ಈ ಶತಮಾನದ ಮುಂದಿನ ಅವಧಿಯಲ್ಲಾದರೂ ಮೂರನೆಯ ದರ್ಜೆಯ ರಾಜಕಾರಣವನ್ನು ಇಟ್ಟುಕೊಂಡು ಮೊದಲ ದರ್ಜೆಯ ದೇಶ ಕಟ್ಟಲು ಸಾಧ್ಯವಿಲ್ಲ ಎಂಬ ಸತ್ಯವನ್ನು ದೇಶ ಅರಿತುಕೊಂಡೀತೇ?

ಚುರುಮುರಿ



ಗಾದಿ ಭಾರತ!

• ಚಂದ್ರಕಾಂತ ವಡ್ಡು

ಬೈಟೂ ಕಾಫಿ ಸದನದ ಏಕೈಕ ಸಾಹಿತಿಸದಸ್ಯ ಕೊಟ್ರೇಶಿಗೆ ದೊಡ್ಡ ಮೊತ್ತದ ಪ್ರಶಸ್ತಿ ಬಂದಿತ್ತು.

'ಸಾಹಿತಿಗಳಿಗೆ ಪ್ರಶಸ್ತಿ ಯಾಕೆ ಕೊಡ್ತಾರೆ ಗೊತ್ತೇನ್ರಪಾ?' ತಿಂಗಳೇಶ ಪ್ರಶ್ನೋತ್ತರ ಕಲಾಪ ಆರಂಭಿಸಿದ.

'ಇನ್ನಾಕೆ ಕೊಡ್ತಾರೆ... ಅವರ ಸಾಧನೆ ಗುರ್ತಿಸಿ ಕೊಡ್ತಾರೆ'.

'ಈ ಸಾಧನೆ ಅಂದ್ರೆ ಏನು? ಅದನ್ನು ಹೇಗೆ ಅಳೆಯುತ್ತಾರೆ?'

'ಹಳೆಯ ಕಿಟ್ಟೆಲ್ ಡಿಕ್ಷನರಿಯಲ್ಲಿ 'ಸಾಧನೆ'ಯ ಹೊಸ 'ಪದಾರ್ಥ' ಸಿಗೋದಿಲ್ಲ; ಡಿಕಾಕ್ಷನ್ ಬೆರೆಸುತ್ತಾ ಗೂಗಲ್ ಕೇಳಬೇಕು'.

'ಅಷ್ಟೆಲ್ಲಾ ಕಷ್ಟ ಏಕೆ... ಉತ್ತರವು ಗೃಹಮಂತ್ರಿ ಹೇಳಿಕೆಗಳಷ್ಟೇ ಸರಳ... ಆ ಪಕ್ಷ ಇದ್ದಾಗ ಗುಲಾಮಗಿರಿ, ಈ ಪಕ್ಷ ಇರೋವಾಗ ಕೋಮುವಾದ ವಿರೋಧಿಸೋದೇ ಸಾಧನೆ. ಅದನ್ನು ಗುರುತಿಸೋದೇ ಪ್ರಶಸ್ತಿ'.

'ಇನ್ನಾದರೂ ನಿನ್ನ ಸಾಹಿತ್ಯ 'ಸಾಧನೆ' ಸಾಕುಮಾಡು ಎನ್ನುವ ಸೂಚನೆಯೂ ಪ್ರಶಸ್ತಿಯ ಹಿಂದಿರುತ್ತದಂತೆ, ಭೀಕರ ಭಾಷಣಕ್ಕೆ ಬೀಳುವ ಚಪ್ಪಾಳೆಯಂತೆ!'

ಬಿಸಿ ತನ್ನ ಬುಡಕ್ಕೇ ಬರುವುದನ್ನು ತಡೆಯಲು ಕೊಟ್ರೇಶಿ ವಿಷಯ ಬದಲಿಸಿದ: 'ಗಾಂಧಿ ಭಾರತ-ತಾತ್ಕಾಲಿಕ ಸ್ಥಗಿತ' ಅಂತ ಪತ್ರಿಕೆಯಲ್ಲಿ ಸುದ್ದಿ ಬಂದಿದೆ...

'ಹೌದು, ಮನಮೋಹನ ಸಿಂಗ್ ಅಂತಿಮ ದರ್ಶನಕ್ಕಾಗಿ 'ಗಾಂಧಿ ಭಾರತ' ಸ್ಥಗಿತಗೊಳಿಸಲಾಗಿದೆ. ಅದರಲ್ಲಿ ತಪ್ಪೇನಿದೆ?'

'ತಪ್ಪೇನಿಲ್ಲ... ಆದರೆ ಸ್ಥಗಿತಗೊಳಿಸಲು 'ಗಾಂಧಿ ಭಾರತ' ಎಲ್ಲಿತ್ತು, ಹೇಗಿತ್ತು ಅಂತ ನಂದು ಒಂದು ಇದು...'

'ನಿಮ್ಮ ಒಂದು ಇದೂನೂ ಸರಿನೇ... ಈಗ ಹಳಿ ಮೇಲೆ ಓಡುತ್ತಿರುವುದು 'ವಂದೇ ಭಾರತ್' ಒಂದೇ. ಅದನ್ನೇ 'ಮೋದಿ ಭಾರತ' ಎಂದು ಕರೆಯುವುದು. ಉಳಿದ ಭಾರತಕ್ಕೆ ಇಂಧನವಿಲ್ಲದೆ ಬಹಳ ದಿನ ಉರುಳಿವೆ'- ಅಡ್ಡ ಬಾಯಿ ಹಾಕಿದ ಕಮಲನಾಭ.

'ಗಾಂಧಿ ಭಾರತವೋ ಮೋದಿ ಭಾರತವೋ... ಗುಜರಾತಿ ಭಾರತ, ಗಾದಿ ಭಾರತ ಸ್ಥಗಿತಗೊಳ್ಳುವಂತೆ ಕಾಣುವುದಿಲ್ಲ' ಕಲಾಪ ಮುಗಿಸಿದ ತಿಂಗಳೇಶ.

ದಿನದ ಟ್ವೀಟ್

ಎಚ್ಚೆತ್ತುಕೊಳ್ಳಿ, ಬದಲಾಗಿ



ಕೆನಡಾದಲ್ಲಿ ಭಾರತದ ಮೂಲದವನೋ ಪಾಕಿಸ್ತಾನದ ಮೂಲದವನೋ ಯಾರೋ ರಸ್ತೆಯಲ್ಲಿ ಕಸ ಹಾಕಿದ್ದಕ್ಕೆ, ಪಕ್ಕದಲ್ಲಿ ಹೋಗುತ್ತಿದ್ದ ಗಾಡಿಯವನು ಬಂದು ನಿಲ್ಲಿಸಿ, ಬೈದು ಅದನ್ನು ಎತ್ತಿಸಿದ. ನಮ್ಮಲ್ಲಿ ಕಸ ಹೆಂಗೆ ಬಿಸಾಕ್ತೀವಿ ಯೋಚನೆ ಮಾಡಿ. ಕಸ ವಿಲೇವಾರಿ ಮಾಡುವುದಕ್ಕೆ ಜಾಗಗಳು ಇಲ್ಲ. ಎಲ್ಲೆಡೆ ಗಲೀಜು. ಜನ ಎಚ್ಚೆತ್ತುಕೊಳ್ಳಬೇಕು. ಅವರೇ ಬದಲಾಗಬೇಕು.

(ಕೆನಡಾದಲ್ಲಿ ರಸ್ತೆಯಲ್ಲಿ ಕಸ ಬಿಸಾಡಿದವರನ್ನು ಕರೆದು ಎತ್ತಿಸಿದ ವ್ಯಕ್ತಿಯೊಬ್ಬರ ವಿಡಿಯೊಗೆ ಪ್ರತಿಕ್ರಿಯೆ)

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ



ಸಮಯಕ್ಕೆ ನಿಜಕ್ಕೂ ಬೆಲೆ ಕೊಡುವವರು ಯಾರು ಅನ್ನುವ ಪ್ರಶ್ನೆ ಇದ್ದರೆ ಬೆಂಗಳೂರಿನ ಬೀದಿಗಳಲ್ಲಿ ಒಮ್ಮೆ ಸುತ್ತಾಡಿ. ಕತ್ತು ವಾರೆ ಮಾಡಿಕೊಂಡು ಮೊಬೈಲ್ ಫೋನ್‌ನಲ್ಲಿ ಮಾತಾಡುತ್ತ ಬೈಕ್ ಓಡಿಸುವವರು ಇದ್ದಾರಲ್ಲ, ಅವರಿಗಿಂತ ಸಮಯದ ಬೆಲೆ ಗೊತ್ತಿರುವವರು ಇದ್ದರೆ ತೋರಿಸಿ ನೋಡೋಣ. ಅಂತಹ ಮಲ್ಟಿ ಟಾಸ್ಕಿಂಗ್ ಮಾಡುವವರು ವಾರಕ್ಕೆ 70 ಗಂಟೆ ಬದಲು 40 ಗಂಟೆ ಕೆಲಸ ಮಾಡಿದರೆ ಸಾಕು.

ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಶನಿವಾರ, 1-1-2000

• ಶಿಸ್ತು, ಶಾಂತಿಯ ಹೊಸ ಶತಮಾನ

ಬೆಂಗಳೂರು, ಡಿ. 31– 'ನಮ್ಮ ದೇಶದಲ್ಲಿ ಎಲ್ಲವೂ ಇವೆ. ರತ್ನಗರ್ಭಾ ವಸುಂಧರಾ ಎಂಬ ಮಾತು ಭಾರತಕ್ಕೆ ಅನ್ವರ್ಥಕವಾಗಿದೆ. ಇಲ್ಲಿಯ ಕೊರತೆ ಎಂದರೆ ಶಿಸ್ತಿನದು. ಅದನ್ನು ನಾವು ತುಂಬಿಕೊಂಡೆವಾದರೆ ನಮಗೆ ಎಣೆಯಿಲ್ಲ...'

ಮತ್ತೊಂದು ವರ್ಷಕ್ಕೆ, ಹೊಸ ಶತಮಾನಕ್ಕೆ, ನವ ಸಹಸ್ರಮಾನಕ್ಕೆ ಜಗತ್ತು ಅಡಿ ಇಡುತ್ತಿರುವ ಪರ್ವ ಸಮಯದಲ್ಲಿ ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಭಾರತದ ಭವಿಷ್ಯಕ್ಕೆ ಬರೆದ ಮುನ್ನುಡಿ ಇದು.

'ಯುವಪೀಳಿಗೆಯನ್ನು ಶಿಸ್ತುಬದ್ಧ ಜೀವನದತ್ತ ಹೊರಳಿಸುವ ಕಾರ್ಯವನ್ನು ಪೋಷಕರೇ ಮಾಡಬೇಕಾಗಿದೆ. ನಮ್ಮ ನಂತರದ ಪೀಳಿಗೆಯಲ್ಲಿ ಶಿಸ್ತನ್ನು ಉದ್ದೀಪಿಸುವುದು ಎಂದರೆ ಇಡೀ ದೇಶವನ್ನು ಶಿಸ್ತಿನ ಅಡಿಗೆ ತರುವುದು. ಈಗ ಈ ಕಾರ್ಯ ಆಗಬೇಕಿದೆ' ಎಂದು ಅವರು ತಮ್ಮ ಮಾತಿಗೆ ಒತ್ತುಕೊಟ್ಟರು.

• ಅಪಹೃತರು ತಾಯ್ನಾಡಿಗೆ ಮೂವರು ಉಗ್ರರ ಬಿಡುಗಡೆ

ನವದೆಹಲಿ, ಡಿ. 31– ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಅಪಹರಿಸಿದ್ದ ಐವರು ಇಸ್ಲಾಮಿಕ್ ಉಗ್ರರ ಕೈಯಲ್ಲಿ ಕಳೆದ ಎಂಟು ದಿನಗಳಿಂದ ನರಕಯಾತನೆ ಅನುಭವಿಸಿದ ಸಿಬ್ಬಂದಿ ಸೇರಿದಂತೆ 159 ಮಂದಿ ಪ್ರಯಾಣಿಕರು ಕಂದಹಾರ್‌ನಿಂದ ಇಂದು ರಾತ್ರಿ ಇಲ್ಲಿಗೆ ಸುರಕ್ಷಿತವಾಗಿ ಬಂದಿಳಿದಾಗ, ಅವರನ್ನು ಸಚಿವರಾದ ಯಶವಂತ್ ಸಿನ್ಹಾ ಮತ್ತು ಶರದ್ ಯಾದವ್ ಸರ್ಕಾರದ ಪರವಾಗಿ ಆತ್ಮೀಯವಾಗಿ ಬರಮಾಡಿಕೊಂಡರು.

ಅಪಹರಣಕಾರರ ಷರತ್ತಿಗೆ ಒಪ್ಪಿದ ಭಾರತವು ಇಬ್ಬರು ಪಾಕಿಸ್ತಾನಿ ಮತ್ತು ಒಬ್ಬ ಕಾಶ್ಮೀರಿ ಉಗ್ರಗಾಮಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿದೆ.

50 ವರ್ಷಗಳ ಹಿಂದೆ

ಬುಧವಾರ, 1-1-1975

• ಜನಬೆಂಬಲ ಇಲ್ಲದ ಮೈತ್ರಿಕೂಟ ನಿರರ್ಥಕ

ಕಲ್ಲೀಕೋಟೆ, ಡಿ. 31– ಜನತಾ ಬೆಂಬಲ ಇಲ್ಲದ ರಾಜಕೀಯ ಮೈತ್ರಿ ಒಕ್ಕೂಟಗಳು ರಾಷ್ಟ್ರದಲ್ಲಿ ತೀವ್ರ ಸುಧಾರಣೆಗಳನ್ನು ಮಾಡಲಾರವು ಎಂದು ಸಂಸತ್ ಸದಸ್ಯ ಮಧುಲಿಮಯೆ ಸ್ಪಷ್ಟ ಪದಗಳಲ್ಲಿ ಹೇಳಿದರು.

ಸೋಷಲಿಸ್ಟ್ ಪಕ್ಷದ ರಾಷ್ಟ್ರೀಯ ಸಮ್ಮೇಳನದಲ್ಲಿ ತಾವು ಮಂಡಿಸಿದ ರಾಜಕೀಯ ನಿರ್ಣಯದ ಮೇಲೆ ಮಾತನಾಡುತ್ತಾ, 1967ರಲ್ಲಿ ಅಸ್ತಿತ್ವಕ್ಕೆ ಬಂದ ಸಮ್ಮಿಶ್ರ ಸರ್ಕಾರಗಳು, ಜನಪ್ರಿಯ ಚಳವಳಿಗಳನ್ನು ನೀರೆರೆದು ಪೋಷಿಸುವುದಕ್ಕೆ ಬದಲಾಗಿ ಪರಸ್ಪರ ಕಾದಾಟ ಮತ್ತು ಟೀಕೆಗಳಲ್ಲೇ ತಮ್ಮ ಅಮೂಲ್ಯ ಕಾಲ ವ್ಯಯ ಮಾಡಿದುವೆಂದು ತಿಳಿಸಿದರು.

ಕೇವಲ ಸರ್ಕಾರಗಳನ್ನು ಬದಲಾಯಿಸುವುದಷ್ಟೇ ಗುರಿಯಾಗಿರದೆ ಸಮಾಜದಲ್ಲಿ ಮೂಲಭೂತ ಬದಲಾವಣೆ ಮಾಡುವ ಅಗತ್ಯವನ್ನು ಒತ್ತಿ ಹೇಳಿದರು.

ಸಂಗತ

ವಿಭಿನ್ನ ಆಲೋಚನೆ: ಆರೋಗ್ಯಕರ ಜಗತ್ತು

ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಾದ ಸಂಕಲ್ಪವನ್ನೇಕೆ ನಾವು ಮಾಡಬಾರದು?

• ರಾಜಕುಮಾರ ಕುಲಕರ್ಣಿ

ನಿವೃತ್ತಿಯ ಅಂಚಿನಲ್ಲಿರುವ ನನ್ನ ಪರಿಚಿತರೊಬ್ಬರು ಪ್ರತಿನಿತ್ಯ ಕಾಲ್ನಡಿಗೆಯ ಮೂಲಕವೇ ತಮ್ಮ ಕಚೇರಿಗೆ ಹೋಗುತ್ತಾರೆ. ಸಾಯಂಕಾಲ ಕಚೇರಿಯಿಂದ ಮನೆಗೆ ಮರಳುವಾಗ ಕೂಡ ನಡೆದುಕೊಂಡೇ ಬರುತ್ತಾರೆ. ಏಕೆ ಹೀಗೆಂದು ಪ್ರಶ್ನಿಸಿದರೆ ಅವರು ಹೇಳುವುದು ಹೀಗೆ- 'ದಿನನಿತ್ಯದ ನಡಿಗೆ ನನ್ನನ್ನು ಆರೋಗ್ಯವಂತನನ್ನಾಗಿ ಇಟ್ಟಿದೆ. ಜೊತೆಗೆ ನನ್ನದೆಂಬ ಸ್ವಂತದ ಖಾಸಗಿ ವಾಹನ ಇಲ್ಲದಿರುವುದರಿಂದ ಪರಿಸರವನ್ನು ಸ್ವಚ್ಛವಾಗಿ ಇಡಲು ಒಂದಿಷ್ಟಾದರೂ ಕೊಡುಗೆ ನೀಡುತ್ತಿದ್ದೇನೆಂಬ ತೃಪ್ತಿ ನನಗಿದೆ'. ಅವರಾಡಿದ ಈ ಮಾತು ಕೇಳಿ ಅಚ್ಚರಿಯಾದರೂ ಅವರ ಬಗ್ಗೆ ಮನದಲ್ಲಿ ಅಭಿಮಾನ ಮೂಡದೇ ಇರಲಿಲ್ಲ.

ಕಾಲೇಜು ವಿದ್ಯಾರ್ಥಿಯಾಗಿದ್ದಾಗ ನಾನು ವಾಸವಾಗಿದ್ದ ಬಡಾವಣೆಯಲ್ಲಿ ಹಿರಿಯರೊಬ್ಬರು ಪ್ರತಿನಿತ್ಯ ಬಡಾವಣೆಯ ರಸ್ತೆಗಳನ್ನು ಸ್ವಚ್ಛಗೊಳಿಸುತ್ತಿದ್ದರು. ತಾವು ಮಾಡುತ್ತಿದ್ದ ಸೇವೆಗೆ ಬದಲಾಗಿ ಅವರು ಯಾರಿಂದಲೂ ಏನನ್ನೂ ನಿರೀಕ್ಷಿಸುತ್ತಿರಲಿಲ್ಲ. ದೇವಸ್ಥಾನದ ಹತ್ತಿರದ ಸಣ್ಣ ಕೋಣೆಯಲ್ಲಿ ಒಬ್ಬಂಟಿಯಾಗಿ ವಾಸಿಸುತ್ತಿದ್ದ ಅವರು ಬಹಳ ಸ್ವಾಭಿಮಾನಿಯಾಗಿದ್ದರು. ಬಡಾವಣೆಯವರ ಸಹಾಯವನ್ನು ವಿನಮ್ರರಾಗಿ ನಿರಾಕರಿಸುತ್ತಿದ್ದರು. ಸರ್ಕಾರವಾಗಲಿ, ಸಂಘ-ಸಂಸ್ಥೆಗಳಾಗಲಿ ಅವರನ್ನು ಗುರುತಿಸಿ ಗೌರವಿಸಲಿಲ್ಲ. ಕೆಲವರು ಆ ಹಿರಿಯರು ಮಾಡುತ್ತಿರುವುದು ನಿರುಪಯುಕ್ತ ಕೆಲಸವೆಂದು ನಗೆಯಾಡುತ್ತಿದ್ದರು. ಹಾಗೆಂದು ಅವರು ತಾವು ಮಾಡುತ್ತಿದ್ದ ಆ ಜನೋಪಯೋಗಿ ಕೆಲಸದಿಂದ ಹಿಂದೆ ಸರಿಯಲಿಲ್ಲ. ತಮ್ಮ ಆ ಕ್ರಿಯೆಯ ಮೂಲಕ ಜನರಿಗೆ ಸ್ವಚ್ಛತೆಯ ಅಗತ್ಯವನ್ನು ಮನಗಾಣಿಸುತ್ತಿದ್ದರು.

ಈ ಇಬ್ಬರು ಮಹನೀಯರ ನಡೆ ಶಿವರಾಮ ಕಾರಂತ ಅವರ ಮಾತನ್ನು ನೆನಪಿಸುತ್ತದೆ. ಕಾರಂತರು 'ನಾವು ಜಗತ್ತನ್ನು ಬಿಟ್ಟು ಹೋಗುವಾಗ ಅದನ್ನು ಈಗಿರುವುದಕ್ಕಿಂತ ಒಂದಿಷ್ಟು ಚೆಂದ ಕಾಣುವಂತೆ ಮಾಡಿ ಹೋಗಬೇಕು' ಎನ್ನುತ್ತಿದ್ದರು. 'ನಾವು ಈ ಜಗತ್ತಿಗೆ ಮರಳಿ ಬರದಿದ್ದರೆ ಏನಾಯಿತು? ನಮ್ಮ ಮುಂದಿನ ಪೀಳಿಗೆಗೆ ಒಂದು ಸುಂದರ ಜಗತ್ತು ಬೇಡವೇ?' ಎಂದು ಪ್ರಶ್ನಿಸಿದ್ದರು. ಸಾಲುಮರದ ತಿಮ್ಮಕ್ಕ, ತುಳಸಿಗೌಡ, ರಾಜಕಾರಣದಲ್ಲಿ ಶಾಂತವೇರಿ ಗೋಪಾಲಗೌಡ, ಸಿನಿಮಾದಲ್ಲಿ ರಾಜ್‌ಕುಮಾರ್ ಇವರೆಲ್ಲ ತಮ್ಮ ವಿಭಿನ್ನ ಆಲೋಚನೆಗಳಿಂದ ಪ್ರಾತಃಸ್ಮರಣೀಯರಾಗಿದ್ದಾರೆ. ಯೋಚಿಸಿದ್ದನ್ನು ಕಾರ್ಯರೂಪಕ್ಕೆ ತಂದ ಮಹನೀಯರಿವರು. ರಾಜ್‌ಕುಮಾರ್ ಈ ನೆಲದ, ಭಾಷೆಯ ಹೆಮ್ಮೆ ಹಾಗೂ ಅಭಿಮಾನವಾಗಿ ರೂಪುಗೊಳ್ಳಲು, ನಾಡಿನ ಸಾಂಸ್ಕೃತಿಕ ನಾಯಕನಾಗಿ ಬೆಳೆಯಲು ಅವರು ತುಳಿದ ವಿಭಿನ್ನ ದಾರಿಯೇ ಕಾರಣವಾಗಿತ್ತು. ಸಿನಿಮಾರಂಗದ ಥಳುಕು ಬಳುಕಿನ ನಡುವೆ ಗಿರೀಶ್ ಕಾಸರವಳ್ಳಿ ಅವರಂಥ ನಿರ್ದೇಶಕರು ವಿಭಿನ್ನವಾಗಿ ಆಲೋಚಿಸಿದ್ದರಿಂದಲೇ ಸಿನಿಮಾರಂಗಕ್ಕೆ ಅತ್ಯುತ್ತಮ ಸಿನಿಮಾಗಳ ಕಾಣ್ಕೆ ಸಾಧ್ಯವಾಯಿತು.

ಶಾಲೆಯನ್ನು ನಂದನವನವಾಗಿಸಿದ ಶಿಕ್ಷಕರು, ಹಳ್ಳಿಗಳಲ್ಲಿ ನೆಲೆನಿಂತ ವೈದ್ಯರು, ರೋಗಿಗಳ ಆರೈಕೆಯಲ್ಲಿ ದೇವರನ್ನು ಕಾಣುವ ದಾದಿಯರು, ಬೀದಿನಾಯಿಗಳಿಗೆ ಉಣಬಡಿಸುವ ಕರುಣಾಳುಗಳು, ಪಕ್ಷಿಗಳಿಗೆ ನೀರುಣಿಸುವ ದಯಾಪರರು...ಇಂಥ ನೂರಾರು ಜನ ಪ್ರತಿ ಕ್ಷೇತ್ರದಲ್ಲಿ ಕಾಣಸಿಗುತ್ತಾರೆ. ಕೊರೊನಾ ಕಾಲಘಟ್ಟದಲ್ಲಿ ಮನೆ ಮನೆಗೂ ಪಡಿತರ ಹಂಚಿ ಸೇವಾ ಮನೋಭಾವ ತೋರಿದವರ ಸಂಖ್ಯೆ ಅಗಣಿತವಾಗಿದೆ. ಅದೆಷ್ಟೋ ವಾಹನ ಚಾಲಕರು ಉಚಿತವಾಗಿ ಶವಗಳನ್ನು ಸಾಗಿಸಿ ಹಿರಿಮೆ ಮೆರೆದರು. ಮದುವೆಮನೆಗಳಲ್ಲಿ ವ್ಯರ್ಥವಾಗುವ ಆಹಾರವನ್ನು ಸಂಗ್ರಹಿಸಿ ಅನಾಥಾಶ್ರಮಗಳಿಗೆ ತಲುಪಿಸುವ ಯುವಕರ ಪಡೆಯೇ ಇದೆ. ಸಮಾಜಕ್ಕೆ ಉಪಯೋಗವಾಗುವ ಇಂಥ ಕಾರ್ಯಗಳು ಸಾಧ್ಯವಾದದ್ದು ವಿಭಿನ್ನ ಆಲೋಚನೆ, ಸಮಾಜಕ್ಕೆ ಏನನ್ನಾದರೂ ನೀಡಬೇಕೆಂಬ ತುಡಿತದಿಂದ.



ಎಸ್.ಎಲ್.ಭೈರಪ್ಪ ಅವರ 'ತಂತು' ಕಾದಂಬರಿಯಲ್ಲಿ ಪಾತ್ರವೊಂದರ ಮಾತು ಹೀಗಿದೆ- 'ಎಷ್ಟೇ ಸಂಪಾದನೆ ಮಾಡಿರಲಿ ಎರಡು ಚಪಾತಿ, ಎರಡು ಹಿಡಿ ಅನ್ನಕ್ಕಿಂತ ಒಂದು ಸಲಕ್ಕೆ ಹೆಚ್ಚು ತಿನ್ನಕ್ಕೆ ಆಗೊಲ್ಲ, ಒಟ್ಟಿಗೆ ಎರಡು ಶರಟು ಹಾಕುಕ್ಕೆ ಆಗೊಲ್ಲ, ಒಂದೇ ಸಲ ಎರಡು ಕಾರಿನಲ್ಲಿ ಕೂಡುಕ್ಕೆ ಆಗೊಲ್ಲ ಅಂತ ಅರ್ಥ ಮಾಡಿಕೊಂಡರೆ ದುರಾಶೆ ತನಗೆ ತಾನೆ ಇಳಿದು ಹೋಗುತ್ತೆ'. ಕೊಳ್ಳುಬಾಕ ಸಂಸ್ಕೃತಿಯ ನಡುವೆ ಕಳೆದು ಹೋದವರಿಗೆ ಈ ಮಾತು ನೀತಿಪಾಠದಂತಿದೆ.

ನಾನೊಬ್ಬ ವಿಭಿನ್ನವಾಗಿ ಆಲೋಚಿಸಿದರೆ ಜಗತ್ತು ಸುಧಾರಿಸುವುದೇ ಎಂದು ವಾದಿಸುವವರ ಸಂಖ್ಯೆಯೇನೂ ಕಡಿಮೆ ಇಲ್ಲ. ಗಿರಿಶಿಖರವನ್ನು ಹತ್ತುವುದು ಮೊದಲ ಮೆಟ್ಟಿಲಿನಿಂದಲೇ ಶುರುವಾಗಬೇಕು. ಕ್ರಮಿಸುವ ದಾರಿ ದೂರವೆಂದು ಕೈಚೆಲ್ಲಿದವರು ಬೆಟ್ಟ ಹತ್ತಲಾರರು. ಬಸವಣ್ಣ, ಬುದ್ಧ, ಗಾಂಧಿ ಅವರಂತಹ ದಾರ್ಶನಿಕರು ತಮ್ಮ ವಿಭಿನ್ನ ಆಲೋಚನೆ ಮತ್ತು ಆ ಆಲೋಚನೆಯನ್ನು ಕೃತಿಯಾಗಿಸುವುದರ ಮೂಲಕ ಮಾನವ ಜಗತ್ತಿಗೆ ದಾರಿದೀಪವಾದರು. ಸಮಾನತೆಗಾಗಿ ಶ್ರಮಿಸಿದ ಬಸವಣ್ಣ, ಆಸೆಯೇ ದುಃಖಕ್ಕೆ ಮೂಲ ಎಂದ ಬುದ್ಧಗುರು, ಬದುಕಿನ ಸರಳತೆಯ ಪಾಠ ಬೋಧಿಸಿದ ಮಹಾತ್ಮ ಗಾಂಧಿ ಇವರೆಲ್ಲ ನಡೆದ ಮಾರ್ಗದಲ್ಲಿ ಹೆಜ್ಜೆಹಾಕುವ ಸಂಕಲ್ಪ ನಮ್ಮದಾಗಬೇಕಿದೆ.

ಹೊಸ ವರ್ಷದ ಹೊಸ್ತಿಲಲ್ಲಿ ನಿಂತು ಹೊಸ ಸಂಕಲ್ಪಗಳನ್ನು ಮಾಡುತ್ತೇವೆ. ವರ್ಷದೊಳಗೆ ಮನೆ ಕಟ್ಟುವ, ಕಾರು ಖರೀದಿಸುವ, ಕೆಲಸದ ಬಡ್ತಿ, ಮಕ್ಕಳ ಮದುವೆ ಹೀಗೆ ತರಹೇವಾರಿ ಸಂಕಲ್ಪಗಳನ್ನು ಮಾಡಿ ಅವುಗಳನ್ನು ಕಾರ್ಯಗತಗೊಳಿಸಲು ಕಂಕಣಬದ್ಧರಾಗುತ್ತೇವೆ. ವೈಯಕ್ತಿಕ ಬದುಕಿನ ಈ ಎಲ್ಲ ಸಂಕಲ್ಪಗಳ ನಡುವೆ ನಾವು ಕೂಡ ವಿಭಿನ್ನ ಆಲೋಚನೆಯ ಹಾದಿ ತುಳಿಯುವ ಸಂಕಲ್ಪವನ್ನೇಕೆ ಮಾಡಬಾರದು? ಸಮಾಜದ ಸ್ವಾಸ್ಥ್ಯಕ್ಕಾಗಿ ಇಂತಹದ್ದೊಂದು ಸಂಕಲ್ಪ ಇಂದಿನ ತುರ್ತು ಅಗತ್ಯವಾಗಿದೆ.

ವಾಚಕರ ವಾಣಿ

ಬದುಕಿರುವಾಗಲೇ ಗೌರವಿಸಿ

ಪ್ರಧಾನಮಂತ್ರಿಯಾಗಿ ಎರಡು ಅವಧಿಗೆ ದೇಶವನ್ನು ಮುನ್ನಡೆಸಿದ ಆರ್ಥಿಕ ತಜ್ಞ ಮನಮೋಹನ ಸಿಂಗ್ ಅವರಿಗೆ ಮರಣೋತ್ತರವಾಗಿ 'ಭಾರತರತ್ನ' ಪ್ರಶಸ್ತಿ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ತೆಲಂಗಾಣ ವಿಧಾನಸಭೆ ಮನವಿ ಮಾಡಿದೆ. ಈ ಸಂಬಂಧ ನಿರ್ಣಯವನ್ನೂ ಅಂಗೀಕರಿಸಿದೆ. ಇದು ರಾಜಕೀಯ ನಡೆ ಎಂದೆನಿಸಿದರೂ ಸ್ವಾಗತಾರ್ಹ.ರಾಷ್ಟ್ರ ಮಟ್ಟದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳೂ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ಪ್ರಶಸ್ತಿಗಳನ್ನು ಅರ್ಹರು ಬದುಕಿದ್ದಾಗಲೇ ಗುರುತಿಸಿ, ಪ್ರದಾನ ಮಾಡಿದಲ್ಲಿ ಸಾಧಕರಿಗೆ ಸಂತೋಷ ಆಗುತ್ತದೆ. ಪ್ರಶಸ್ತಿಗೆ ಒಂದು ಮೌಲ್ಯವೂ ಸಿಗುತ್ತದೆ. ಅದನ್ನು ಬಿಟ್ಟು, ನಿಧನರಾದ ನಂತರ ಪ್ರಶಸ್ತಿ ನೀಡಿದರೆ ಅದರಿಂದ ಹೆಚ್ಚಿನ ಪ್ರಯೋಜನ ಆಗದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ನಿಲ್ಲಲಿ ದ್ವೇಷ

ಅಂಬೆಗಾಲಿಡುತ ಬಂದಿದೆ ಹೊಸ ವರ್ಷ
ರೈತಾಪಿ ಜನಕೆ ಭೂತಾಯಿ ನೀಡಲಿ
ಸದಾ ಹಸಿರ ಸ್ಪರ್ಶ,
ಸರ್ಕಾರಿ ಅಧಿಕಾರಿಗಳ
ಕಾಯಕದಲಿ ಮೂಡಲಿ ಆದರ್ಶ,
ತೊಲಗಲಿ ರಾಜಕಾರಣಿಗಳಲಿ
ಕಾರುವ ದ್ವೇಷ,
2025 ನಾಡಿನ ತುಂಬಾ
ತುಳುಕಿಸಲಿ ಹರ್ಷ.

ಜೆ.ಬಿ.ಮಂಜುನಾಥ, ಪಾಂಡವಪುರ

ಲಂಚದ ಪಟ್ಟಿ ಪ್ರಕಟಿಸುವುದು ಸೂಕ್ತ

ನಗರ ಹಾಗೂ ಗ್ರಾಮೀಣ ಪ್ರದೇಶದ ಜನ ತಮ್ಮ ಕೆಲಸ ಮಾಡಿಸಿಕೊಳ್ಳಲು ಸರ್ಕಾರಿ ಕಚೇರಿಗಳಿಗೆ ದಿನನಿತ್ಯ ಅಲೆಯುವುದನ್ನು ತಪ್ಪಿಸಲು, ಯಾರಿಗೆ ಎಷ್ಟು ಲಂಚ ಎಂಬ ಪಟ್ಟಿ ಪ್ರಕಟಿಸುವುದು ಸೂಕ್ತ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಮ್ಮ ಸರ್ಕಾರಿ ಕಚೇರಿಗಳ ದುಃಸ್ಥಿತಿಯನ್ನು ಈ ಮಾತು ಬಿಂಬಿಸುತ್ತದೆ.

ಸರ್ಕಾರದ ಚುಕ್ಕಾಣಿ ಹಿಡಿದ ಯಾರಿಂದಲೂ ಲಂಚದ ಪಿಡುಗನ್ನು ನಿರ್ಮೂಲ ಮಾಡಲು ಇದುವರೆಗೂ ಸಾಧ್ಯವಾಗಿಲ್ಲ. ಪ್ರತಿ ಇಲಾಖೆಯಲ್ಲೂ ಲಂಚದ ಭೂತಕುಣಿತ ಇದೆ. ಈ ಕುರಿತ ಸಾರ್ವಜನಿಕರ ಗೊಣಗಾಟ ಎಲ್ಲೆಡೆಯೂ ಕೇಳಿಸುತ್ತದೆ. ಈ ಪಿಡುಗು ಎಂದು ಕೊನೆಗೊಳ್ಳುತ್ತದೋ?

ರವಿ ಪ್ರಸಾದ್, ಮೈಸೂರು

ಆರೋಗ್ಯಕರ ನಾಳೆಗಳಿಗಾಗಿ ಶ್ರಮಿಸೋಣ

ಪತ್ರಿಕೆಯಲ್ಲಿ ಪ್ರಕಟವಾದ 2024ರ ಘಟನಾವಳಿಗಳನ್ನು ನೋಡಿದರೆ, ಗಳಿಸಿದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚು ಅನ್ನಿಸುತ್ತದೆ. ಸಾಮಾಜಿಕ ಕಳಕಳಿಯಲ್ಲಿ, ವ್ಯಕ್ತಿಗತ ಸಾಧನೆಗಳಲ್ಲಿ ಹಾಗೂ ಕ್ರೀಡಾರಂಗದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಗಲಿಲ್ಲ. ಹಲವಾರು ಪ್ರಮುಖ ಪ್ರತಿಭಾವಂತರನ್ನು ಕಳೆದುಕೊಂಡು, ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವ ಹಲವಾರು ಪ್ರಕರಣಗಳಿಗೆ 2024 ಸಾಕ್ಷಿಯಾಯಿತು.

ರಾಜಕೀಯ ನಾಯಕರ ಏಳುಬೀಳು, ಸಂಯಮವಿಲ್ಲದ ಮಾತುಗಳು, ವೈಯಕ್ತಿಕ ಮಟ್ಟದ ಪರಸ್ಪರ ದ್ವೇಷಾರೋಪ ಮುಂಚೂಣಿಗೆ ಬಂದು ಬೇಸರ ಉಂಟುಮಾಡಿದವು. ಹೊಸ ವರ್ಷದಲ್ಲಿ ಇದೆಲ್ಲಕ್ಕಿಂತ ಭಿನ್ನವಾದ, ನಮ್ಮೆಲ್ಲರ ಜೀವನಶೈಲಿ ಇನ್ನಷ್ಟು ಉತ್ತಮಗೊಳ್ಳುವ, ಸಮಾಜದ ಎಲ್ಲೆಡೆ ಕೊಟ್ಟು– ತೆಗೆದುಕೊಳ್ಳುವಂತಹ ಸೌಹಾರ್ದದ ವಾತಾವರಣಕ್ಕಾಗಿ ಪ್ರಾರ್ಥಿಸೋಣ. ಅದು ಕೈಗೂಡಲು ನಾವೆಲ್ಲರೂ ಪ್ರಾಮಾಣಿಕವಾಗಿ ಶ್ರಮಿಸೋಣ.

ಕಡೂರು ಫಣಿಶಂಕರ್, ಬೆಂಗಳೂರು

ಮಕ್ಕಳೆಂದರೆ ಇವರಿಗೆ ಆಟಿಕೆಗಳೇ?

ದಂಪತಿಗಳು ಕನಿಷ್ಠ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಮಕ್ಕಳನ್ನು ಹೊಂದಬೇಕೆಂದು ಸೂಚಿಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿದ ಹವ್ಯಕ ದಂಪತಿ ತಮ್ಮ ಮಠಕ್ಕೆ ಮಕ್ಕಳನ್ನು ದಾನವಾಗಿ ನೀಡಬಹುದೆಂದು ಹೇಳಿದ್ದಾರೆ. ಇವೆಲ್ಲವನ್ನೂ ಓದುವಾಗ, ಇವರೆಲ್ಲ ಮಕ್ಕಳೆಂದರೆ ಆಟಿಕೆಗಳೆಂದು ಭಾವಿಸಿದ್ದಾರೆಯೇ ಎಂಬ ಅನುಮಾನ ಮೂಡುತ್ತದೆ.

ಸುನೀಲ ನಾಯಕ, ಬೆಂಗಳೂರು

ನಾವು ಕಾಡು ಬೆಳೆಸುವುದೆಂದರೆ...

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಪರಿಹಾರವಾಗಿ ಅರಣ್ಯೀಕರಣಕ್ಕಾಗಿ 508 ಎಕರೆ ಜಾಗವನ್ನು ರಾಜ್ಯ ಸರ್ಕಾರ ಗುರುತಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 31). ಉದ್ದೇಶಿತ ಜಾಗದಲ್ಲಿ ಕಾಡು ಬೆಳೆಸಲು ವ್ಯವಸ್ಥೆ ಮುಂದಾಗಬಹುದು. ಆದರೆ ಮೂಲಭೂತವಾಗಿ ಕಾಡೆಂದರೇನು ಹಾಗೂ ಕಾಡನ್ನು ಬೆಳೆಸಬಹುದೇ ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ. ಕಾಡೆಂದರೆ ಬರೀ ಗಿಡಮರಗಳ ಸಮೂಹವಲ್ಲ. ಅರಣ್ಯೀಕರಣದ ನೆಪದಲ್ಲಿ ಕೆಲವು ಗಿಡಗಳನ್ನು ಸಾಲಾಗಿ ನೆಟ್ಟು ಪೋಷಿಸಿದರೆ ಆ ಪ್ರದೇಶದಲ್ಲಿ ಒಂದು ನೆಡುತೋಪನ್ನು ಸೃಷ್ಟಿಸಬಹುದೇ ವಿನಾ ಅದು ಕಾಡಾಗಲು ಸಾಧ್ಯವಿಲ್ಲ. ಕಾಡೆಂಬುದು ಅನೇಕ ಜಾತಿಯ ಗಿಡ ಮರ, ಪೊದೆ, ಬಳ್ಳಿಗಳು, ವಿವಿಧ ರೀತಿಯ ಜೀವಸಂಕುಲಗಳಂತಹ ಅನೇಕ ಜೈವಿಕ ಮತ್ತು ಅಜೈವಿಕ ಘಟಕಗಳ ಸಂಕೀರ್ಣವಾಗಿದೆ. ಇವುಗಳನ್ನೆಲ್ಲ ನಾವು ಸೃಷ್ಟಿಸಲು ಸಾಧ್ಯವಿಲ್ಲ. ಅದು ಕಾಲಾನಂತರದಲ್ಲಿ ತಾನಾಗಿಯೇ ರೂಪುಗೊಳ್ಳುವ ಪ್ರಕ್ರಿಯೆ.

ಕಾಡನ್ನು ಬೆಳೆಸುವುದು ಬೆಳೆ ಬೆಳೆಸಿದಂತಲ್ಲ. ಈ ಸೂಕ್ಷ್ಮವನ್ನು ಜನಸಾಮಾನ್ಯರು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಇರುವ ಕಾಡನ್ನು ಅಭಿವೃದ್ಧಿಯ ಹೆಸರಿನಲ್ಲಿ ಕಾಡದೇ ಬಿಟ್ಟರೆ ಹೆಚ್ಚು ಕ್ಷೇಮ. ಜೊತೆಗೆ ಕಾಡನ್ನು ಬಳಸಿಕೊಂಡು ಕುಡಿಯುವ ನೀರು ಕೊಡುವ ಯೋಜನೆಗಳು ಮೇಲ್ನೋಟಕ್ಕೆ ಉತ್ತಮವಾಗಿ ಕಂಡರೂ ಮುಂದೆ ನಾಶವಾದ ಕಾಡುಗಳಿಂದ ಮಳೆಬಾರದೇ ಇಂತಹ ಯೋಜನೆಗಳೇ ಅರ್ಥ ಕಳೆದುಕೊಳ್ಳುವುದರಲ್ಲಿ ಅನುಮಾನವಿಲ್ಲ. ನಮ್ಮ ಅಭಿವೃದ್ಧಿಯ ಯೋಜನೆಗಳೇನೇ ಇರಲಿ ಅವುಗಳನ್ನು ಕಾಡಿನಿಂದ ದೂರವಿಡಬೇಕು. ಇಲ್ಲದಿದ್ದರೆ ಯೋಜನೆಗಳಿಗೆ ವ್ಯಯಿಸುವ ಹಣದ ನೂರಾರು ಪಟ್ಟು ಹಣವನ್ನು ಕಾಡುಗಳ ನಾಶದಿಂದಾಗುವ ಪ್ರಕೃತಿ ವಿಕೋಪಗಳಿಗೆ ಅದೇ ಜನರಿಗೆ ಪರಿಹಾರವಾಗಿ ಕೊಡಬೇಕಾಗುತ್ತದೆ. ಇನ್ನೂ ದುರಂತವೆಂದರೆ, ಈಗಾಗಲೇ ಇಂತಹ ವಿಕೋಪಗಳಿಗೆ ಸಿಲುಕಿ ನಲುಗಿದವರಿಗೆ ಎಷ್ಟರಮಟ್ಟಿಗೆ ಪರಿಹಾರ ದೊರಕಿದೆ ಎಂಬುದರ ಬಗ್ಗೆ ಕಣ್ಣು ಹಾಯಿಸಬೇಕಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹೆಜ್ಜೆ ನೋಟ; ಹೊಸ ಹುಡುಕಾಟ

ವರ್ಷಪೂರ್ತಿ ಇಟ್ಟು ಸಾಗಿದ ಸದೃಢ ಹೆಜ್ಜೆಯನ್ನು ಮೆಲುಕುಹಾಕುತ್ತಲೇ ಮತ್ತೆ ಹೊಸ ಹುಡುಕಾಟದ ತವಕ ಹೊತ್ತು ಮುನ್ನಡೆಯತ್ತ ಚಿಮ್ಮುವುದು ಹೊಸ ವರ್ಷದ ಹೊಸ್ತಿಲಿನಲ್ಲಿ ನಿಂತವರ ಸಂಕಲ್ಪವಾಗಬೇಕು. ಮಾಧ್ಯಮ ಯಾವತ್ತೂ ಜನರಿಗೆ ಉತ್ತರದಾಯಿಯಾಗಬೇಕು, ನಾಡವರು ಅನುಭವಿಸುವ ಸಂಕಟಗಳಿಗೆ ಧ್ವನಿಯಾಗಬೇಕು ಎನ್ನುವ ಪತ್ರಿಕಾಧರ್ಮವನ್ನು ಪಾಲಿಸುತ್ತಾ, ಆ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವ 'ಪ್ರಜಾವಾಣಿ'ಗೆ ಹಲವು ಪರಿವರ್ತನೆಗಳಿಗೆ ಕಾರಣವಾದ ಖುಷಿ. ನಿಮ್ಮ ಪ್ರೀತಿಯ ಪತ್ರಿಕೆ ಸಮಾಜದಲ್ಲಿ ಅಂತಹ ಸಕಾರಾತ್ಮಕ ಬದಲಾವಣೆಗೆ ಕಾರಣವಾದ ಕೆಲವು ಹೆಜ್ಜೆ ಗುರುತುಗಳು ಇಲ್ಲಿವೆ. ಜನರ ದನಿಗೆ ಕಿವಿಯಾಗಿ, ಬಾಯಾಗುವ ತನ್ನ ಕರ್ತವ್ಯಪರತೆಯನ್ನು ಪತ್ರಿಕೆ ಎಂದಿನಂತೆ ಮುಂದುವರಿಸಲಿದೆ


ಪ್ರಜಾವಾಣಿ
ರಾಜ್ಯಪಾಲರ ಅನುಮತಿ ವಿರೋಧಿಸಿ ಪ್ರತಿಭಟನೆ
ಕೆಪಿಎಸ್‌ಸಿ ಪರೀಕ್ಷೆ: ಪ್ರಶ್ನೆಗಳ ಕನ್ನಡ ಅನುವಾದದಲ್ಲಿ ಎಡವಟ್ಟು
'ಗುಟೇಶನ್ ಟ್ರಾನ್ಸ್‌ಫಿರೇಷನ್ ಪುಲ್ಗೆ ಕಾರಣ'
384 | 1,31,885 | 2,10,916 | 79,031

ಕೆಪಿಎಸ್‌ಸಿ ಎಡವಟ್ಟಿನ ಬಗ್ಗೆ ಸರಣಿ ವರದಿ

ಕೆಪಿಎಸ್‌ಸಿಯು 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ನಡೆಸಿದ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಭಾರಿ ಎಡವಟ್ಟುಗಳನ್ನು ಮಾಡಿತ್ತು. ಈ ಬಗ್ಗೆ ಪತ್ರಿಕೆ ಆಗಸ್ಟ್ 28ರಂದು 'ಕೆಪಿಎಸ್‌ಸಿ ಪರೀಕ್ಷೆ ಎಡವಟ್ಟು: 'ಗುಟೇಶನ್ ಟ್ರಾನ್ಸ್‌ಫಿರೇಷನ್ ಪುಲ್ಗೆ ಕಾರಣ' ಎನ್ನುವ ವರದಿ ಪ್ರಕಟಿಸಿತ್ತು. ಅದರ ನಂತರವೂ ಈ ಸಂಬಂಧ ಸರಣಿ ವರದಿಗಳನ್ನು ಪ್ರಕಟಿಸಿತು. ಸರ್ಕಾರ ತಪ್ಪಿತಸ್ಥರ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳದೇ ಮೌನ ವಹಿಸಿದ್ದರ ಬಗ್ಗೆಯೂ ವರದಿ ಮಾಡಲಾಯಿತು. ಕೊನೆಗೆ ಎಚ್ಚೆತ್ತ ಸರ್ಕಾರ, ಮರುಪರೀಕ್ಷೆಯ ನಿರ್ಧಾರ ಪ್ರಕಟಿಸಿತ್ತು. ಜತೆಗೆ, ಕೆಪಿಎಸ್‌ಸಿ ಕಾರ್ಯದರ್ಶಿ ಕೆ.ರಾಕೇಶ್‌ಕುಮಾರ್ ಅವರನ್ನು ವರ್ಗಾವಣೆ ಮಾಡಿತ್ತು.

ಅರ್ಹರಿಗೆ ಮತ್ತೆ ಸಿಕ್ಕ ಬಿಪಿಎಲ್ ಕಾರ್ಡ್

ಸೆಪ್ಟೆಂಬರ್ 30ರ ಸಂಚಿಕೆಯಲ್ಲಿ 'ಬಿಪಿಎಲ್ ಕಾರ್ಡ್ ಕಸಿದ ಐಟಿ ಪಟ್ಟಿ' ಎಂಬ ತಲೆಬರಹದಲ್ಲಿ ಪ್ರಕಟವಾದ ವಿಶೇಷ ವರದಿ ರಾಜ್ಯದ ಗಮನ ಸೆಳೆಯಿತು. ಬಿಪಿಎಲ್ ಕಾರ್ಡ್ ಪರಿಷ್ಕರಣೆ ಮಾಡುವ ರಾಜ್ಯ ಸರ್ಕಾರದ ಕ್ರಮದ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆದವು. ಸರ್ಕಾರ ಕೊನೆಗೆ ರದ್ದಾಗಿದ್ದ ಅರ್ಹರ ಕಾರ್ಡುಗಳನ್ನು ವಾಪಸ್ ಕೊಟ್ಟಿತು. ಸರ್ಕಾರಿ ನೌಕರರು ಪಡೆದಿದ್ದ ಬಿಪಿಎಲ್ ಕಾರ್ಡ್‌ಗಳನ್ನು ಮಾತ್ರ ರದ್ದುಪಡಿಸಲಾಗಿತ್ತು.


ಬಿಪಿಎಲ್ ಕಾರ್ಡ್ ಕಸಿದ 'ಐ.ಟಿ ಪಟ್ಟಿ'

ಮಾನವೀಯ ಸ್ಪಂದನೆ

ಬೆಳಗಾವಿಯ ಕಾರ್ಖಾನೆಯಲ್ಲಿ ಆಗಸ್ಟ್ 7ರಂದು ಸಂಭವಿಸಿದ ಅಗ್ನಿ ದುರಂತದಲ್ಲಿ ಕಾರ್ಮಿಕರೊಬ್ಬರು ಸಜೀವ ದಹನವಾದರು. ಸುಟ್ಟ ಬೂದಿಯನ್ನು ಜಿಲ್ಲಾಡಳಿತವು ಕೈಚೀಲದಲ್ಲಿ ಹಾಕಿ ಅವರ ತಂದೆಯ ಕೈಗೆ ಕೊಟ್ಟಿತು. ಇದರ ಚಿತ್ರವನ್ನು 'ಪ್ರಜಾವಾಣಿ' ಮಾತ್ರ ಮುಖಪುಟದಲ್ಲಿ ಪ್ರಕಟಿಸಿತು. ಈ ಚಿತ್ರ ಹಾಗೂ ವರದಿಗೆ ರಾಜ್ಯದಾದ್ಯಂತ ಮಾನವೀಯ ಸ್ಪಂದನೆ ವ್ಯಕ್ತವಾಯಿತು.


ಅಗ್ನಿ ದುರಂತ: ಕಾರ್ಮಿಕ ಸಾವು
ಕೈಚೀಲದಲ್ಲಿ ಮೃತ ಮಗನ ಅವಶೇಷ



ರಂಜನಿ ಸಿನಿಮಾಗೆ ಇಳಯರಾಜ ಸಂಗೀತ

ಕಿರುತೆರೆ ಹಾಗೂ ಬೆಳ್ಳಿತೆರೆ ಎರಡರಲ್ಲೂ ತಮ್ಮ ಅಭಿನಯದ ಮೂಲಕ ಮನಗೆದ್ದಿರುವ ನಟಿ ರಂಜನಿ ರಾಘವನ್, ಕಥೆಗಾರ್ತಿಯಾಗಿಯೂ ಸಾಹಿತ್ಯ ಲೋಕದಲ್ಲೂ ಛಾಪು ಮೂಡಿಸಿದವರು. ತಮ್ಮ 15 ಕಥೆಗಳ ಗುಚ್ಛ 'ಕತೆ ಡಬ್ಬಿ'ಯ ಮೂಲಕ ಸಾಹಿತ್ಯ ಲೋಕಕ್ಕೆ ಕಾಲಿಟ್ಟ ರಂಜನಿ, ಶೀಘ್ರದಲ್ಲೇ ನಿರ್ದೇಶಕಿಯಾಗಿ ಬೆಳ್ಳಿತೆರೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಅವರ ನಿರ್ದೇಶನದ ಚೊಚ್ಚಲ ಸಿನಿಮಾ ಇಂದು (ಜ.1) ಘೋಷಣೆಯಾಗಲಿದೆ. ಬಹಳ ವರ್ಷಗಳ ಬಳಿಕ ಇಳಯರಾಜ ಅವರು ಕನ್ನಡದ ಸಿನಿಮಾಕ್ಕೆ ಸಂಗೀತ ನೀಡುತ್ತಿದ್ದು, 'ಇದು ನಮ್ಮ ಸಿನಿಮಾದ ವಿಶೇಷ' ಎಂದಿದ್ದಾರೆ ರಂಜನಿ.

ಈಗಾಗಲೇ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿರುವ ರಂಜನಿ, ತಮ್ಮ ಸಿನಿಮಾ ಕುರಿತು ಮಾತನಾಡಿದರು. 'ಸಿನಿಮಾದ ಶೀರ್ಷಿಕೆ ಇನ್ನಷ್ಟೇ ಅಂತಿಮವಾಗಬೇಕು. ನಾನೇ ಈ ಕಥೆಯನ್ನು ಬರೆದು ನಿರ್ದೇಶನ ಮಾಡುತ್ತಿದ್ದೇನೆ. ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟ ದಿನದಿಂದಲೂ ನಿರ್ದೇಶನದ ಕನಸು ಇತ್ತು. 'ಕಥೆ ಡಬ್ಬಿ' ಹಾಗೂ 'ಸ್ವೈಪ್ ರೈಟ್' ಕೃತಿಗಳ ರಚನೆ ಬಳಿಕ ನನ್ನೊಳಗಿನ ಕಥೆಗಾರ್ತಿಯನ್ನು ಕಂಡುಕೊಂಡೆ. ಯೋಗರಾಜ್ ಭಟ್ ಹಾಗೂ ಕನ್ನಡದ ಪ್ರಮುಖ ನಿರ್ದೇಶಕರ ಸಿನಿಮಾಗಳಲ್ಲಿನ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದೆ. ಮೂರ್ನಾಲ್ಕು ವರ್ಷಗಳಿಂದ ಹಲವು ಕಥೆಗಳನ್ನಿಟ್ಟುಕೊಂಡು ಸಿನಿಮಾ ಮಾಡಬೇಕು ಎಂದುಕೊಳ್ಳುತ್ತಿದ್ದೆ. ಈ ಸಿನಿಮಾದ ಕಥೆ ಸೋಷಿಯೋ ಫ್ಯಾಮಿಲಿ ಡ್ರಾಮಾವಾಗಿದ್ದು, ಇಂದಿನ ಸಮಾಜಕ್ಕೆ ಇದು ಪ್ರಸ್ತುತವಾಗಿದೆ' ಎಂದರು.

'ಇಳಯರಾಜ ಅವರು ಕಥೆ ಕೇಳಿ ಇಷ್ಟಪಟ್ಟು, ಸಂಗೀತ ನೀಡಲು ಒಪ್ಪಿಕೊಂಡರು. ನಿರ್ದೇಶಕಿಯಾಗಿ ನನ್ನ ಮೊದಲ ಹೆಜ್ಜೆಗೆ ಅವರು ಜೊತೆಯಾಗಿದ್ದು ನನ್ನ ಪುಣ್ಯ. ಇದು ಕಥೆಗಿರುವ ಶಕ್ತಿಯೂ ಹೌದು. ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಚಿತ್ರವನ್ನು ರಾಮಕೃಷ್ಣ ಸುಬ್ರಮಣಿಯಂ ಹಾಗೂ ಡಾ.ಆನಂದ್ ಕುಮಾರ್ ಎಂ. ನಿರ್ಮಾಣ ಮಾಡುತ್ತಿದ್ದಾರೆ. ಶೂಟಿಂಗ್ ಆರಂಭವಾಗಿದೆ. ಈ ಸಿನಿಮಾದಲ್ಲಿ ನಾನು ಇರಬೇಕೇ ಎನ್ನುವ ಚರ್ಚೆಯೂ ನಡೆಯುತ್ತಿದೆ' ಎಂದರು ರಂಜನಿ.

ಗೊಲ್ಲರಹಟ್ಟಿಗೆ ದಲಿತ ಯುವಕ ಪ್ರವೇಶ: ದೇಗುಲಕ್ಕೆ ಬೀಗ


• ವಿಜಯಕುಮಾರ್ ಎಸ್.ಕೆ.

ದೇವಾಲಯಕ್ಕೆ ದಲಿತರ ಪ್ರವೇಶ

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಗೇರುಮರಡಿ ಗೊಲ್ಲರಹಟ್ಟಿಗೆ ಮಾದಿಗ ಸಮುದಾಯದ ಯುವಕ ಮಾರುತಿ ಪ್ರವೇಶ ಮಾಡಿದ ಕಾರಣಕ್ಕೆ ಹಟ್ಟಿಯಲ್ಲಿರುವ ಎರಡು ದೇಗುಲಗಳಿಗೆ ಬೀಗ ಜಡಿಯಲಾಗಿತ್ತು. 'ಪ್ರಜಾವಾಣಿ'ಯ ಜನವರಿ 5ನೇ ತಾರೀಖಿನ ಸಂಚಿಕೆಯಲ್ಲಿ ಈ ಬಗ್ಗೆ ವಿಶೇಷ ವರದಿ ಪ್ರಕಟವಾದ ನಂತರ, ಜಿಲ್ಲಾಡಳಿತ ಅಲ್ಲಿಗೆ ತೆರಳಿ ದೇವಸ್ಥಾನದ ಬೀಗ ತೆಗೆಯಿಸಿ ದಲಿತರಿಗೆ ಪ್ರವೇಶ ಕೊಡಿಸಿತು.

ವ್ಯಾಪಕ ಚರ್ಚೆಗೆ ಗ್ರಾಸವಾದ ವರದಿ

ರೈತರಿಗೆ ಸಾಲ ನೀಡುವ ಸಹಕಾರಿ ಸಂಸ್ಥೆಗಳಿಗೆ ರಿಯಾಯಿತಿ ಬಡ್ಡಿ ದರದಲ್ಲಿ ನೀಡುವ ಸಾಲದ ಮೊತ್ತವನ್ನು ನಬಾರ್ಡ್ ಕಡಿತಗೊಳಿಸಿದ್ದರಿಂದಾಗಿ ರಾಜ್ಯದಲ್ಲಿ ಕೃಷಿ ಸಾಲ ವಿತರಣೆಗೆ ಹಣದ ಕೊರತೆ ಉಂಟಾಗಿರುವ ಬಗ್ಗೆ ನವೆಂಬರ್ 12ರಂದು ವರದಿ ಪ್ರಕಟವಾಗಿತ್ತು. ರಾಜ್ಯ ಸರ್ಕಾರ ಈ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿ ಕೇಂದ್ರದ ಗಮನ ಸೆಳೆಯಿತು.


ರಿಯಾಯಿತಿ ಬಡ್ಡಿದರದ ಸಾಲದ ಮೊತ್ತ ಇಳಿಕೆ • ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಕಷ್ಟ
ಕೈಕೊಟ್ಟ ನಬಾರ್ಡ್: ಸಾಲಕ್ಕೆ ಕುತ್ತು
ಡಿಸಿಸಿ ಬ್ಯಾಂಕು– ಸಾಲದ ಹೊರೆ
ನಿರ್ಮಲಾ, ಸಿ.ಎಂ.ಗೆ ಬೆಳ್ಳಿ ಪ್ರಕಾಶ್ ಪತ್ರ


ಪೂರಕ ದಾಖಲೆ ಅಪ್‌ಲೋಡ್ ಮಾಡುವಲ್ಲಿ ವಿಳಂಬ – ಹಣ ಬಿಡುಗಡೆ ಮಾಡದ ಕೇಂದ್ರ
ಪಂಚಾಯಿತಿಗೆ ಅನುದಾನ ಸಂಕಟ

ಬಂದ ಅನುದಾನ

ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸದೇ ಇರುವುದರಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆರು ತಿಂಗಳು ಕಳೆದರೂ 15ನೇ ಹಣಕಾಸು ಆಯೋಗದ ಅನುದಾನವೇ ರಾಜ್ಯಕ್ಕೆ ಬಿಡುಗಡೆಯಾಗದೆ, ಸ್ವಂತ ವರಮಾನವಿಲ್ಲದ ಗ್ರಾಮ ಪಂಚಾಯಿತಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಬಗ್ಗೆ ಅಕ್ಟೋಬರ್ 3ರಂದು ವಿಶೇಷ ವರದಿ ಪ್ರಕಟವಾಗಿತ್ತು. ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೇಂದ್ರ ಸರ್ಕಾರಕ್ಕೆ ತರಾತುರಿಯಲ್ಲಿ ದಾಖಲೆ ಸಲ್ಲಿಸಿ ಮೊದಲ ಕಂತಿನ ಅನುದಾನ ಪಡೆಯಿತು.


ಸೀಟು ಬ್ಲಾಕಿಂಗ್ ದಂಧೆ; ಶಂಕೆ
ಎಂಜಿನಿಯರಿಂಗ್: ದಾಖಲಾಗದ 2,348 ಮಂದಿಗೆ ನೋಟಿಸ್
ನಾಲ್ಕು ವರ್ಷಗಳ ನಿರ್ಬಂಧಕ್ಕೆ ಚಿಂತನೆ

ಸೀಟ್ ಬ್ಲಾಕಿಂಗ್ ದಂಧೆ ಬಯಲಿಗೆ..

ರಾಜ್ಯದ ಪ್ರಮುಖ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟ್ ಬ್ಲಾಕಿಂಗ್ ದಂಧೆ ನಡೆದಿರುವ ಶಂಕೆ ವ್ಯಕ್ತವಾಗಿತ್ತು. ತಮಗೆ ನಿಗದಿಯಾದ ಕಾಲೇಜುಗಳಿಗೆ ಪ್ರವೇಶ ಪಡೆಯದ 2348 ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೋಟಿಸ್ ಜಾರಿ ಮಾಡಿತ್ತು. ಈ ಬಗ್ಗೆ ಮೊದಲು ವರದಿ ಪ್ರಕಟಿಸಿದ್ದು ಪ್ರಜಾವಾಣಿ (ಅಕ್ಟೋಬರ್ 24ರಂದು 'ಸೀಟ್ ಬ್ಲಾಕಿಂಗ್ ದಂಧೆ: ಶಂಕೆ'). ವರದಿಯ ಪರಿಣಾಮವಾಗಿ ಸರ್ಕಾರವು ಈ ಬಗ್ಗೆ ತನಿಖೆ ನಡೆಸುತ್ತಿದ್ದು, ಆರು ಮಂದಿ ಆರೋಪಿಗಳನ್ನು ಬಂಧಿಸಿದೆ.

ಅಂತೂ ಬಸ್ ಬಂತು

ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿರುವ ಮಾಜಿ ಮುಖ್ಯಮಂತ್ರಿ ದಿ.ವೀರೇಂದ್ರ ಪಾಟೀಲರ ಸ್ವಗ್ರಾಮ ಹೂಡದಳ್ಳಿಗೆ ಬಸ್ಸಿನ ಸೌಕರ್ಯ ಇಲ್ಲದೆ ವಿದ್ಯಾರ್ಥಿಗಳು ಶಾಲೆಗೆ ಪ್ರತಿ ನಿತ್ಯ ಏಳು ಕಿ.ಮೀ ಕಾಲ್ನಡಿಗೆಯಲ್ಲೇ ತೆರಳಬೇಕಾದ ಬಗ್ಗೆ ಮತ್ತು ನಾಗಾಈದಲಾಯಿ ತಾಂಡದ ಮಕ್ಕಳು ಕೂಡ 4.5 ಕಿ.ಮೀ ನಡೆಯಬೇಕಾದ ಅನಿವಾರ್ಯತೆ ಬಗ್ಗೆ ಜುಲೈ 14ರಂದು 'ವಿದ್ಯಾರ್ಥಿಗಳಿಗೆ ನಿತ್ಯ 7 ಕಿ.ಮೀ ನಡಿಗೆ ಶಿಕ್ಷೆ' ಎಂಬ ತಲೆಬರಹದ ಅಡಿ ವಿಶೇಷ ವರದಿ ಪ್ರಕಟವಾಗಿತ್ತು. ಇದಕ್ಕೆ ಸ್ಪಂದಿಸಿದ್ದ ಜಿಲ್ಲಾಧಿಕಾರಿಯವರು ಬಸ್ ಸೌಲಭ್ಯ ಕಲ್ಪಿಸುವಂತೆ ಕೆಕೆಆರ್‌ಟಿಸಿ ಅಧಿಕಾರಿಗಳಿಗೆ ಸೂಚಿಸಿದ್ದರು. ನಂತರ ಬಸ್ ಬಂದು ಮಕ್ಕಳ ಸಂಕಷ್ಟ ದೂರವಾಯಿತು.


ವಿದ್ಯಾರ್ಥಿಗಳಿಗೆ ನಿತ್ಯ 7 ಕಿ.ಮೀ 'ನಡಿಗೆ ಶಿಕ್ಷೆ'

16 ಜಿಲ್ಲೆಗಳ ರೈತರಿಗೆ ನೆರವಾಗಿದ್ದ ವರದಿ

ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ಆಹಾರ ಧಾನ್ಯ ಖರೀದಿ ಗಡುವು ಮುಗಿಯುತ್ತಾ ಬಂದಿದ್ದರೂ ಖರೀದಿ ಪ್ರಕ್ರಿಯೆ ಆರಂಭಿಸಿರಲೇ ಇಲ್ಲ. ಈ ಸಂಬಂಧ ಪತ್ರಿಕೆಯು 'ಖರೀದಿ ವಿಳಂಬ: ರೈತರು ಕಂಗಾಲು' ಶೀರ್ಷಿಕೆಯಡಿ ಮಾರ್ಚ್ 11ರಂದು ವರದಿ ಪ್ರಕಟಿಸಿತ್ತು. ತಕ್ಷಣ ಎಚ್ಚೆತ್ತಿದ್ದ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧಿಕಾರಿಗಳು 16 ಜಿಲ್ಲೆಗಳಲ್ಲಿ ರಾಗಿ, ಜೋಳ ಮತ್ತು ಭತ್ತ ಖರೀದಿಗೆ ದಿಢೀರ್ ಚಾಲನೆ ನೀಡಿದ್ದರು.

'ರುದ್ರ ಗರುಡ'ನ ಹಾಡು


ರಿಷಿ


'ಆಪರೇಶನ್ ಅಲಮೇಲಮ್ಮ', 'ಕವಲುದಾರಿ' ಮೊದಲಾದ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದ ನಟ ರಿಷಿ ಅಭಿನಯದ 'ರುದ್ರ ಗರುಡ ಪುರಾಣ' ಚಿತ್ರ ಜನವರಿ 24ರಂದು ತೆರೆಗೆ ಬರಲಿದೆ. ಈ ಚಿತ್ರದ 'ಹುಕ್ಕಾ ಹೇಳಿ ಸುಕ್ಕಾ ಹೊಡಿ. ಶೋಕಿ ಮಾಡು ಜೀವನಾನ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಪ್ರಸ್ತುತ ರಾಜಕೀಯ ವ್ಯವಸ್ಥೆಯನ್ನು ವಿಡಂಬನೆ ಮಾಡುವ ಈ ಹಾಡನ್ನು ನವೀನ್ ಸಜ್ಜು ಹಾಡಿದ್ದಾರೆ. ಮಂಜು ಮಾಂಡವ್ಯ ಸಾಹಿತ್ಯವಿದ್ದು, ಕೆಪಿ ಸಂಗೀತ ನೀಡಿದ್ದಾರೆ. ಅಶ್ವಿನಿ ಆರ್ಟ್ಸ್ ಲಾಂಛನದಲ್ಲಿ ಅಶ್ವಿನಿ ಲೋಹಿತ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಈ ಹಿಂದೆ 'ಡಿಯರ್ ವಿಕ್ರಮ್' ಚಿತ್ರವನ್ನು ನಿರ್ದೇಶಿಸಿದ್ದ ಕೆ.ಎಸ್ ನಂದೀಶ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ.

ರಿಷಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಪ್ರಿಯಾಂಕಾ ಕುಮಾರ್ ರಿಷಿಗೆ ಜೋಡಿಯಾಗಿದ್ದಾರೆ. ವಿನೋದ್ ಆಳ್ವ, ಅವಿನಾಶ್, ಶಿವರಾಜ್ ಕೆ.ಆರ್ ಪೇಟೆ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಂದೀಪ್ ಕುಮಾರ್ ಛಾಯಾಚಿತ್ರಗ್ರಹಣ ಹಾಗೂ ಮನು ಶೇಡ್ಗಾರ್ ಸಂಕಲನ ಈ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net




ಸರ್ಕಾರದ ನಿರ್ಧಾರದಿಂದ ಮಕ್ಕಳ ಸಂಖ್ಯೆ ಗಣನೀಯವಾಗಿ ಇಳಿಕೆ
ಪೂರ್ವ ಪ್ರಾಥಮಿಕಕ್ಕೆ ಒತ್ತು; ಅಂಗನವಾಡಿಗೆ ಕುತ್ತು?
ಕಲ್ಯಾಣ ಕರ್ನಾಟಕದಲ್ಲಿ ಸಾವಿರ ಶಾಲೆ
65,911 | 64,816 | 23,263 | 2,178
ವರ್ಷ ಕಳೆದರೂ ಬಾರದ ಗೌರವಧನ

ಅಂಗನವಾಡಿಗಳಿಗೆ 'ಮರುಜೀವ'

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಿದ ನಂತರ ಅಂಗನವಾಡಿಗಳು ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿದ್ದವು. ಈ ಬಗ್ಗೆ ಪತ್ರಿಕೆಯಲ್ಲಿ ಜೂನ್ 16ರಂದು 'ಪೂರ್ವ ಪ್ರಾಥಮಿಕಕ್ಕೆ ಒತ್ತು; ಅಂಗನವಾಡಿಗೆ ಕುತ್ತು?' ಎನ್ನುವ ವರದಿ ಪ್ರಕಟವಾಗಿತ್ತು. ವರದಿಯಿಂದ ಎಚ್ಚೆತ್ತ ಸರ್ಕಾರವು, ಅಂಗನವಾಡಿಗಳಲ್ಲೂ ಎಲ್‌ಕೆಜಿ ಆರಂಭಕ್ಕೆ ಆದೇಶ ನೀಡಿತು.

ಗುಂಡಣ್ಣ



ನಮಗೆ ಬಡತನ ಯಾಕೆ ಬಂತು?

ನುಡಿ ಬೆಳಗು


ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

100

ನಮ್ಮ ಎಲ್ಲ ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಕಲಿಸುವುದು ಶ್ರೀಮಂತರಾಗುವುದು ಹೇಗೆ ಎಂದು. ಆದರೆ 12ನೇ ಶತಮಾನದಲ್ಲಿ ಆಯ್ದಕ್ಕಿ ಲಕ್ಕಮ್ಮ ಎಂಬ ಶರಣೆ ಇದ್ದಳು. ಆಕೆಯ ಅರ್ಥಶಾಸ್ತ್ರ ಬಹಳ ವಿಶಿಷ್ಟವಾದದ್ದು. ಆಕೆ 'ಶ್ರೀಮಂತ ಹ್ಯಾಂಗ್ ಆಗಬೇಕು ಅನ್ನೋದನ್ನು ಆ ಮೇಲೆ ನೋಡುವಿರಂತೆ ಬಡತನ ಯಾಕ ಬಂತು ಅನ್ನೋದು ಮೊದಲು ತಿಳಕೊಳ್ರಿ' ಅಂತಾಳೆ. ಆಕೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಓದಿಲ್ಲ. ಶಾಲೆಯನ್ನೇ ಕಲಿಯದ ಆಯ್ದಕ್ಕಿ ಲಕ್ಕಮ್ಮ 'ಮನುಷ್ಯಗೆ ಯಾಕ ಬಡತನ ಬಂತು ಅಂದರ ಬರೇ ದುಡ್ಡಿದ್ದವರಷ್ಟೇ ಶ್ರೀಮಂತರು ಎಂದು ತಪ್ಪು ತಿಳಕೊಂಡಿದ್ದಕ್ಕೆ ಮತ್ತು ಈ ಜಗತ್ತು ಸಂಪತ್ತು ಎಂದು ಅರಿಯದ್ದಕ್ಕೆ' ಎಂದು ಹೇಳ್ತಾಳೆ. 'ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕರ' ಎಂದು ಹೇಳಿದಳು ಅವಳು. ಮನುಷ್ಯ ತನ್ನ ದೃಷ್ಟಿಕೋನ ಬದಲಿಸಿಕೊಂಡರೆ ಶ್ರೀಮಂತ ಆಗ್ತಾನ. ಶ್ರೀಮಂತ ಆಗೋದಕ್ಕೆ ರೊಕ್ಕ ಬೇಕಿಲ್ಲ. ನಾವು ಅನಕೋಬೇಕು. ಆದರೆ ನಮಗೆ ಅನಕೊಳ್ಳೋದಕ್ಕೆ ಗೊತ್ತಿಲ್ಲ.

ಒಂದು ತಿಪ್ಪೆ ಇತ್ತು. ಅಲ್ಲಿಗೆ ಒಂದು ಕೋಳಿ ಬಂದು ತಿಪ್ಪೆ ಕೆದಕುತ್ತಿತ್ತು. ಹಾಗೆ ಕೆದಕುವಾಗ ಅದರೊಳಗ ಒಂದು ಬಂಗಾರದ ಉಂಗುರ ಬಂತು. ಅದನ್ನು ಬದಿಗೆ ಸರಿಸಿದ ಕೋಳಿ ತನ್ನ ಹುಡುಕಾಟ ಮುಂದುವರಿಸಿತು. ಅದನ್ನು ಒಬ್ಬ ಮನುಷ್ಯ ನೋಡಿ ಕೋಳಿಗೆ 'ಏ ಅದು ಬಂಗಾರದ ಉಂಗುರ' ಎಂದ. ಅದಕ್ಕೆ ಕೋಳಿ 'ಅದು ನಿಮ್ಮಂಥ ಹುಚ್ಚರಿಗೆ ಅಷ್ಟೆ ನಮ್ಮಂಥ ಬುದ್ಧಿವಂತರಿಗಲ್ಲ' ಅಂತು. 'ನೋಡು ಯಾವುದು ಬಂಗಾರ ಅಂತ ನೀನು ಅಂದುಕೊಂಡೆಯಲ್ಲ, ಸ್ವಲ್ಪ ವಿಚಾರ ಮಾಡು... ಯಾವುದು ಅಣ್ಣ ತಮ್ಮಂದಿರನ್ನು ದೂರಮಾಡಿತು, ಯಾವುದು ಸ್ನೇಹಿತರಿಂದ ದೂರ ಮಾಡಿತು, ಯಾವುದು ಕೋರ್ಟ್ ಕಚೇರಿಗೆ ಅಲೆಯುವಂತೆ ಮಾಡಿತು, ಯಾವುದು ಸಾಮ್ರಾಜ್ಯಗಳನ್ನೇ ಉರುಳಿಸುವಂತೆ ಮಾಡಿತು, ಯಾವುದು ಹೆಣಗಳ ರಾಶಿಯನ್ನೇ ಹಾಕುವಂತೆ ಮಾಡಿತೋ ಅದೇ ಬಂಗಾರ ಸಂಪತ್ತೋ ಅಥವಾ ಈ ತಿಪ್ಪೆ ಕೆದಕುವಾಗ ಸಿಕ್ಕಿದ ಜೋಳದ ಕಾಳು ಸಂಪತ್ತೋ ಅಂತ ನೀನೇ ಹೇಳು ಮನುಷ್ಯನೇ' ಎಂದಿತು ಕೋಳಿ. ಯಾವುದು ಸಂಪತ್ತು ಅನ್ನೋದು ಕೋಳಿಗೆ ತಿಳಿದಿತ್ತು. ಆದರೆ ಮುಷ್ಯನಿಗೆ ತಿಳಿಯಲಿಲ್ಲ.

ಉಣ್ಣುವ ಅನ್ನ, ನೀರು, ಮಣ್ಣು ಒಳ್ಳೆಯ ಮಾತು ಸಂಪತ್ತು. ಇವು ಇಲ್ಲದೇ ಇದ್ದರೆ ಮನುಷ್ಯ ಭೂಮಿಯ ಮೇಲೆ ಬದುಕಲು ಆಗುತ್ತಿರಲಿಲ್ಲ. ಮನುಷ್ಯ ಚಿನ್ನ ಇಲ್ಲದಿದ್ದರೆ ಬದುಕುತ್ತಾನ ಆದರೆ ಅನ್ನ ಇಲ್ಲದಿದ್ದರೆ ಬದುಕಲ್ಲ. ಮನುಷ್ಯನ ಪ್ರಾಣ ಹೋಗುವಾಗ ಒಂದು ಗುಟುಕು ನೀರು ಹಾಕು ಅಂತಾರೆಯೇ ವಿನಾ ಬಂಗಾರ ಹಾಕು ಅನ್ನಲ್ಲ. ಮನುಷ್ಯ ಜೀವಮಾನದಲ್ಲಿ ಗಳಿಸಿದ ಸಂಪತ್ತು ಒಂದು ಗುಟುಕು ನೀರಿಗೆ ಸಮ ಅಲ್ಲ. ಮಣ್ಣು ಸಂಪತ್ತು. ನಾವು ತಿನ್ನುವ ಅನ್ನ, ಧರಿಸುವ ಬಂಗಾರ ಎಲ್ಲವೂ ಬಂದಿದ್ದು ಮಣ್ಣಿನಿಂದ. ಇದು ಗೊತ್ತಾಗಬೇಕು ಮನುಷ್ಯನಿಗೆ. ನಿಸರ್ಗ ಕೂಡ ಸಂಪತ್ತು. ಮಾತು ಮನುಷ್ಯನನ್ನು ಬದುಕಿಸುತ್ತದೆ. ಅದಕ್ಕೆ ಅದು ಸಂಪತ್ತು. ಸಂತರು ಅಭಂಗಗಳನ್ನು ಬರೆದರು. ಕಲ್ಯಾಣದ ಶರಣರು ವಚನಗಳನ್ನು ಬರೆದರು. ಅದು ಸಂಪತ್ತು.

ಸಂಪತ್ತಿನ ಬಗ್ಗೆ ನಮ್ಮ ದೃಷ್ಟಿಕೋನ ಬದಲಾಗಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಜನವರಿ 1, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದ್ವಿತೀಯ ಗಂ. 26-25 ನಕ್ಷತ್ರ: ಉತ್ತರಾಷಾಢ ಗಂ. 23-46 ಯೋಗ: ವ್ಯಾಘಾತ ಗಂ. 17-06 ಕರಣ: ಬಾಲವ ಗಂ. 14-56, ಧನು ಮಾಸದ 16 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 2.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-57 ಸೂರ್ಯಾಸ್ತ : 06-11
ಮುಸ್ಲಿಂ ದಿನಾಂಕ : 29 ಜುಮಾದುಸ್ಸಾನಿ
ದಿನ ವಿಶೇಷ : ಹೊಸ ವರ್ಷದ ದಿನ (ಕ್ರಿಶ್ಚಿಯನ್) (ಇಂಗ್ಲೀಷ್) ಅದೃಷ್ಟ ಸಂಖ್ಯೆ : 8, 5

ಮೇಷ: ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಲು ಈ ದಿನ ಸೂಕ್ತವಾಗಿದೆ. ಕುಟುಂಬಸ್ಥರೊಂದಿಗೆ ಸ್ನೇಹದಿಂದ ವರ್ತಿಸಿದರೆ ನಿಮ್ಮ ಕಾರ್ಯಕ್ಕೆ ಬೆಂಬಲ ಸಿಗಲಿದೆ. ಮಕ್ಕಳ ವಿಷಯದಲ್ಲಿ ಸಂಯಮದಿಂದ ವರ್ತಿಸುವಿರಿ.

ವೃಷಭ: ಅನಾವಶ್ಯಕ ಚಿಂತೆ, ದೂರ ಪ್ರವಾಸದಿಂದ ಅನಗತ್ಯ ಖರ್ಚು ಹಾಗೂ ಹಾಳು ವ್ಯಸನಗಳು ನಿಮ್ಮನ್ನು ಆವರಿಸಿಕೊಳ್ಳಬಹುದು, ಎಚ್ಚರದಿಂದಿರಿ. ಲಾಭದಾಯಕವೆನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸುವಿರಿ.

ಮಿಥುನ: ಹಿಂದಿನ ದುರ್ಘಟನೆಗಳನ್ನು ಮರೆತು ಭವಿಷ್ಯದತ್ತ ಗಮನ ಹರಿಸಿ. ಸ್ವತ್ತು ಮಾರಾಟ ವಿಚಾರದಲ್ಲಿ ಸೋದರರ ಅಭಿಪ್ರಾಯವನ್ನು ಪಡೆದು ಮುಂದುವರಿಯುವಿರಿ. ಧಾರ್ಮಿಕ ಕಾರ್ಯಕ್ರಮಗಳಿಗೆ ಭೇಟಿ ನೀಡುವಿರಿ.

ಕರ್ಕಾಟಕ: ಸ್ವ ಉದ್ಯೋಗಿಗಳಿಗೆ ಆದಾಯದಲ್ಲಿ ಉತ್ತಮ ಸುಧಾರಣೆ ಆಗುವುದು. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಲಿದೆ. ಸರ್ಕಾರಿ ಕಾರ್ಯಗಳು, ಕೋರ್ಟ್ ಕಲಹ ಸುಖಾಂತ್ಯ ಪಡೆಯುವುವು.

ಸಿಂಹ: ಪೋಷಕರ ಆರೋಗ್ಯ ಸುಧಾರಿಸುವುದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ. ಮಗಳ ವಿದೇಶ ಪ್ರಯಾಣದ ತಯಾರಿಯಲ್ಲಿ ನೀವು ಭಾಗಿಯಾಗುವಿರಿ. ಪಶು ಸಂಗೋಪನೆಯಿಂದ ಲಾಭ ಇದೆ.

ಕನ್ಯಾ: ನಿಮ್ಮ ವ್ಯವಹಾರದಲ್ಲಿ ಸ್ವಲ್ಪ ನಿಗೂಢತೆ ಕಾಣುವಿರಿ. ಆದರೆ ಎಲ್ಲವೂ ಸದ್ಯದಲ್ಲೇ ಉತ್ತಮ ಫಲಿತಾಂಶವನ್ನು ಪಡೆಯಲಿದೆ. ಇಂದಿನ ನಿಮ್ಮ ಮೃದು ಧೋರಣೆ, ಹಾಸ್ಯ ಮನೋಭಾವ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯವೆನಿಸುವುದು.

ತುಲಾ: ನಿಮ್ಮ ಕೆಲಸ ಕಾರ್ಯಗಳಿಗೆ ಇಂದು ಯಾವುದೇ ಅಡ್ಡಿ ಆತಂಕಗಳು ಬರುವುದಿಲ್ಲ. ಆದರೂ ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪುನಃ ಪರಾಮರ್ಶಿಸಬೇಕಾದ ಸಮಯದಲ್ಲಿ ಮೋಸ ನಡೆದಿರುವುದು ತಿಳಿಯಲಿದೆ.

ವೃಶ್ಚಿಕ: ವಂಶ ಪಾರಂಪರ್ಯವಾಗಿ ಬಂದ ನಿಮ್ಮ ಉದ್ಯೋಗದಲ್ಲಿ ಈಗ ಹೆಚ್ಚಿನ ಏಳಿಗೆ ಕಾಣುವಿರಿ. ಆದಾಯ ಅಭಿವೃದ್ಧಿದಾಯವಾಗಿದ್ದು, ಧನ ಸಂಗ್ರಹಕ್ಕೆ ಸಾಧಕವಾಗಲಿದೆ. ಮಂಗಳ ಕಾರ್ಯಗಳನ್ನು ನಡೆಸಿ ಕೊಡಲು ಒಪ್ಪುವಿರಿ

ಧನು: ಇತರರು ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನಗಳಿಸುವಲ್ಲಿ ಸಫಲರಾಗುವಿರಿ. ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ. ಒಪ್ಪಿಕೊಂಡ ಸಂಬಂಧದಿಂದ ಪ್ರತಿಷ್ಠೆ ಹೆಚ್ಚಲಿದೆ.

ಮಕರ: ಮಗಳ ಮದುವೆಯ ವಿಚಾರದಲ್ಲಿ ನೀವು ಇಡುವ ಹೆಜ್ಜೆ ಪ್ರಮುಖವಾಗಿರುವುದು. ಶತ್ರುಗಳ ಉಪಟಳದಿಂದ ತಪ್ಪಿಸಿಕೊಳ್ಳಲು ಹರಸಾಹಸ ಮಾಡಬೇಕಾಗುತ್ತದೆ. ಆಧ್ಯಾತ್ಮಿಕತೆ ಅನುಸರಿಸುವುದರಿಂದ ಶುಭವಾಗಲಿದೆ.

ಕುಂಭ: ಕಾರ್ಮಿಕರಲ್ಲಿ ಉಂಟಾಗಿದ್ದ ಅನುಮಾನಗಳನ್ನು ನಿವಾರಿಸಿ ಕೆಲಸಗಳು ಸುಗಮವಾಗಿ ಸಾಗಲು ಶ್ರಮ ವಹಿಸ ಬೇಕಾಗುತ್ತದೆ. ಸಾಂಸಾರಿಕವಾಗಿ ನಿಮ್ಮ ನಿರ್ಣಯಗಳಿಗೆ ಎಲ್ಲರ ಬೆಂಬಲ ದೊರೆಯಲಿದೆ.


ಮೀನ: ಆಫೀಸಿನಲ್ಲಿ ಮಹತ್ವದ ಯೋಜನೆಯೊಂದಕ್ಕೆ ನಿಮ್ಮ ಸೃಜನಾತ್ಮಕ ಕಲೆಯನ್ನು ಉಪಯೋಗಿಸಿ ಕೊಳ್ಳುವಿರಿ, ಅದರ ಫಲವಾಗಿ ಅಧಿಕಾರಿಗಳಿಗೆ ಗಮನಾರ್ಹ ವ್ಯಕ್ತಿಯಾಗುವಿರಿ. ಸಹವರ್ತಿಗಳು ನಿಮ್ಮ ಬೆಂಬಲಕ್ಕೆ ಬರುವರು.

ಪದಬಂಧ 5909

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರ್ಯಾದೆಯಿರುವ ಹುಟ್ಟುಗುಣ (4)
3.ಹುಟ್ಟಿದ ನೆಲ (4)
5.ಬಗ್ಗು ಬಡಿಯುವವನು (3)
6.ಹರಿಯುವಂಥ ವಸ್ತು (2)
8.ಜಗಳಕ್ಕೊಂದು ಪರ್ಯಾಯ ಪದ (3)
10.ಒಂದೇ ಗುಂಪಿಗೆ ಸೇರಿದ ಸ್ವರ ಉಲ್ಟಾ ಆಗಿದೆ (3)
11.ಪಂಡಿತನಿಲ್ಲಿ ಉಲ್ಟಾ ನಿಂತಿದ್ದಾನೆ (3)
12.ಇಂಪಾದ ಧ್ವನಿಯು ತಿರುವು ಮುರುವಾಗಿದೆ (3)
14.ವಿರಮಿಸಿದಾಗ ಕಾಣಿಸಿದ ಸೂರ್ಯ (2)
16.ಬಯಲಾಟ ನಾಟಕಗಳಲ್ಲಿ ಬರುವ ಹಾಸ್ಯಗಾರ ಉಲ್ಟಾ ನಿಂತಿದ್ದಾನೆ (3)
17.ತಪ್ಪು ಹೊರಿಸಲ್ಪಟ್ಟವನು (4)
18.ನಿಸ್ಸಾರವಾದುದು ಇದು (4)

ಮೇಲಿಂದ ಕೆಳಕ್ಕೆ
1.ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2.ಕಾವ್ಯದಲ್ಲಿ ಬರುವ ಒಂಬತ್ತು ರಸಗಳು (4)
3.ಮತ್ತು ಬರಿಸುವಂಥದ್ದು ಇದು (3)
7.ಬೇರೆ ಬೇರೆ ಬಣ್ಣಗಳ ಬೆರಕೆ (5)
9.ಮೋಸಗಾರ ಇಲ್ಲಿದ್ದಾನೆ (5)
11.ದರ ಹೇಳುತ್ತಿರುವ ಈತನೂ ವಂಚಕ (4)
13.ತಂಗಿ ವ್ಯಕ್ತ ಪಡಿಸಿದ ಆಶಯ (3)
15.ಲೋಹದ ಹಕ್ಕಿಯಿದು (3)



5908ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಋತ್ವಿಕ್ಕು 4.ಸಂಭವ
6.ಕುಟಿಲೋಪಾಯ 7.ನಭ
9.ನವ 10.ಶಿಷ್ಯ
11.ಸುತ 13.ಮನೆವಾಳ್ತನ
16.ಮೆದುಳು 17.ನೆನಪು

ಮೇಲಿಂದ ಕೆಳಕ್ಕೆ:
1.ಋತುಮಾನ 2.ಕ್ಕುಮ್ಮಕ್ಕು
3.ನಚಲೋ 4.ಸಂಶಯ
5.ವಜ್ರೋತ್ಸವ 8.ಭವಿಷ್ಯ
9.ನನಸು 10.ಶಿರೋನಾಮೆ
12.ತಲೆಗಾಪು 13.ಮರಳು
14.ವಾಚಾಳಿ 15.ನಮೂನೆ

ಸುಡೊಕು 6294

			5		6			7
	9	5		4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6293 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣ; ಸಚಿವರ ನಿವಾಸದ ಗೋಡೆಗೆ ಪೋಸ್ಟರ್ ಅಂಟಿಸಿದ ಕಾರ್ಯಕರ್ತರು

ಪ್ರಿಯಾಂಕ್ ಮನೆ ಮುಂದೆ ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದರ್‌ನ ಗುತ್ತಿಗೆದಾರ ಸಚಿನ್ ಪಾಂಚಾಳ್ ಅವರ ಆತ್ಮಹತ್ಯೆಯ ಹೊಣೆಹೊತ್ತು ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಪ್ರಿಯಾಂಕ್ ಅವರ ನಿವಾಸದ ಗೋಡೆಗೆ ಪೋಸ್ಟರ್ ಅಂಟಿಸಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಅಲ್ಲದೇ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮುಂತಾದವರು ರೇಸ್‌ಕೋರ್ಸ್ ರಸ್ತೆಯಲ್ಲಿರುವ ಸಚಿವರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಅವರನ್ನು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

‘ಕೊಲೆಗಡುಕ, ನೀತಿಗೆಟ್ಟ ಸರ್ಕಾರಕ್ಕೆ ಧಿಕ್ಕಾರ; ಮುಖ್ಯಮಂತ್ರಿಯವರು ಸಚಿವರ ರಾಜೀನಾಮೆ ಪಡೆಯಬೇಕು’ ಎಂದು ಘೋಷಣೆಗಳನ್ನು ಕೂಗಿ ಪೋಸ್ಟರ್ ಅಭಿಯಾನಕ್ಕೆ ಚಾಲನೆ ನೀಡಿದರು.

ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣ್, ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಮೊದಲಾದವರು ಭಾಗವಹಿಸಿದ್ದರು.



ಸಚಿವ ಪ್ರಿಯಾಂಕ್ ಖರ್ಗೆ ಅವರ ಮನೆ ಮುಂದೆ ಬಿಜೆಪಿ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು. ಈ ವೇಳೆ ಪೊಲೀಸರು ಎನ್.ರವಿಕುಮಾರ್ ಅವರನ್ನು ವಶಕ್ಕೆ ಪಡೆದರು. ವಿಧಾನ ಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮೊದಲಾದವರು ಭಾಗವಹಿಸಿದ್ದರು

ರಾಜು ಜತೆ ಬಿಜೆಪಿ ಮುಖಂಡರು: ಚಿತ್ರ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿರುವ ಕಲಬುರಗಿ ಕಾಂಗ್ರೆಸ್ ಮುಖಂಡ ರಾಜು ಕಪನೂರ್ ಅವರ ಜತೆಗೆ ಬಿಜೆಪಿ ಮುಖಂಡರು ಇರುವ ಫೋಟೊಗಳನ್ನು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಂಗಳವಾರ ಬಿಡುಗಡೆ ಮಾಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇರುವ ಫೋಟೊಗಳನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೋಮವಾರ ಬಿಡುಗಡೆ ಮಾಡಿ, ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಒತ್ತಾಯಿಸಿದ್ದರು. ಅದಕ್ಕೆ ಪರ್ಯಾಯವಾಗಿ ಬಿಜೆಪಿ ಶಾಸಕ ಬಸವರಾಜ್ ಮತ್ತಿಮಡು ಮತ್ತಿತರರ ಜತೆ ಆರೋಪಿ ಇರುವ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಪ್ರಿಯಾಂಕ್, ‘ಮತ್ತಿಮಡು ಅವರು ನನ್ನ ಸಹೋದರರೇ’ ಎಂದು ಪ್ರಶ್ನಿಸಿದ್ದಾರೆ.

‘ನಿಮ್ಮದೇ ಪಕ್ಷದ ಅಭ್ಯರ್ಥಿಗಳು ಯಾರು? ನಿಮ್ಮದೇ ಪಕ್ಷದ ಶಾಸಕರು ಯಾರು?, ನಿಮ್ಮದೇ ಪಕ್ಷದ ಮುಖಂಡರು ಯಾರು ಎಂದು ಗುರುತು ಹಿಡಿಯಲು ಸಾಧ್ಯವಾಗುವುದಾದರೆ ಈ ಫೋಟೋಗಳಲ್ಲಿ ಇರುವ ನಿಮ್ಮವರನ್ನು ಗುರುತಿಸಿ. ಹಲವು ಬಿಜೆಪಿ ಮುಖಂಡರು, ಶಾಸಕರು ರಾಜು ಕಪನೂರ್‌ಗೆ ಪರಮಾಪ್ತರಿದ್ದಾರೆ. ಅವರ ರಾಜೀನಾಮೆ ಯಾವಾಗ ಕೇಳುವಿರಿ’ ಎಂದು ಸವಾಲು ಹಾಕಿದ್ದಾರೆ.

‘ನಮ್ಮ ಮನೆಗೆ ಮುತ್ತಿಗೆ ಹಾಕಲು ಬರುವಾಗ ವಿಜಯೇಂದ್ರ ಅವರು ತಮ್ಮ ಪಕ್ಷದ ಯಾವ ಶಾಸಕರು ಕಪನೂರ್ ಜತೆಗೆ ಆಪ್ತರಾಗಿದ್ದಾರೆ ಎನ್ನುವ ಬಗ್ಗೆ ಹೋಂವರ್ಕ್ ಮಾಡಿಕೊಂಡು ಬರುವುದು ಉತ್ತಮ. ಈ ಎಲ್ಲಾ ಫೋಟೊಗಳನ್ನೂ ಹಿಡಿದು ಬನ್ನಿ’ ಎಂದಿದ್ದಾರೆ.


ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿರುವ ಕಲಬುರಗಿ ಕಾಂಗ್ರೆಸ್ ಮುಖಂಡ ರಾಜು ಕಪನೂರ್ ಅವರ ಜತೆಗೆ ಬಿಜೆಪಿ ಶಾಸಕ ಬಸವರಾಜ್ ಮತ್ತಿಮಡು ಇರುವ ಚಿತ್ರ

‘ಪ್ರಶ್ನಿಸುವುದು ನಮ್ಮ ಹಕ್ಕು, ಬಟ್ಟೆ ಹರಿದುಕೊಳ್ಳಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಎಡ–ಬಲ ಇರುವ ವ್ಯಕ್ತಿಗಳದ್ದೇ ಪಾತ್ರ ಇದೆ. ಇದಕ್ಕೆ ನ್ಯಾಯ ಕೇಳುವುದು ತಪ್ಪೇ? ವಿರೋಧಪಕ್ಷಗಳು ಇದನ್ನು ಪ್ರಶ್ನಿಸಬಾರದೆ’ ಎಂದು ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಕೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪ್ರಿಯಾಂಕ್ ಖರ್ಗೆ ಅವರು ಈ ವಿಷಯವನ್ನು ವೈಯಕ್ತಿಕವಾಗಿ ತೆಗೆದುಕೊಂಡಿದ್ದಾರೆ. ಬಿಜೆಪಿಯವರು ಬಟ್ಟೆ ಹರಿದುಕೊಂಡರೂ ರಾಜೀನಾಮೆ ನೀಡುವುದಿಲ್ಲ ಎಂದಿದ್ದಾರೆ. ನಾವು ಬಟ್ಟೆ ಹರಿದು- ಕೊಳ್ಳುವುದಿಲ್ಲ. ನೀವೂ ಹರಿದುಕೊಳ್ಳ- ಬೇಡಿ. ಹೋರಾಟ ಮಾಡುವುದು ನಮ್ಮ ಹಕ್ಕು. ಮಾಡಿಯೇ ತೀರುತ್ತೇವೆ’ ಎಂದು ಹೇಳಿದರು.

‘ಇದು ಕೇವಲ ಆತ್ಮಹತ್ಯೆ ಪ್ರಕರಣ ಮಾತ್ರವಲ್ಲ, ಸುಪಾರಿ ಕೊಟ್ಟಿರುವ ಮತ್ತು ಹನಿಟ್ರ್ಯಾಪ್ ವಿಷಯಗಳೂ ತಳುಕು ಹಾಕಿಕೊಂಡಿವೆ. ಈ ಕುರಿತಾಗಿಯೂ ತನಿಖೆ ಆಗಬೇಕು. ಇದು ಅಂತರ್‌ರಾಜ್ಯ ಪ್ರಕರಣವಾಗಿರುವುದರಿಂದ ಸಿಬಿಐಗೇ ಒಪ್ಪಿಸಬೇಕು’ ಎಂದು ಅವರು ಆಗ್ರಹಿಸಿದರು.

‘ನಿಮ್ಮ ಮೇಲೆ ಆಪಾದನೆ ಬಂದಿರುವುದರಿಂದ ಯಾವುದೇ ರೀತಿಯ ತನಿಖೆಗೆ ಕೊಡಿ, ನಾನದನ್ನು ಎದುರಿಸುವೆ ಎನ್ನುವ ಧೈರ್ಯ ನಿಮಗೆ ಇರಬೇಕು. ಅದನ್ನು ಬಿಟ್ಟು ಹೆದರಿಕೊಂಡು, ಮುತ್ತಿಗೆ ಹಾಕುವವರ ಅಡ್ರೆಸ್ ಕೊಡಿ, ಎಷ್ಟು ಜನ ಬರುತ್ತಾರೋ ಹೇಳಿ ಕಳಿಸಿ, ಕಾಫಿ, ಟೀ ವ್ಯವಸ್ಥೆ ಮಾಡುತ್ತೇನೆ ಎನ್ನುತ್ತಾರೆ. ಇದು ಉದ್ಧಟತನವಲ್ಲದೇ ಬೇರೇನು? ನಿಮ್ಮ ಮನೆಯಲ್ಲಿ ಸಂಬಂಧ ಬೆಳೆಸಲು ಯಾರಾದರೂ ಬರುತ್ತಾರಾ? ನಮ್ಮ ಉದ್ದೇಶ ಹೋರಾಟ, ನಿಮ್ಮ ತಪ್ಪನ್ನು ಪ್ರಶ್ನಿಸುವುದು ನಮ್ಮ ಅಧಿಕಾರ’ ಎಂದು ಹೇಳಿದರು.

‘ಮರಣ ಪತ್ರ ಸಚಿನ್ ಬರೆದಿದ್ದು ದೃಢ’

ಪ್ರಜಾವಾಣಿ ವಾರ್ತೆ


ಸಚಿನ್ ಪಾಂಚಾಳ್

ಬೀದರ್: ಆತ್ಮಹತ್ಯೆ ಮಾಡಿಕೊಂಡಿರುವ ಯುವ ಗುತ್ತಿಗೆದಾರ ಸಚಿನ್ ಮಾನಪ್ಪ ಪಾಂಚಾಳ್ (26) ಅವರ ಮರಣ ಪತ್ರವನ್ನು ಅವರೇ ಬರೆದಿದ್ದು ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ (ಎಫ್‌ಎಸ್‌ಎಲ್) ನಡೆಸಿರುವ ಪರೀಕ್ಷೆಯಿಂದ ಮಂಗಳವಾರ ದೃಢಪಟ್ಟಿದೆ.

ಬೀದರ್ ರೈಲ್ವೆ ಪೊಲೀಸರು ಸಚಿನ್ ಅವರ ಕೈಬರಹದ ಏಳು ಪುಟಗಳ ‘ಡೆತ್‌ನೋಟ್’ ಅನ್ನು ಹೈದರಾಬಾದ್‌ನ ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದರು. ಮರಣ ಪತ್ರ ಪರೀಕ್ಷೆಗೆ ಒಳಪಡಿಸಿದಾಗ ಸಚಿನ್ ಅವರ ಕೈಬರಹದಿಂದಲೇ ಬರೆದಿದ್ದಾರೆ ಎನ್ನುವುದು ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳು ‘ಪ್ರಜಾವಾಣಿ’ಗೆ ಖಚಿತಪಡಿಸಿವೆ.

ಸಚಿನ್ ಬ್ಯಾಂಕ್ ಖಾತೆಗಳ ಬಗ್ಗೆಯೂ ತನಿಖೆ ನಡೆಸಿದ್ದು, ಅವರು ಐದು ಖಾತೆಗಳನ್ನು ಹೊಂದಿದ್ದರು ಎಂಬುದು ಗೊತ್ತಾಗಿದೆ.

ಸಚಿನ್ ಆತ್ಮಹತ್ಯೆ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿರುವುದರಿಂದ ಬೀದರ್ ರೈಲ್ವೆ ಪೊಲೀಸರು ಸಚಿನ್ ಅವರು ಬಳಸುತ್ತಿದ್ದ ಮೊಬೈಲ್ ಸೇರಿದಂತೆ ಘಟನೆಗೆ ಸಂಬಂಧಿಸಿದ ಅಗತ್ಯ ದಾಖಲೆ, ಕಲೆ ಹಾಕಿರುವ ಸಾಕ್ಷ್ಯಗಳನ್ನು ಬೆಂಗಳೂರಿನಲ್ಲಿ ಮಂಗಳವಾರ ಸಿಐಡಿ ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ತಿಳಿದು ಬಂದಿದೆ.

ಸಚಿನ್ ಅವರು ಡಿ. 26ರಂದು ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದರು. ‘ಕಲಬುರಗಿ ಕಾಂಗ್ರೆಸ್ ಮುಖಂಡ ರಾಜು ಕಪನೂರ ಸೇರಿದಂತೆ ಇತರೆ ಎಂಟು ಜನ ಕೊಲೆ ಬೆದರಿಕೆ ಹಾಕಿದ್ದು, ಆತ್ಮಹತ್ಯೆ ಮಾಡಿಕೊಳ್ಳು- ತ್ತಿದ್ದೇನೆ’ ಎಂದು ಸಚಿನ್ ಮರಣ ಪತ್ರದಲ್ಲಿ ಬರೆದುಕೊಂಡಿದ್ದರು.

ಸಚಿನ್ ನಿಗೂಢ ಸಾವಿನ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಬೀದರ್ ಜಿಲ್ಲಾ ಘಟಕದಿಂದ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ಧನ್ನೂರ ಠಾಣೆಯ ಪಿಎಸ್‌ಐ ವರ್ಗಾವಣೆ

ಭಾಲ್ಕಿ ತಾಲ್ಲೂಕಿನ ಧನ್ನೂರ (ಎಚ್) ಪೊಲೀಸ್ ಠಾಣೆಯ ಪಿಎಸ್‌ಐ ವಿಶ್ವರಾಧ್ಯ ಅವರನ್ನು ಮಂಗಳವಾರ (ಡಿ.31) ವರ್ಗಾವಣೆ ಮಾಡಲಾಗಿದೆ.
ಧನ್ನೂರ ಠಾಣೆಯಿಂದ ಕಲಬುರಗಿ ವಲಯ ಐ.ಜಿ ಕಚೇರಿಗೆ ಎತ್ತಂಗಡಿ ಮಾಡಲಾಗಿದ್ದು, ತಕ್ಷಣವೇ ಕಲಬುರಗಿಯಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಸಚಿನ್ ಪಾಂಚಾಳ್ ಅವರ ಸಹೋದರಿಯರು ಧನ್ನೂರ ಠಾಣೆಗೆ ದೂರು ಕೊಡಲು ಹೋದಾಗ ವಿಶ್ವರಾಧ್ಯ ಅವರು ಅದನ್ನು ಸ್ವೀಕರಿಸಿ ಎಫ್‌ಐಆರ್ ದಾಖಲಿಸಿರಲಿಲ್ಲ.
‘ಘಟನೆ ಸಂಬಂಧ ಈಗಾಗಲೇ ಬೀದರ್‌ನ ಗಾಂಧಿಗಂಜ್ ಪೊಲೀಸ್ ಠಾಣೆಯ ಇಬ್ಬರು ಹೆಡ್ ಕಾನ್‌ಸ್ಟೆಬಲ್‌ಗಳನ್ನು ಅಮಾನತುಗೊಳಿಸಲಾಗಿದೆ.

ಸುದ್ದಿ 2 ನಿಮಿಷ

ಕೊಪ್ಪಳ: ಜಿಲ್ಲಾಸ್ಪತ್ರೆಯಲ್ಲಿ ಮತ್ತೊಬ್ಬ ಬಾಣಂತಿ ಸಾವು

ಕೊಪ್ಪಳ: ಇಲ್ಲಿನ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದ ಕುಕನೂರು ತಾಲ್ಲೂಕಿನ ಆಡೂರು ಗ್ರಾಮದ ರೇಣುಕಾ ಹಿರೇಮನಿ (21) ಮಂಗಳವಾರ ಮೃತಪಟ್ಟಿದ್ದಾರೆ. ಒಂದೇ ವಾರದಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ಬಾಣಂತಿ ಮೃತಪಟ್ಟ ಎರಡನೇ ಪ್ರಕರಣ ಇದಾಗಿದೆ.

ಹೊಟ್ಟೆಯಲ್ಲಿದ್ದ ಮಗು ಹೊರಳದ ಕಾರಣ ಆತಂಕಗೊಂಡ ರೇಣುಕಾ ಮೊದಲು ಕುಷ್ಟಗಿ ತಾಲ್ಲೂಕು ಆಸ್ಪತ್ರೆಗೆ ತೆರಳಿದ್ದರು. ಅಲ್ಲಿಂದ ಜಿಲ್ಲಾ ಆಸ್ಪತ್ರೆಗೆ ಸೇರಿದ್ದರು. ಅಲ್ಲಿಯೇ ಮೃತಪಟ್ಟಿದ್ದಾರೆ.

‘ಮಗು ಹೊಟ್ಟೆಯಲ್ಲಿಯೇ ಮೃತಪಟ್ಟಿತ್ತು. ಸಿಸೇರಿಯನ್ ಮಾಡಿ ಕೂಸನ್ನು ವೈದ್ಯರು ಹೊರ ತೆಗೆದಿದ್ದಾರೆ. ಈ ವೇಳೆ ಮಹಿಳೆಗೆ ಹೃದಯ ಸ್ತಂಭನವಾಗಿದೆ. ಅದಕ್ಕೆ ಚಿಕಿತ್ಸೆ ನೀಡಿ ವೆಂಟಿಲೇಟರ್ ನಲ್ಲಿಟ್ಟಿದ್ದರು. ಕೆಲವು ಗಂಟೆಗಳ ಬಳಿಕ ಎರಡನೇ ಬಾರಿ ಹೃದಯ ಸ್ತಂಭನ ಸಂಭವಿಸಿ ಮೃತಪಟ್ಟಿದ್ದಾರೆ’ ಎಂದು ಡಿಎಚ್‌ಒ ಡಾ. ಲಿಂಗರಾಜು ಟಿ. ಪ್ರತಿಕ್ರಿಯಿಸಿದ್ದಾರೆ.

ನಾಲ್ಕು ದಿನಗಳ ಹಿಂದೆ ಸಂಡೂರಿನ ಐಶ್ವರ್ಯಾ ಎಂಬುವವರು ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಹೆರಿಗೆಯಾದ ಬಳಿಕ ಮೃತಪಟ್ಟಿದ್ದರು.

ಚಾಮರಾಜನಗರ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ



ಚಾಮರಾಜನಗರ: ‘ಅಂಬೇಡ್ಕರ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಬೇಕು’ ಎಂದು ಒತ್ತಾಯಿಸಿ ದಲಿತ ಮಹಾಸಭಾ ನೇತೃತ್ವದಲ್ಲಿ ಹಲವು ಸಂಘಟನೆಗಳು ಮಂಗಳವಾರ ಕರೆ ನೀಡಿದ್ದ ಚಾಮರಾಜನಗರ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ನಗರದಲ್ಲಿ ವಾಣಿಜ್ಯ ಚಟುವಟಿಕೆಗಳು ಸ್ತಬ್ಧಗೊಂಡಿದ್ದವು. ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ ಸೇರಿದಂತೆ ಮಾರುಕಟ್ಟೆ ಪ್ರದೇಶಗಳು ಬಂದ್ ಆಗಿದ್ದವು. ಹೋಟೆಲ್, ರೆಸ್ಟೋರೆಂಟ್‌ಗಳು ಬಾಗಿಲು ಮುಚ್ಚಿದ್ದವು. ನಗರ ವ್ಯಾಪ್ತಿಗೆ ಸೀಮಿತವಾಗಿ ಕೆಲವು ಶಾಲಾ ಕಾಲೇಜುಗಳಿಗೆ ರಜೆ ನೀಡಲಾಗಿತ್ತು. ಆದರೆ, ಸಾರಿಗೆ ಸಂಚಾರ ಎಂದಿನಂತಿತ್ತು. ಕೆಎಸ್‌ಆರ್‌ಟಿಸಿ ಬಸ್‌ಗಳು, ಆಟೊಗಳು ರಸ್ತೆಗೆ ಇಳಿದಿದ್ದವು. ದಲಿತ ಹಾಗೂ ಪ್ರಗತಿಪರರ ಸಂಘಟನೆಗಳು ನಗರದ ಭುವನೇಶ್ವರಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದವು.

ಶಹಾಪುರ ಬಂದ್–ನಗರ ಸ್ತಬ್ಧ: ಅಮಿತ್ ಶಾ ಅವರ ಹೇಳಿಕೆ ಖಂಡಿಸಿ ದಲಿತಪರ, ಪ್ರಗತಿಪರ, ಅಲ್ಪಸಂಖ್ಯಾತರು, ವಕೀಲರು ಹಾಗೂ ಹಿಂದುಳಿದ ಸಂಘಟನೆಗಳ ಆಶ್ರಯದಲ್ಲಿ ನೀಡಿದ ಬಂದ್ ಕರೆಯಿಂದ ಮಂಗಳವಾರ ಯಾದಗಿರಿ ಜಿಲ್ಲೆಯ ಶಹಾಪುರ ನಗರ ಸಂಪೂರ್ಣ ಸ್ತಬ್ಧವಾಗಿತ್ತು. ನಗರದ ವ್ಯಾಪಾರಸ್ಥರು ಬಂದ್ ಬೆಂಬಲಿಸಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿದ್ದರು.

ಶಾಲೆಗೆ ₹6 ಲಕ್ಷದ ಜಮೀನು ಖರೀದಿಸಿ ಕೊಟ್ಟ ಶಾಸಕ

ಪ್ರಜಾವಾಣಿ ವಾರ್ತೆ

ಕೂಡ್ಲಿಗಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಗುಣಸಾಗರ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೆಚ್ಚುವರಿ ಕೊಠಡಿ ನಿರ್ಮಿಸಲು ಅಗತ್ಯವಿದ್ದ 75 ಸೆಂಟ್ಸ್ ಜಾಗವನ್ನು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ₹6 ಲಕ್ಷಕ್ಕೆ ಖರೀದಿಸಿ, ಶಾಲೆಗೆ ನೀಡಿದರು.


ಡಾ.ಎನ್‌.ಟಿ. ಶ್ರೀನಿವಾಸ್

ಗುಣಸಾಗರ ಗ್ರಾಮದ ಮಧ್ಯಭಾಗದಲ್ಲಿ ಶಾಲೆ ಇದ್ದು, ಹೆಚ್ಚಿನ ಕೊಠಡಿ ನಿರ್ಮಾಣಕ್ಕೆ ಅಲ್ಲಿ ಜಾಗ ಇರಲಿಲ್ಲ. ಗ್ರಾಮದ ಹತ್ತಿರ ಯಾವುದೇ ಸರ್ಕಾರಿ ಜಮೀನು ಸಹ ಇರಲಿಲ್ಲ. ಅಲ್ಲಿ ರವಿ ಎಂಬುವರಿಗೆ ಸೇರಿದ 75 ಸೆಂಟ್ಸ್ ಜಾಗ ಇತ್ತು. ಗ್ರಾಮದ ಮುಖಂಡ ಕೋಟೇಶ್ ಅವರ ಸಹಕಾರದಿಂದ ಶಾಸಕರು ₹6 ಲಕ್ಷವನ್ನು ರವಿ ಅವರಿಗೆ ನೀಡಿ ಜಾಗ ಖರೀದಿಸಿದರು. ರವಿ ಅವರಿಂದಲೇ ಶಾಲೆಗೆ ದಾನಪತ್ರದ ಮೂಲಕ ಜಾಗ ನೋಂದಣಿ ಮಾಡಿಸಿದರು.

2023-24ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ಮ್ಯಾಕ್ರೊ ಯೋಜನೆಯಡಿ ₹44.11 ಲಕ್ಷ ಈ ಶಾಲೆಗೆ ಮಂಜೂರಾಗಿದೆ. 2 ಕೊಠಡಿಗಳು, ಅಡುಗೆ ಕೋಣೆ, ಶೌಚಾಲಯ, ನೀರು ಸಂಗ್ರಹಣಾ ಸೌಲಭ್ಯಗಳನ್ನು ಕಲ್ಪಿಸುವ ಕಾಮಗಾರಿಗೆ ಶಾಸಕರು ಮಂಗಳವಾರ ಚಾಲನೆ ನೀಡಿದರು.

₹1,120 ಕೋಟಿ ತೆರಿಗೆ ವಂಚನೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ತೆರಿಗೆಗಳ ಇಲಾಖೆ, ಅಬಕಾರಿ ಇಲಾಖೆ, ನೋಂದಣಿ ಮತ್ತು ಮುದ್ರಾಂಕ ಇಲಾಖೆಗಳು ತೆರಿಗೆ ವಂಚನೆಗಳ ಪ್ರಕರಣಗಳನ್ನು ಪತ್ತೆ ಮಾಡಿದ್ದು, ಒಟ್ಟು 15,479 ಪ್ರಕರಣಗಳನ್ನು ದಾಖಲಿಸಲಾಗಿದೆ. ಸುಮಾರು ₹1,120.34 ಕೋಟಿಗೂ ಅಧಿಕ ತೆರಿಗೆ ವಂಚಿಸಿರುವುದು ದೃಢಪಟ್ಟಿದೆ.

ವಾಣಿಜ್ಯ ತೆರಿಗೆ ಇಲಾಖೆಯೊಂದರಲ್ಲೇ ಅತ್ಯಧಿಕ ಪ್ರಕರಣಗಳು (15,465) ಪತ್ತೆಯಾಗಿವೆ. ಇದರಲ್ಲಿ 6,083 ಪ್ರಕರಣಗಳನ್ನು ವಿಚಾರಣೆ ಮತ್ತು ತನಿಖೆಗೆ ಒಳಪಡಿಸಿ ₹1,120.34 ಕೋಟಿಯಷ್ಟು ನಷ್ಟವಾಗಿದೆ ಎಂದು ನಿರ್ಧರಿಸಿ, ದಂಡ ವಸೂಲಿಗೆ ತೀರ್ಮಾನಿಸಲಾಗಿದೆ. ಇನ್ನೂ 9,382 ಪ್ರಕರಣಗಳನ್ನು ಇತ್ಯರ್ಥಗೊಳಿಸಿಲ್ಲ.

ಮಹಾಲೇಖಪಾಲರ (ಸಿಎಜಿ) ‘ರಾಜಸ್ವ ಲೆಕ್ಕಪರಿಶೋಧನ ಭಾಗ 2’ ರಲ್ಲಿ ಈ ಮಾಹಿತಿ ಬಹಿರಂಗವಾಗಿದೆ. 2021 ರಿಂದ 2023 ರವರೆಗಿನ ಅವಧಿಯಲ್ಲಿ ಈ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ.

ಈ ಅವಧಿಯಲ್ಲಿ ಅಬಕಾರಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಗಳಿಗಿಂತ ವಾಣಿಜ್ಯ ತೆರಿಗೆ ಇಲಾಖೆ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಕರಣಗಳು ಬಯಲಿಗೆ ಬಂದಿವೆ. ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ವಾಣಿಜ್ಯ ಇಲಾಖೆ ಇತರ ಎರಡು ಇಲಾಖೆಗಳಿಗಿಂತ ಹೆಚ್ಚು ಮುತುವರ್ಜಿ ವಹಿಸಿದ್ದರೂ ಆ ವರ್ಷದ ಅಂತ್ಯದಲ್ಲಿ ಗಮನಾರ್ಹ ಸಂಖ್ಯೆಯ ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಉಳಿದಿದ್ದವು. ಹೀಗಾಗಿ ಇತ್ಯರ್ಥಗೊಳ್ಳದ 9,382 ಪ್ರಕರಣಗಳ ನಷ್ಟದ ಮೊತ್ತವನ್ನು ನಿರ್ಧರಿಸಲು ಇನ್ನೂ ಸಾಧ್ಯವಾಗಿಲ್ಲ ಎಂದು ಸಿಎಜಿ ವರದಿ ಅಭಿಪ್ರಾಯಪಟ್ಟಿದೆ.

ಅಬಕಾರಿ ಇಲಾಖೆಯಲ್ಲಿ ತೆರಿಗೆ ವಂಚನೆಯ ಮೂರು ಪ್ರಕರಣಗಳು ದಾಖಲಾಗಿದ್ದರೂ ಒಂದನ್ನೂ ಇತ್ಯರ್ಥಗೊಳಿಸಿಲ್ಲ. ಇದರಿಂದ ಆಗಿರುವ ನಷ್ಟದ ಪ್ರಮಾಣವನ್ನು ಅಂದಾಜು ಮಾಡಲು ಸಾಧ್ಯವಾಗಿಲ್ಲ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ತೆರಿಗೆ ವಂಚನೆಯ ಒಟ್ಟು 11 ಪ್ರಕರಣಗಳು ಪತ್ತೆಯಾಗಿದ್ದು, ಕೇವಲ 1 ಪ್ರಕರಣ ಮಾತ್ರ ಇತ್ಯರ್ಥಗೊಳಿಸಿದ್ದು, ನಷ್ಟದ ಮೊತ್ತ ₹5 ಲಕ್ಷ ಎಂದು ಅಂದಾಜಿಸಲಾಗಿದೆ. 10 ಪ್ರಕರಣಗಳ ತೆರಿಗೆ ವಂಚನೆ ಪ್ರಕರಣ ಇತ್ಯರ್ಥಗೊಳಿಸದ ಕಾರಣ ನಷ್ಟದ ಪ್ರಮಾಣ ಅಂದಾಜು ಮಾಡಿಲ್ಲ.

ಮರು ಪಾವತಿಯಲ್ಲಿ ಅಲ್ಪ ಪ್ರಗತಿ: ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಮರುಪಾವತಿಗೆ ಕೋರಿಕೆ ಸಲ್ಲಿಸಿ ಒಟ್ಟು 9,254 ಅರ್ಜಿಗಳು ಬಂದಿದ್ದವು, ಅದರಲ್ಲಿ 8,094 ಪ್ರಕರಣಗಳಲ್ಲಿ ಮರುಪಾವತಿ ಮಾಡಿದ್ದು, ₹5,496.91 ಕೋಟಿ ಪಾವತಿಸಲಾಗಿದೆ. ಆದರೂ ವರ್ಷದ ಅಂತ್ಯದಲ್ಲಿ 2,239 ಪ್ರಕರಣಗಳು ಬಾಕಿ ಉಳಿದಿದ್ದು, ₹1,142.88 ಕೋಟಿ ಪಾವತಿ ಮಾಡಬೇಕಾಗಿದೆ. (2020–21 ರ ಸಾಲಿನ ಬಾಕಿ 1,079 ಅರ್ಜಿಗಳು ಸೇರಿ ಒಟ್ಟು 10,303 ಅರ್ಜಿಗಳು ಇದ್ದವು).

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಮರುಪಾವತಿಗಾಗಿ 6,863 ಕೋರಿಕೆ ಅರ್ಜಿಗಳು ಬಂದಿದ್ದು, 4,844 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ₹79.99 ಕೋಟಿ ಮರುಪಾವತಿ ಮಾಡಿದ್ದು, ಇನ್ನೂ 5,851 ಕೋರಿಕೆಗಳು ಇತ್ಯರ್ಥ ಆಗಬೇಕಿದ್ದು, ಇದರ ಮೊತ್ತ ₹38.68 ಕೋಟಿ.(2020–21 ರ ಸಾಲಿನ 3,832 ಅರ್ಜಿಗಳು ಸೇರಿ ಒಟ್ಟು 10,695 ಅರ್ಜಿಗಳು ಇದ್ದವು). ಆದರೆ, ಅಬಕಾರಿ ಇಲಾಖೆ ಮರುಪಾವತಿ ಕುರಿತು ಮಾಹಿತಿಯನ್ನು ಒದಗಿಸಿಲ್ಲ ಎಂದು ಸಿಎಜಿ ವರದಿ ತಿಳಿಸಿದೆ.

ತೆರಿಗೆ ವಂಚನೆ ಪ್ರಕರಣಗಳು

ಇಲಾಖೆ	2021ರಲ್ಲಿ ಬಾಕಿ ಪ್ರಕರಣ	2021–22 ರಲ್ಲಿ ಪತ್ತೆಯಾದ ಪ್ರಕರಣ	ಒಟ್ಟು	ಇತ್ಯರ್ಥಗೊಂಡ ಪ್ರಕರಣ	ಮೊತ್ತ (₹ಕೋಟಿ)	ಇತ್ಯರ್ಥಗೊಳ್ಳಬೇಕಾದ ಸಂಖ್ಯೆ
ಅಬಕಾರಿ	03	00	03	00	00	03
ವಾಣಿಜ್ಯ ತೆರಿಗೆ	6,523	8942	15,465	6083	1,120	9,382
ನೋಂದಣಿ ಮತ್ತು ಮುದ್ರಾಂಕ	9	2	11	1	0.05	10


ಮೋಜು ಮಸ್ತಿ...
ಮಂಗಳೂರಿನ ಪಣಂಬೂರಿನ ಕಡಲ ತೀರದಲ್ಲಿ 2024ರ ಕೊನೆಯ ದಿನವಾದ ಮಂಗಳವಾರ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಮೋಜುಮಸ್ತಿಯಲ್ಲಿ ತೊಡಗಿದ್ದರು
ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

ಹುಬ್ಬಳ್ಳಿ: ಗರ್ಭಿಣಿ ಪತ್ನಿ ಸಾವು, ಆತ್ಮಹತ್ಯೆಗೆ ಪತಿ ಯತ್ನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಗರ್ಭಿಣಿ ಪತ್ನಿ ಸಾವಿನಿಂದ ನೊಂದು ಪತಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಕೆಎಂಸಿ–ಆರ್‌ಐ ಆಸ್ಪತ್ರೆ ಆವರಣದಲ್ಲಿ ಮಂಗಳವಾರ ನಡೆದಿದೆ.

ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಮೇಲಮಟ್ಟಿಯ ಮಲ್ಲೇಶ ಗಡ್ಡಿಹೊಳಿ ಆತ್ಮಹತ್ಯೆಗೆ ಯತ್ನಿಸಿದವರು. ತಕ್ಷಣ ಅವರನ್ನು ತುರ್ತು ಚಿಕಿತ್ಸಾ ಘಟಕಕ್ಕೆ ದಾಖಲಿಸಿದ್ದು, ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

‘ಗರ್ಭಿಣಿ ರಾಧಿಕಾ ಅವರು ಹೆರಿಗೆ ನೋವೆಂದು ಬೆಳಗಾವಿಯ ಖಾಸಗಿ ಆಸ್ಪತ್ರೆಗೆ ಹೋಗಿದ್ದರು. ವೈದ್ಯರು ಅಲ್ಲಿ ಅವರನ್ನು ದಾಖಲಿಸಿಕೊಳ್ಳದ ಕಾರಣ, ಬೆಳಗಾವಿ ಜಿಲ್ಲಾಸ್ಪತ್ರೆಗೆ ಹೋಗಿದ್ದರು. ಅಲ್ಲಿ ಹೃದ್ರೋಗ ತಜ್ಞರು ಮತ್ತು ನರರೋಗ ತಜ್ಞರು ಇಲ್ಲದ ಕಾರಣ ಕೆಎಂಸಿ–ಆರ್‌ಐಗೆ ಕಳುಹಿಸಿದ್ದರು. ಸೋಮವಾರ ಮಧ್ಯಾಹ್ನ ಇಲ್ಲಿ ದಾಖಲಾಗಿದ್ದರು. ಅವರ ನಾಡಿಬಡಿತ ನಿಂತು ಪ್ರಜ್ಞಾಹೀನರಾಗಿದ್ದರು. ಮಂಗಳವಾರ ಬೆಳಿಗ್ಗೆ 11ಕ್ಕೆ ಮೃತಪಟ್ಟಿದ್ದಾರೆ. ಅವರ ಪತಿ ಮಲ್ಲೇಶ ಅವರು ವಿಷ ಸೇವನೆ ಮಾಡಿದ್ದರು. ಅವರ ಸ್ಥಿತಿ ಸಹ ಗಂಭೀರವಾಗಿದೆ’ ಎಂದು ಕೆಎಂಸಿ–ಆರ್‌ಐ ನಿರ್ದೇಶಕ ಡಾ. ಎಸ್.ಎಫ್. ಕಮ್ಮಾರ ತಿಳಿಸಿದರು.

ಮೂವರು ಮಕ್ಕಳ ಕೊಂದ ತಂದೆಗೆ ಗಲ್ಲುಶಿಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು: ತನ್ನ ಮೂವರು ಮಕ್ಕಳನ್ನು ಬಾವಿಗೆ ತಳ್ಳಿ ಕೊಲೆ ಮಾಡಿದ ಹಾಗೂ ಪತ್ನಿಯನ್ನೂ ಕೊಲ್ಲಲು ಯತ್ನಿಸಿದ್ದ ತಾಲ್ಲೂಕಿನ ತಾಳಿಪಾಡಿ ಗ್ರಾಮದ ಪದ್ಮನೂರು ಶೆಟ್ಟಿಕಾಡು ಮನೆಯ ಹಿತೇಶ್ ಶೆಟ್ಟಿಗಾರ್‌ಗೆ ಇಲ್ಲಿನ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಸಂಧ್ಯಾ ಅವರು ಮರಣ ದಂಡನೆ ವಿಧಿಸಿದ್ದಾರೆ.

ಹಿತೇಶ್ ತನ್ನ ಪುತ್ರಿ ರಶ್ಮಿತಾ (14), ಪುತ್ರರಾದ ಉದಯ ಕುಮಾರ್ (11), ದಕ್ಷಿತ್ ಅಲಿಯಾಸ್ ದಕ್ಷ್ ಕುಮಾರ್ (4) ಅವರನ್ನು 2022ರ ಜೂನ್ 23ರಂದು ಸಂಜೆ ಮನೆ ಸಮೀಪದ ಬಾವಿಗೆ ತಳ್ಳಿ ಕೊಲೆ ಮಾಡಿದ್ದ.


ಹಿತೇಶ್

ಎಳನೀರು ವ್ಯಾಪಾರ ಮಾಡಿಕೊಂಡಿದ್ದ ಆತ, ಸರಿಯಾಗಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಹೆಂಡತಿ ಮಕ್ಕಳನ್ನು ಸಾಕಲು ಕಷ್ಟವಾ- ಗುತ್ತದೆ, ಅವರೇ ಇಲ್ಲದಿದ್ದರೆ ತಾನು ಬೇಕಾದ ಹಾಗೆ ಬದುಕಬಹುದು ಎಂದು ಯೋಚಿಸಿ ಅವರನ್ನು ಕೊಲ್ಲಲು ನಿರ್ಧರಿಸಿದ್ದ. ಆತನ ಪತ್ನಿ ಲಕ್ಷ್ಮೀ ಊರಿನ ಕ್ಯಾಂಟೀನ್ ಒಂದರಲ್ಲಿ ಕೆಲಸ ಮಾಡುತ್ತಿದ್ದು, ಬಳಿಕ ಮನೆಯಲ್ಲಿ ಬೀಡಿ ಕಟ್ಟಿ ಸಂಸಾರ ನಡೆಸುತ್ತಿದ್ದರು. ಪತ್ನಿ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಮಕ್ಕಳನ್ನು ಬಾವಿಗೆ ತಳ್ಳಿದ್ದ. ನೀರಿಗೆ ಬಿದ್ದ ಮಕ್ಕಳು ಬಾವಿಯಲ್ಲಿ ನೇತಾಡುತ್ತಿದ್ದ ಹಗ್ಗವೊಂದನ್ನು ಹಿಡಿದು ಜೀವ ಉಳಿಸಿಕೊಂಡಿದ್ದರು. ಅದನ್ನು ನೋಡಿದ ಹಿತೇಶ್ ಆ ಹಗ್ಗವನ್ನೂ ಕತ್ತರಿಸಿ ಅವರು ನೀರಿನಲ್ಲಿ ಮುಳುಗುವಂತೆ ಮಾಡಿದ್ದ.

ಲಕ್ಷ್ಮೀ ಮನೆಗೆ ಮರಳಿದಾಗ ಮಕ್ಕಳು ಇರಲಿಲ್ಲ. ಮಕ್ಕಳನ್ನು ಹುಡುಕುವ ನೆಪದಲ್ಲಿ ಆಕೆಯನ್ನೂ ಹಿತೇಶ್ ಬಾವಿಗೆ ತಳ್ಳಿದ್ದ. ಬಾವಿಗೆ ಬೀಳುವಾಗ ಗಂಡನನ್ನು ಆಕೆ ಗಟ್ಟಿಯಾಗಿ ಹಿಡಿದುಕೊಂಡಿದ್ದರಿಂದ ಇಬ್ಬರೂ ಬಾವಿಗೆ ಬಿದ್ದಿದ್ದರು. ಸದ್ದು ಕೇಳಿ ಸ್ಥಳೀಯರಾದ ಮಹಮ್ಮದ್ ನಸ್ರತ್ತುಲ್ಲ, ರಾಘವ ಶೆಟ್ಟಿಗಾರ್ ಅವರು ಸ್ಥಳಕ್ಕೆ ಧಾವಿಸಿ ಇಬ್ಬರನ್ನೂ ರಕ್ಷಿಸಿದ್ದರು.

ಸರ್ಕಾರಿ ವಕೀಲ ಮೋಹನ್‌ಕುಮಾರ ಬಿ. ವಾದ ಮಂಡಿಸಿದ್ದರು. ಮೂಲ್ಕಿ ಠಾಣೆಯ ಇನ್‌ಸ್ಪೆಕ್ಟರ್ ಕುಸುಮಾಧರ್ ಕೆ. ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ದಲಿತ ಸಂಘರ್ಷ ಸಮಿತಿ ಸಂಚಾಲಕ ಲಕ್ಷ್ಮೀನಾರಾಯಣ ನಾಗವಾರ ನಿಧನ

ಬೆಂಗಳೂರು: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ, ಪ್ರಗತಿಪರ ಹೋರಾಟವನ್ನೇ ಉಸಿರಾಗಿಸಿ- ಕೊಂಡಿದ್ದ ಲಕ್ಷ್ಮೀನಾರಾಯಣ ನಾಗವಾರ (58) ಅವರು ಮಂಗಳವಾರ ನಿಧನರಾಗಿದ್ದಾರೆ.


ಲಕ್ಷ್ಮೀನಾರಾಯಣ ನಾಗವಾರ

ಕನಕ ನಗರದಲ್ಲಿ ವಾಸವಾಗಿದ್ದ ಅವರು, ಕೆಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮಂಗಳವಾರ ಬೆಳಿಗ್ಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಹೆಬ್ಬಾಳದ ಬ್ಯಾಪ್ಟಿಸ್ಟ್ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿತ್ತು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಇಲ್ಲಿನ ನಾಗವಾರದ ಅಂಬೇಡ್ಕರ್ ಮೈದಾನದಲ್ಲಿ ಬುಧವಾರ ಬೆಳಿಗ್ಗೆ 9 ಗಂಟೆಯಿಂದ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಅವರ ಅಂತ್ಯಸಂಸ್ಕಾರ ಮಧ್ಯಾಹ್ನ 3 ಗಂಟೆಗೆ ನಾಗವಾರದಲ್ಲಿಯೇ ನಡೆಯಲಿದೆ.

ಬೆಂಗಳೂರಿನ ನಾಗವಾರದ ಲಕ್ಷ್ಮೀನಾರಾಯಣ ಅವರು, ವಿದ್ಯಾರ್ಥಿ ದೆಸೆಯಿಂದಲೇ ದಲಿತ ಚಳವಳಿಯಲ್ಲಿ ಗುರುತಿಸಿಕೊಂಡಿದ್ದರು. ದಲಿತ ಚಳವಳಿ ಸಂಸ್ಥಾಪಕರಾದ ಪ್ರೊ.ಬಿ.ಕೃಷ್ಣಪ್ಪ, ಸಿದ್ದಲಿಂಗಯ್ಯ, ದೇವನೂರ ಮಹಾದೇವ ಅವರ ಮಾರ್ಗದರ್ಶನದಲ್ಲಿ ರಾಜ್ಯದ ವಿವಿಧೆಡೆ ಹಲವು ಹೋರಾಟಗಳನ್ನು ರೂಪಿಸಿ, ಯಶಸ್ವಿಯಾಗಿದ್ದರು. ಒಡೆದು ಹೋಗಿದ್ದ ದಲಿತ ಸಂಘರ್ಷ ಸಮಿತಿಯನ್ನು ಒಗ್ಗೂಡಿಸಲು ಪ್ರಯತ್ನಗಳನ್ನು ಮಾಡಿದ್ದರು. ಸಮುದಾಯವನ್ನು ಜಾಗೃತಗೊಳಿಸಿ, ಮತ್ತೆ ಸಂಘಟನೆ ಬಲಪಡಿಸಲು ರಾಜ್ಯದ ವಿವಿಧೆಡೆ ಅಧ್ಯಯನ ಶಿಬಿರಗಳನ್ನೂ ನಡೆಸಿದ್ದರು.

ದಲಿತ ಸಂಘರ್ಷ ಸಮಿತಿಯ ಸಾಮಾನ್ಯ ಕಾರ್ಯಕರ್ತನಾಗಿ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿ- ಕೊಂಡಿದ್ದ ಅವರು, ಬಳಿಕ ತಾಲ್ಲೂಕು ಘಟಕ ಸೇರಿ ರಾಜ್ಯ ಘಟಕದ ಪದಾಧಿಕಾರಿವರೆಗೆ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸಿದ್ದರು.

ಜನವರಿಯಲ್ಲಿ ಸರ್ಕಾರದ ವಿರುದ್ಧ ಬಿಜೆಪಿ ಹೋರಾಟ

ಸತ್ಯಶೋಧನೆ ಪಟ್ಟಿಯಲ್ಲಿ ಭಿನ್ನರಿಗಿಲ್ಲ ಜಾಗ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗರ್ಭಿಣಿಯರ ಸರಣಿ ಸಾವು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ಆತ್ಮಹತ್ಯೆ ವಿಚಾರವಾಗಿ ಜನವರಿಯಲ್ಲಿ ಮಂಡಲ ಮಟ್ಟದಿಂದ ರಾಜ್ಯಮಟ್ಟದವರೆಗೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಂದೋಲನ ರೂಪಿಸಲು ಬಿಜೆಪಿ ಸಿದ್ಧತೆ ನಡೆಸಿದೆ.

ಇದಕ್ಕಾಗಿ ‘ಆಂದೋಲನ’ ಮತ್ತು ‘ಸತ್ಯಶೋಧನಾ’ ಎಂಬ ಎರಡು ತಂಡಗಳನ್ನು ರಚಿಸಿದ್ದು, ಇದರಲ್ಲಿ ಭಿನ್ನರ ಬಣದವರಿಗೆ ಅವಕಾಶ ನೀಡಿಲ್ಲ. ಇದು ಪಕ್ಷದಲ್ಲಿ ಚರ್ಚೆಗೆ ಕಾರಣವಾಗಿದೆ.

‘ಕರ್ನಾಟಕದಲ್ಲಿ ಸರ್ಕಾರದ ವಿರುದ್ಧ ಹೋರಾಟಕ್ಕೆ ಸಾಕಷ್ಟು ವಿಷಯಗಳು ಇರುವುದರಿಂದ ನಾಮಕಾವಸ್ತೆ ಹೋರಾಟ ಮಾಡದೇ ಪರಿಣಾಮಕಾರಿಯಾಗಿ ಮತ್ತು ಆಕ್ರಮಣಕಾರಿಯಾಗಿ ಹೋರಾಟ ನಡೆಸಬೇಕು. ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕು. ಹೋರಾಟ ಫಲ ನೀಡುವಂತಿರಬೇಕು ಎಂದು ಪಕ್ಷದ ವರಿಷ್ಠರು ರಾಜ್ಯ ನಾಯಕರಿಗೆ ಕಿವಿ ಹಿಂಡಿದ್ದಾರೆ. ಹೀಗಾಗಿ ಎರಡು ತಂಡಗಳಲ್ಲಿ ಹೋರಾಟ ಹಮ್ಮಿಕೊಳ್ಳ- ಲಾಗಿದೆ. ಆದರೆ ಭಿನ್ನರ ಬಣದವರನ್ನು ಕೈಬಿಟ್ಟಿದ್ದು ಸರಿಯಲ್ಲ’ ಎಂದು ಬಿಜೆಪಿ ಮೂಲಗಳು ಹೇಳಿವೆ.

‘ಜನವರಿಯಲ್ಲಿ ಎರಡೂ ವಿಷಯಗಳಿಗೆ ಸಂಬಂಧಿಸಿದಂತೆ ಹೋರಾಟ ಆರಂಭಿಸಲು ಉದ್ದೇಶಿಸಿದ್ದು, ದಿನಾಂಕ ಮತ್ತು ಸ್ಥಳ ನಿಗದಿಯಾಗಬೇಕಾಗಿದೆ. ಅಲ್ಲದೇ, ಮಂಡಲ ಮಟ್ಟದಲ್ಲಿ ಪಕ್ಷವನ್ನು ಸಕ್ರಿಯಗೊಳಿಸಲು ಮಂಡಲ ಮಟ್ಟದ ಅಧ್ಯಕ್ಷರ ಹೆಸರುಗಳನ್ನೂ ಪ್ರಕಟಿಸಲಾಗುವುದು. ಈಗಾಗಲೇ ಪಟ್ಟಿ ಸಿದ್ಧಗೊಂಡಿದೆ’ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಈ ಮಧ್ಯೆ, ಭಿನ್ನರ ಬಣವೂ ಹೊಸ ವರ್ಷದಲ್ಲಿ ವಕ್ಫ್ ವಿಚಾರಕ್ಕೆ ಸಂಬಂಧಿಸಿದಂತೆ ಎರಡನೇ ಸುತ್ತಿನ ಹೋರಾಟ ನಡೆಸಲು ತೀರ್ಮಾನಿಸಿದೆಯಾದರೂ, ಎಲ್ಲಿಂದ ಮತ್ತು ಯಾವಾಗಿನಿಂದ ಎಂಬುದು ಅಂತಿಮವಾಗಬೇಕಿದೆ. ಅದಕ್ಕೂ ಮುನ್ನ ಪಕ್ಷದೊಳಗಿನ ಬಿರುಕು ಮುಚ್ಚಬೇಕು ಎಂದು ಕೆಲವು ನಾಯಕರು ಪ್ರಯತ್ನ ಆರಂಭಿಸಿದ್ದಾರೆ. ಅದರ ಭಾಗವಾಗಿ ಜನವರಿಯಲ್ಲಿ ಸಭೆಯೊಂದು ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

‘ಬಟೇಂಗೆ ತೋ ಕಟೇಂಗೆ’: ಪಕ್ಷದೊಳಗಿನ ಬೆಳವಣಿಗೆ ಕುರಿತು ತಟಸ್ಥ ಬಣದ ಶಾಸಕರೊಬ್ಬರು ಪ್ರತಿಕ್ರಿಯಿಸಿ, ‘ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮಹಾರಾಷ್ಟ್ರ ಚುನಾವಣೆ ಸಂದರ್ಭ ‘ಬಟೇಂಗೆ ತೋ ಕಟೇಂಗೆ’ (ಒಗ್ಗಟ್ಟಿಲ್ಲದಿದ್ದರೆ ವಿನಾಶಕ್ಕೆ ಕಾರಣವಾಗುತ್ತದೆ) ಎಂದು ಹೇಳಿದ್ದರು. ಇದು ಬೇರೆ ಎಲ್ಲಿಗಿಂತಲೂ ನಮ್ಮ ರಾಜ್ಯದ ಬಿಜೆಪಿಯಲ್ಲಿನ ನಾಯಕರಿಗೆ ಅನ್ವಯವಾಗುವಂತಹದ್ದು, ಭಿನ್ನಮತ– ಒಡಕಿನ ಪರಿಣಾಮ ಪಕ್ಷ ನೆಲಕಚ್ಚಬಹುದು, ತಾವೂ ಮೂಲೆ ಗುಂಪಾಗುತ್ತೇವೆ ಎಂಬ ಪರಿವೆಯೇ ಇಲ್ಲದೇ ವರ್ತಿಸುತ್ತಿದ್ದಾರೆ. ಎರಡೂ ಬಣಗಳಿಗೆ ಇದು ಮನವರಿಕೆ ಆಗದಿದ್ದರೆ, ಯಾರೂ ರಕ್ಷಿಸುವುದಕ್ಕೆ ಸಾಧ್ಯವಿಲ್ಲ’ ಎಂದು ಹೇಳಿದರು.

ಆಂದೋಲನ ಸಮಿತಿ ಯಾರಿದ್ದಾರೆ..?

ಈ ಸಮಿತಿಯಲ್ಲಿ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಆರಗ ಜ್ಞಾನೇಂದ್ರ, ಎನ್.ಮಹೇಶ್, ಅಶ್ವತ್ಥನಾರಾಯಣ- ಗೌಡ, ಬಸವರಾಜ ಮತ್ತಿಮಡು, ಎನ್.ರವಿಕುಮಾರ್ ಸೇರಿ 17 ಮಂದಿ ಇದ್ದಾರೆ.
ಬಾಣಂತಿಯರು ಮತ್ತು ನವಜಾತ ಶಿಶುಗಳ ಸರಣಿ ಸಾವಿನ ಸತ್ಯಶೋಧನೆಯ ತಂಡದಲ್ಲಿ ಡಾ.ಶೈಲೇಂದ್ರ ಬೆಲ್ದಾಳೆ, ಡಾ.ಅವಿನಾಶ್ ಜಾಧವ್, ಡಾ.ಚಂದ್ರು ಲಮಾಣಿ, ಡಾ.ಅಶ್ವಿನಿಗೌಡ, ಡಾ.ಬಸವರಾಜ್ ಕೇಲಗಾರ ಸೇರಿ 15 ಮಂದಿ ತಂಡದಲ್ಲಿದ್ದಾರೆ.

‘ಒಂದು ಜನಾಂಗದ ಆಚಾರ, ವಿಚಾರ ಬೇಡ’

ಪ್ರಜಾವಾಣಿ ವಾರ್ತೆ

ಮಡಿಕೇರಿ: ಯಾವುದೇ ಒಂದು ಜನಾಂಗದ ಆಚಾರ ವಿಚಾರಗಳನ್ನು ಹೇರದೇ ಹಿಂದಿನಂತೆ ಸರ್ವರೂ ಸಮಾನರು ಎಂಬ ತತ್ವದಡಿಯಲ್ಲಿ ಮುನ್ನಡೆಯಬೇಕು ಎಂದು ತಾಲ್ಲೂಕಿನ ಕಟ್ಟೆಮಾಡು ಗ್ರಾಮದ ಗಣಪತಿ ಸೇವಾ ಸಮಿತಿ ಪರಂಬು ಪೈಸಾರಿ ಸಂಘಟನೆಯ ಸದಸ್ಯರು ಒತ್ತಾಯಿಸಿದ್ದಾರೆ.

ಗ್ರಾಮದ ಮಹಾಮೃತ್ಯುಂಜಯ ದೇಗುಲದಲ್ಲಿ ಕೊಡವರ ಸಾಂಪ್ರದಾಯಿಕ ದಿರಿಸನ್ನು ಧರಿಸಿದ ಪುರುಷರಿಗೆ ಕೆಲವರು ಅಡ್ಡಿಪಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ಪ್ರತಿಕ್ರಿಯಿಸಿದರು.

‘ದೇವಾಲಯಕ್ಕೆ ಪರಿಶಿಷ್ಟ ಜಾತಿ, ಪಂಗಡದವರಿಗೂ ಮುಕ್ತ ಪ್ರವೇಶ ಇದೆ. ಯಾವುದೇ ಒಂದು ಜನಾಂಗದ ಆಚಾರ ವಿಚಾರಗಳನ್ನು ಹೇರಿದರೆ ಅಸಮಾನತೆ ಸೃಷ್ಟಿಯಾಗುತ್ತದೆ. ಹಾಗಾಗಿ, ಎಲ್ಲ ಜನಾಂಗದವರೂ ಸೇರಿ ರೂಪಿಸಿರುವ ಬೈಲಾಕ್ಕೆ ಅನುಗುಣವಾಗಿಯೇ ಎಲ್ಲರೂ ನಡೆದುಕೊಳ್ಳಬೇಕು’ ಎಂದು ಸಮಿತಿಯ ಬಿ.ಕೆ.ಉಮೇಶ್ ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಗೌಡ, ಕೊಡವ, ಬಿಲ್ಲವ, ಶೆಟ್ಟಿ, ಮಲಯಾಳಿ ಸೇರಿದಂತೆ 10ಕ್ಕೂ ಹೆಚ್ಚಿನ ಜಾತಿಯವರು ಗ್ರಾಮದಲ್ಲಿದ್ದಾರೆ. ಇಷ್ಟು ವರ್ಷ ಇಲ್ಲದ ವಿವಾದವನ್ನು ವಾರ್ಷಿಕೋತ್ಸವದ ಕೊನೆಯ ದಿನ ಕೆಲವರಷ್ಟೇ ಸೃಷ್ಟಿ ಮಾಡಿದ್ದು ಪೂರ್ವಯೋಜಿತ’ ಎಂದು ಸಮಿತಿಯ ಉಪಾಧ್ಯಕ್ಷ ಪಿ.ಬಿ.ತಿಮ್ಮಪ್ಪ ಆರೋಪಿಸಿದರು.

ದೇಗುಲದ ಸ್ವಯಂಸೇವಕ ಜೇನುಕುರುಬ ಮುತ್ತ ಮಾತನಾಡಿ, ‘ದೇಗುಲ ಸಮಿತಿಯವರು ಎಲ್ಲ ಜಾತಿಯವರಿಗೂ ಸಮಾನ ಅವಕಾಶ ನೀಡಿದ್ದಾರೆ. ಕೇವಲ ದಿರಿಸಿಗಾಗಿ ಗಲಾಟೆ ಮಾಡುವುದು ಬೇಡ.’ ಎಂದರು.

ವಾರ್ಷಿಕೋತ್ಸವದ ವೇಳೆ ಕೊಡವರ ಸಾಂಪ್ರದಾಯಿಕ ದಿರಿಸನ್ನು ಧರಿಸಿದ ಪುರುಷರಿಗೆ ಕೆಲವರು ಅಡ್ಡಿಪಡಿಸಿದರು ಎಂಬ ಕಾರಣಕ್ಕೆ ಗಲಾಟೆ ಶುರುವಾಗಿತ್ತು. ನಂತರ ವಿವಾದದ ಸ್ವರೂಪ ಪಡೆದುಕೊಂಡಿತ್ತು. ಸೋಮವಾರ ನಡೆದ ಶಾಂತಿ ಸಭೆಯಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲು ದೇವಾಲಯ ಸಮಿತಿಗೆ ಜಿಲ್ಲಾಧಿಕಾರಿ ಒಂದು ವಾರಗಳ ಕಾಲಾವಕಾಶ ನೀಡಿದ್ದರು.

ಕಾಂಗಪೋಕ್ಪಿ ಜಿಲ್ಲೆ: ಭದ್ರತಾ ಪಡೆ – ಕುಕಿ ಬುಡಕಟ್ಟು ಸಮುದಾಯದ ಮಹಿಳೆಯರ ಘರ್ಷಣೆ

ಮಣಿಪುರದಲ್ಲಿ ಮತ್ತೆ ಉದ್ವಿಗ್ನ ಸ್ಥಿತಿ

ಚುರಾಚಾಂದ್‌ಪುರ (ಪಿಟಿಐ): ಜನಾಂಗೀಯ ಸಂಘರ್ಷಪೀಡಿತ ಮಣಿಪುರ ರಾಜ್ಯದಲ್ಲಿ ವರ್ಷದ ಕೊನೆ ದಿನ ಮತ್ತೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಂಗಪೋಕ್ಪಿ ಜಿಲ್ಲೆಯಲ್ಲಿ ಮಂಗಳವಾರ ಕುಕಿ-ಜೋ ಮಹಿಳೆಯರ ನೇತೃತ್ವದ ಗುಂಪು ಮತ್ತು ಭದ್ರತಾ ಪಡೆಗಳ ನಡುವೆ ಭಾರಿ ಘರ್ಷಣೆ ನಡೆದಿದೆ.

ಸೇನೆ, ಬಿಎಸ್‌ಎಫ್ ಮತ್ತು ಸಿಆರ್‌ಪಿಎಫ್‌ನ ಸಂಯೋಜಿತ ಭದ್ರತಾ ಪಡೆಗಳ ನಿಯೋಜನೆಗೆ ಸ್ಥಳೀಯ ಜನರ ಗುಂಪು ಅಡ್ಡಿಪಡಿಸಲು ಪ್ರಯತ್ನಿಸಿದ ನಂತರ ಥಮ್ನಾಪೋಕ್ಪಿ ಸಮೀಪದ ಉಯೋಕ್ಚಿಂಗ್‌ನಲ್ಲಿ ಈ ಘಟನೆ ಸಂಭವಿಸಿದೆ ಎಂದು ಪೊಲೀಸರು 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಜಂಟಿ ಪಡೆಗಳು ಜನರ ಗುಂಪನ್ನು ಚದುರಿಸಿವೆ. ಈಗ ಪರಿಸ್ಥಿತಿ ಶಾಂತವಾಗಿದ್ದು, ನಿಯಂತ್ರಣದಲ್ಲಿದೆ. ಈ ಪ್ರದೇಶದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಲು ಭದ್ರತಾ ಪಡೆಗಳನ್ನು ಆಯಕಟ್ಟಿನ ಜಾಗಗಳಲ್ಲಿ ನಿಯೋಜಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಟ್ವಿಚಿಂಗ್‌ನ ಸೈಬೋಲ್ ಗ್ರಾಮದಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯರು ಹೇಳಿದ್ದಾರೆ. ಸೈಬೋಲ್ ಅನ್ನು ಕುಕಿ ಮತ್ತು ಮೈತೇಯಿ ಪ್ರಾಬಲ್ಯದ ಇಂಫಾಲ್ ಕಣಿವೆಯ ನಡುವಿನ ಬಫರ್ ವಲಯವಾಗಿ ಗುರುತಿಸಲಾಗಿದೆ.

ಆದಾಗ್ಯೂ, ಗಾಯಗೊಂಡವರ ಸಂಖ್ಯೆಯ ಬಗ್ಗೆ ಸರ್ಕಾರದಿಂದ ಯಾವುದೇ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ.

ಸಮುದಾಯ ಬಂಕರ್‌ಗಳನ್ನು ಭದ್ರತಾ ಪಡೆಗಳು ಬಲವಂತದಿಂದ ಆಕ್ರಮಿಸಲು ಮುಂದಾದವು. ಆಗ ಪ್ರತಿಭಟಿಸಲು ಸ್ಥಳೀಯ ಮಹಿಳೆಯರು ಜಮಾಯಿಸಿದರು. ಪ್ರತಿಭಟನಕಾರರನ್ನು ಚದುರಿಸಲು ಭದ್ರತಾ ಪಡೆಗಳು ಅಶ್ರುವಾಯು ಬಳಸಿದಾಗ ಉದ್ವಿಗ್ನ ಪರಿಸ್ಥಿತಿ ಉಲ್ಬಣಿಸಿತು ಎಂದು ಕುಕಿ ಮುಖಂಡರು ಆರೋಪಿಸಿದರು.

'ಅದು ಯುದ್ಧಭೂಮಿಯಂತಿತ್ತು. ನಾವು ನಮ್ಮ ಕಳವಳಗಳನ್ನು ವ್ಯಕ್ತಪಡಿಸಲು ಬಂದಿದ್ದೇವೆ. ಯುದ್ಧ ತಂತ್ರಗಳನ್ನು ಎದುರಿಸಲು ಅಲ್ಲ' ಎಂದು ಪ್ರತಿಭಟನಕಾರರೊಬ್ಬರು ತಿಳಿಸಿದರು.

ಸಿಬ್ಬಂದಿ ನಡೆಸಿದ ಬಲಪ್ರಯೋಗದಲ್ಲಿ ಅನೇಕ ಮಹಿಳೆಯರು ಗಾಯಗೊಂಡಿದ್ದಾರೆ ಎಂದು ಬುಡಕಟ್ಟು ನಾಯಕರ ವೇದಿಕೆಯ (ಐಟಿಎಲ್‌ಎಫ್) ಮಹಿಳಾ ವಿಭಾಗ ಹೇಳಿದೆ.

'ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಕುಕಿ ಮಹಿಳೆಯರನ್ನು ಭದ್ರತಾ ಪಡೆಗಳು ಗುರಿಯಾಗಿಸಿಕೊಂಡಿವೆ' ಎಂದು ಕುಕಿ ವಿಮೆನ್ ಆರ್ಗನೈಸೇಶನ್ ಫಾರ್ ಹ್ಯೂಮನ್ ರೈಟ್ಸ್ (ಕೆಡಬ್ಲ್ಯುಒಎಚ್‌ಆರ್) ಆರೋಪಿಸಿದೆ.

ಕುಕಿ ಮಹಿಳೆಯರ ಬಟ್ಟೆಗಳನ್ನು ಹರಿದು ಹಾಕಿ, ಕಿರುಕುಳ ನೀಡಲಾಗಿದೆ. ನಿರಾಯುಧ ಅಮಾಯಕ ಕುಕಿ ಮಹಿಳೆಯರ ಮೇಲೆ ಲಾಠಿ ಚಾರ್ಜ್ ಮತ್ತು ಅಶ್ರುವಾಯು ಬಳಸಲಾಗಿದೆ ಎಂದು ಅದು ಆರೋಪಿಸಿದೆ.

'ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು ಬಫರ್ ವಲಯಗಳನ್ನು ನಿರ್ವಹಿಸಲು ಮತ್ತು 19 ತಿಂಗಳಿಗಿಂತ ಹೆಚ್ಚು ಸಮಯದ ನಂತರವೂ ಮೈತೇಯಿ ಸಮುದಾಯದವರು ನಮ್ಮ ಮೇಲೆ ದಾಳಿ ಮಾಡುವುದನ್ನು ತಡೆಯಲು ಅಸಮರ್ಥವಾಗಿದ್ದರೆ, ಅವರು ಬಫರ್ ವಲಯಗಳನ್ನು ತ್ಯಜಿಸಬೇಕು. ಇದರಿಂದ ನಮ್ಮ ಸ್ವಯಂಸೇವಕರು ನಮ್ಮನ್ನು ರಕ್ಷಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಿದ್ದಾರೆ' ಎಂದು ಕುಕಿ ಮಹಿಳಾ ಒಕ್ಕೂಟ ಹೇಳಿದೆ.



ಇಂಫಾಲ್‌ನಲ್ಲಿ ಮಂಗಳವಾರ ಮಣಿಪುರದ ಮುಖ್ಯಮಂತ್ರಿ ಎನ್‌.ಬಿರೇನ್ ಸಿಂಗ್ ಪತ್ರಿಕಾಗೋಷ್ಠಿ ನಡೆಸಿದರು – ಪಿಟಿಐ ಚಿತ್ರ

ನಮ್ಮ ಜನರು ತುಂಬಾ ನೋವು ಅನುಭವಿಸಿದ್ದಾರೆ. ನಿರಾಯುಧ ಮಹಿಳೆಯರ ಮೇಲೆ ಮಿತಿಮೀರಿದ ಬಲ ಪ್ರಯೋಗ ಮಾಡಿರುವುದು ಒಪ್ಪತಕ್ಕದ್ದಲ್ಲ

ವಕ್ತಾರರು, ಬುಡಕಟ್ಟು ಏಕತೆಯ ಸಮಿತಿ

ಶಾಂತಿ ಕಾಪಾಡಬೇಕಾದ ಪಡೆಗಳು ಕುಕಿ-ಜೋ ಸಮುದಾಯದ ನೋವು ಉಲ್ಬಣಿಸುವ ಕ್ರಮಗಳಲ್ಲಿ ತೊಡಗಿರುವುದು ಕಳವಳಕಾರಿ

ಕುಕಿ ವಿಮೆನ್ ಆರ್ಗನೈಸೇಶನ್ ಫಾರ್ ಹ್ಯೂಮನ್ ರೈಟ್ಸ್

ರಾಷ್ಟ್ರೀಯ ಹೆದ್ದಾರಿ ತಡೆ

ಈ ಘಟನೆಯ ನಂತರ, ಬುಡಕಟ್ಟು ಏಕತಾ ಸಮಿತಿಯು (ಸಿಒಟಿಯು) ಕೇಂದ್ರೀಯ ಪಡೆಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ, ದೇಶದ ಇತರ ಭಾಗಗಳಿಗೆ ಈ ಪ್ರದೇಶವನ್ನು ಸಂಪರ್ಕಿಸುವ ನಿರ್ಣಾಯಕ ರಸ್ತೆಯಾದ ರಾಷ್ಟ್ರೀಯ ಹೆದ್ದಾರಿ 2 ಅನ್ನು ಅನಿರ್ದಿಷ್ಟ ಅವಧಿಯವರೆಗೆ ನಿರ್ಬಂಧಿಸಿದೆ.

ಹೆದ್ದಾರಿ ನಿರ್ಬಂಧಿಸಿರುವುದರಿಂದ ಇಂಫಾಲ್ ಕಣಿವೆಯಲ್ಲಿರುವ ಮೈತೇಯಿ ಪ್ರದೇಶಗಳಿಗೆ ಸರಕುಗಳ ಪೂರೈಕೆಗೆ ಅಡಚಣೆ ಉಂಟಾಗಲಿದೆ.

ಕಳೆದ ವರ್ಷದ ಮೇ ತಿಂಗಳಿನಿಂದ ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಹಿಂಸಾಚಾರದಲ್ಲಿ 250ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಸಾವಿರಾರು ಜನರು ನೆಲೆ ಕಳೆದುಕೊಂಡು, ನಿರಾಶ್ರಿತರಾಗಿದ್ದಾರೆ.


'ಹಿಂಸಾಚಾರ: ಮಣಿಪುರದಲ್ಲಿ ಶೇ 77ರಷ್ಟು'

ನವದೆಹಲಿ: ಕಳೆದ ವರ್ಷ ಈಶಾನ್ಯ ರಾಜ್ಯಗಳಲ್ಲಿ ಸಂಭವಿಸಿದ ಹಿಂಸಾಚಾರಗಳ ಪೈಕಿ, ಮಣಿಪುರದಲ್ಲಿಯೇ ಅಧಿಕ ಶೇ 77ರಷ್ಟು ಪ್ರಕರಣಗಳು ವರದಿಯಾಗಿವೆ.

ಗೃಹ ಸಚಿವಾಲಯ ಬಿಡುಗಡೆ ಮಾಡಿರುವ ವಾರ್ಷಿಕ ವರದಿಯಲ್ಲಿ ಈ ಮಾಹಿತಿ ಇದ್ದು, ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಜನಾಂಗೀಯ ಸಂಘರ್ಷವೇ ಹಿಂಸಾಚಾರಗಳಿಗೆ ಕಾರಣ ಎಂದು ವಿವರಿಸಲಾಗಿದೆ.

ಮಹಾರಾಷ್ಟ್ರ ಸಚಿವ ನಿತೇಶ್ ಹೇಳಿಕೆಗೆ ಪಿಣರಾಯಿ ಖಂಡನೆ

ತಿರುವನಂತಪುರ (ಪಿಟಿಐ): ಕೇರಳವನ್ನು ಮಿನಿ ಪಾಕಿಸ್ತಾನ ಎಂದು ಕರೆದಿರುವ ಮಾಹಾರಾಷ್ಟ್ರ ಸಚಿವ ನಿತೇಶ್ ರಾಣೆ ಅವರ ವಿರುದ್ಧ ಮಂಗಳವಾರ ಆಕ್ರೋಶ ವ್ಯಕ್ತಪಡಿಸಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, 'ಇದು ಖಂಡನೀಯ ಮತ್ತು ಪ್ರಚೋದನಕಾರಿ' ಎಂದು ಹೇಳಿದ್ದಾರೆ.



ಪಿಣರಾಯಿ

ಕೇರಳದ ಬಗೆಗಿನ ಸಂಘ ಪರಿವಾರದ ಧೋರಣೆಯು ಮಹಾರಾಷ್ಟ್ರ ಸಚಿವರ ಹೇಳಿಕೆಯ ಮೂಲಕ ಬಯಲಾಗಿದೆ. ಎಲ್ಲೆಲ್ಲಿ ತಮ್ಮ ಪ್ರಭಾವ ಬೀರಲು ಸಾಧ್ಯವಿಲ್ಲವೋ ಅಂತಹ ಪ್ರದೇಶಗಳಲ್ಲಿ ದ್ವೇಷ ಹರಡಿ, ಮೂಲೆಗುಂಪು ಮಾಡಬೇಕೆನ್ನುವುದು ಸಂಘ ಪರಿವಾರದ ನಂಬಿಕೆ. ಅದರ ಭಾಗವಾಗಿಯೇ ಈ ರೀತಿಯ ಹೇಳಿಕೆಗಳು ಬಂದಿವೆ ಎಂದು ಹೇಳಿದ್ದಾರೆ.

'ದ್ವೇಷ ಭಾಷಣ ಮಾಡಿದ ಸಚಿವರು ತಮ್ಮ ಸ್ಥಾನದಲ್ಲಿ ಮುಂದುವರಿಯಲು ಯೋಗ್ಯರಲ್ಲ. ಸಚಿವರೊಬ್ಬರು ಸಂವಿಧಾನಕ್ಕೆ ಅಪಮಾನ ಮಾಡಿದ್ದರೂ ದೇಶದ ನಾಯಕತ್ವ ವಹಿಸಿದವರು ಪ್ರತಿಕ್ರಿಯಿಸಿದಿರುವುದು ಆಶ್ಚರ್ಯಕರ ಸಂಗತಿ' ಎಂದು ಹೇಳಿದ್ದಾರೆ.

ಎಲ್ಲ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಗುಂಪುಗಳು ಒಟ್ಟಾಗಿ ಸಂಘಪರಿವಾರದ ದ್ವೇಷಪೂರಿತ ಹೇಳಿಕೆಯನ್ನು ಖಂಡಿಸಬೇಕು ಎಂದು ಕರೆ ನೀಡಿದ್ದಾರೆ.

ರಾಣೆ ಹೇಳಿಕೆಯು ದಕ್ಷಿಣದ ರಾಜ್ಯಗಳ ಬಗೆಗೆ ಬಿಜೆಪಿ ಯಾವ ರೀತಿಯ ಹಗೆತನದ ಧೋರಣೆ ಇಟ್ಟುಕೊಂಡಿದೆ ಎನ್ನುವುದಕ್ಕೆ ಕನ್ನಡಿ ಹಿಡಿಯುತ್ತದೆ

ಕೆ.ಸಿ. ವೇಣುಗೋಪಾಲ್
ಎಐಸಿಸಿ ಪ್ರಧಾನ ಕಾರ್ಯದರ್ಶಿ

ಬಡವರು, ದುರ್ಬಲ ವರ್ಗಗಳಿಗೆ ಅನ್ಯಾಯ

ನವದೆಹಲಿ: 'ಬಿಜೆಪಿ ಅಧಿಕಾರದಲ್ಲಿ ಇರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ 'ಮನುವಾದ'ದ ಧೋರಣೆಯಿಂದಾಗಿ ದುರ್ಬಲ ಸಮುದಾಯಗಳ ವಿರೋಧಿ ಮನಃಸ್ಥಿತಿ ಮೂಡಿದೆ. ಇದರಿಂದ ಶೋಷಿತರು ಇನ್ನಷ್ಟು ನಲುಗುತ್ತಿದ್ದಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹಿಂದಿಯಲ್ಲಿ ಸಂದೇಶ ಹಾಕಿರುವ ಅವರು, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಂಸತ್ತಿನ ಒಳಗಡೆಯೇ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದರು. ಬಿಜೆಪಿ ಆಡಳಿತದ ರಾಜ್ಯಗಳಲ್ಲೂ ದುರ್ಬಲ ವರ್ಗಗಳ ವಿರುದ್ಧ ಇದೇ ರೀತಿಯ ಮನಃಸ್ಥಿತಿ ಇದೆ' ಎಂದು ಹೇಳಿದ್ದಾರೆ.

'ಮಾತುಕತೆಗೆ ಒಪ್ಪಿದರೆ ಚಿಕಿತ್ಸೆಗೆ ಡಲ್ಲೇವಾಲ್ ಸಿದ್ಧ'

ನವದೆಹಲಿ (ಪಿಟಿಐ): ಮಾತುಕತೆಗೆ ತಾವು ಇರಿಸಿರುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡರೆ, ವೈದ್ಯಕೀಯ ನೆರವು ಪಡೆಯಲು ರೈತ ಮುಖಂಡ ಜಗಜೀತ್ ಸಿಂಗ್ ಡಲ್ಲೇವಾಲ್ ಒಪ್ಪಿದ್ದಾರೆ ಎಂದು ಪಂಜಾಬ್ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ಡಲ್ಲೇವಾಲ್ ಅವರು ಒಂದು ತಿಂಗಳಿಗೂ ಹೆಚ್ಚಿನ ಅವಧಿಯಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಪಂಜಾಬ್ ಸರ್ಕಾರ ನೀಡಿದ ಈ ಮಾಹಿತಿಯನ್ನು ದಾಖಲಿಸಿಕೊಂಡ ಕೋರ್ಟ್, ವಿಚಾರಣೆಯನ್ನು ಜನವರಿ 2ಕ್ಕೆ ಮುಂದೂಡಿದೆ. ಡಲ್ಲೇವಾಲ್ ಅವರನ್ನು ಆಸ್ಪತ್ರೆಗೆ ದಾಖಲಿಸದೆ ಇದ್ದುದಕ್ಕಾಗಿ ಪಂಜಾಬ್ ಸರ್ಕಾರವನ್ನು ಕೋರ್ಟ್ ಡಿ. 28ರಂದು ತರಾಟೆಗೆ ತೆಗೆದುಕೊಂಡಿತ್ತು.

ಕ್ಷಮೆಯಾಚಿಸಿದ ಮಣಿಪುರ ಸಿ.ಎಂ

ಒಂದನೇ ಪುಟದಿಂದ...

'ಈ ಹಿಂದಿನ ದಿನಗಳಿಗೆ ಹೋಲಿಸಿದರೆ, ಇತ್ತೀಚಿನ 3–4 ತಿಂಗಳಿಂದ ರಾಜ್ಯದಲ್ಲಿ ಶಾಂತಿ ನೆಲಸಿದೆ. ಈ ಬೆಳವಣಿಗೆಯು ಹೊಸ ವರ್ಷದಲ್ಲಿ ರಾಜ್ಯದಲ್ಲಿ ಸಹಜಸ್ಥಿತಿ ಮರಳುವ ಭರವಸೆ ಮೂಡಿಸುತ್ತಿದೆ' ಎಂದಿದ್ದಾರೆ.

ಕಳೆದ ಕೆಲ ತಿಂಗಳಿನಿಂದ ರಾಜ್ಯದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷದಲ್ಲಿ 250ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, ಸಾವಿರಾರು ಜನರು ಮನೆ ಕಳೆದುಕೊಂಡಿದ್ದಾರೆ.

ಬಿರೇನ್ ಸಿಂಗ್ ಹೇಳಿದ್ದು

- 2023ರ ಮೇನಲ್ಲಿ ಜನಾಂಗೀಯ ಸಂಘರ್ಷ ಆರಂಭಗೊಂಡ ನಂತರ ರಾಜ್ಯದಲ್ಲಿ ಗುಂಡಿನ ದಾಳಿ ಪ್ರಕರಣಗಳು ಹೆಚ್ಚಾಗಿದ್ದವು. ಆದರೆ, ಕಳೆದ 20 ತಿಂಗಳಲ್ಲಿ ಇಂತಹ ಘಟನೆಗಳು ಕಡಿಮೆಯಾಗಿವೆ
- 2023ರ ಮೇನಿಂದ ಅಕ್ಟೋಬರ್ ವರೆಗೆ 408 ಗುಂಡಿನ ದಾಳಿ ಪ್ರಕರಣಗಳು ವರದಿಯಾಗಿದ್ದವು. 2023ರ ನವೆಂಬರ್‌ನಿಂದ ಈ ವರ್ಷದ ಏಪ್ರಿಲ್ ನಡುವೆ 345 ಗುಂಡಿನ ದಾಳಿಗಳು ವರದಿಯಾಗಿದ್ದವು. 2024ರ ಮೇದಿಂದ ಈ ವರೆಗೆ 112 ಪ್ರಕರಣಗಳು ವರದಿಯಾಗಿವೆ
- ಶಸ್ತ್ರಾಸ್ತ್ರಗಳ ಲೂಟಿ ಪ್ರಕರಣಗಳಿಗೆ ಸಂಬಂಧಿಸಿ, 3,112 ಆಯುಧಗಳನ್ನು ಮರುವಶ ಮಾಡಿಕೊಳ್ಳಲಾಗಿದೆ. 2,511 ಸ್ಫೋಟಕಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ
- ಹಿಂಸಾಚಾರ ಪ್ರಕರಣಗಳಿಗೆ ಸಂಬಂಧಿಸಿ 625 ಜನರನ್ನು ಬಂಧಿಸಲಾಗಿದ್ದು, 12,047 ಎಫ್‌ಐಆರ್ ದಾಖಲಿಸಲಾಗಿದೆ

ಆಂಧ್ರ: ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ?

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರ ಪ್ರದೇಶದ ಸರ್ಕಾರಿ ಬಸ್‌ಗಳಲ್ಲಿ ಯುಗಾದಿ ಹಬ್ಬದಿಂದ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಡುವ ಯೋಜನೆಯನ್ನು ಜಾರಿಗೊಳಿಸುವ ಸುಳಿವನ್ನು ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ನೀಡಿದ್ದಾರೆ.

ಮುಖ್ಯಮಂತ್ರಿಯು ಸಾರಿಗೆ ಇಲಾಖೆಯ ಅಧಿಕಾರಿಗಳೊಂದಿಗೆ ಸೋಮವಾರ ನಡೆಸಿದ ಸಭೆಯಲ್ಲಿ ಈ ವಿಷಯ ಪ್ರಸ್ತಾಪಗೊಂಡಿದೆ. ಕಳೆದ ಮೇ ತಿಂಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗೂ ಪೂರ್ವದಲ್ಲಿ ತೆಲುಗು ದೇಶಂ– ಜನ ಸೇನಾದ ಜಂಟಿ ಪ್ರಣಾಳಿಕೆಯಲ್ಲಿ ಘೋಷಿಸಿದ್ದ 'ಸೂಪರ್ ಸಿಕ್ಸ್' ಭರವಸೆಗಳಲ್ಲಿ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆಯೂ ಒಂದಾಗಿತ್ತು.

ಅಧಿಕಾರಕ್ಕೆ ಬಂದು ಆರು ತಿಂಗಳಾದರೂ ಯೋಜನೆ ಇನ್ನೂ ಜಾರಿಗೊಂಡಿಲ್ಲ. ಸಂಕ್ರಾಂತಿ ಹಬ್ಬದಿಂದ ಜಾರಿಗೊಳ್ಳಲಿದೆ ಎಂದು ನಿರೀಕ್ಷಿಸಿದ್ದ ಈ ಯೋಜನೆಯನ್ನು ಮತ್ತೆ ಮುಂದೂಡಲಾಗಿದೆ.

ಪೂಜಾರಿ ಗ್ರಂಥಿ ಸಮ್ಮಾನ ಯೋಜನೆ: ನೋಂದಣಿ ಆರಂಭ

ನವದೆಹಲಿ (ಪಿಟಿಐ): ದೆಹಲಿಯ ಮರಘಟ್ ವಾಲೆ ಬಾಬಾ ದೇವಸ್ಥಾನದ ಅರ್ಚಕರ ಹೆಸರನ್ನು ನೋಂದಾಯಿಸುವ ಮೂಲಕ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು 'ಪೂಜಾರಿ ಗ್ರಂಥಿ ಸಮ್ಮಾನ ಯೋಜನೆ'ಗೆ ಮಂಗಳವಾರ ಚಾಲನೆ ನೀಡಿದರು.



ಅರವಿಂದ ಕೇಜ್ರಿವಾಲ್

ದೆಹಲಿ ವಿಧಾನಸಭೆಗೆ ಫೆಬ್ರುವರಿಯಲ್ಲಿ ಚುನಾವಣೆ ನಡೆಯಲಿದೆ. ದೆಹಲಿಯಲ್ಲಿ ಎಎಪಿ ಅಧಿಕಾರಕ್ಕೆ ಮರಳಿದರೆ ಈ ಯೋಜನೆಯ ಅಡಿಯಲ್ಲಿ ಹಿಂದೂ ದೇವಸ್ಥಾನಗಳ ಅರ್ಚಕರಿಗೆ ಮತ್ತು ಗುರುದ್ವಾರಗಳ ಗ್ರಂಥಿಗಳಿಗೆ ತಿಂಗಳಿಗೆ ₹18 ಸಾವಿರ ಗೌರವಧನ ನೀಡಲಾಗುತ್ತದೆ ಎಂದು ಕೇಜ್ರಿವಾಲ್ ಪ್ರಕಟಿಸಿದ್ದರು.

'ನಾನು ಇವತ್ತು ಮರಘಟ್ ಬಾಬಾ ದೇವಸ್ಥಾನಕ್ಕೆ ತೆರಳಿ ಯೋಜನೆಗೆ ಚಾಲನೆ ನೀಡಿದೆ' ಎಂದು ಕೇಜ್ರಿವಾಲ್ ಅವರು 'ಎಕ್ಸ್' ಮೂಲಕ ತಿಳಿಸಿದ್ದಾರೆ. ನೋಂದಣಿ ಪ್ರಕ್ರಿಯೆಯನ್ನು ನಿಲ್ಲಿಸಲು ಬಿಜೆಪಿ ಎಲ್ಲ ಪ್ರಯತ್ನ ನಡೆಸಿತು. ಆದರೆ ಭಕ್ತನು ದೇವರನ್ನು ಭೇಟಿಯಾಗುವುದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಅರ್ಚಕರಿಂದ ಪ್ರತಿಭಟನೆ: ಸರ್ಕಾರಿ ಯೋಜನೆಗಳ ಅಡಿಯಲ್ಲಿ 10 ವರ್ಷಗಳಿಂದ ಏಕೆ ಯಾವುದೇ ಬಗೆಯ ಹಣಕಾಸಿನ ನೆರವು ಒದಗಿಸಲಿಲ್ಲ ಎಂಬುದನ್ನು ಕೇಜ್ರಿವಾಲ್ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿ 'ಪ್ರಾಚೀನ ಹನುಮಾನ್ ಮಂದಿರ'ದ ಹೊರಗಡೆ ಅರ್ಚಕರ ಗುಂಪೊಂದು ಧರಣಿ ನಡೆಸಿತು.

'ಪೂಜಾರಿ ಗ್ರಂಥಿ ಸಮ್ಮಾನ ಯೋಜನೆ'ಯನ್ನು ಟೀಕಿಸಿರುವ ಬಿಜೆಪಿ ನಾಯಕ ವಿಜಯ್ ಗೋಯಲ್ ಅವರು, ಈ ಘೋಷಣೆಯು ಚುನಾವಣಾ ಭರವಸೆಯಷ್ಟೆ ಎಂದು ಹೇಳಿದ್ದಾರೆ.

ಮಹಾರಾಷ್ಟ್ರ: ಸಿಐಡಿಗೆ ಶರಣಾದ ಸಚಿವರ ಆಪ್ತ

ಪ್ರಜಾವಾಣಿ ವಾರ್ತೆ

ಮುಂಬೈ: ಸರಪಂಚ್ ಸಂತೋಷ್ ದೇಶ್‌ಮುಖ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ₹2 ಕೋಟಿ ಸುಲಿಗೆ ಪ್ರಕರಣದ ಆರೋಪಿ ವಾಲ್ಮೀಕ್ ಕರಾಡ್ ಅವರು ಸಿಐಡಿ ಮುಂದೆ ಮಂಗಳವಾರ ಶರಣಾಗಿದ್ದಾರೆ. ಅವರು ಮಹಾರಾಷ್ಟ್ರದ ಸಚಿವ ಮತ್ತು ಎನ್‌ಸಿಪಿ ನಾಯಕ ಧನಂಜಯ್ ಮುಂಡೆ ಅವರ ಆಪ್ತ.

ಬೀಡ್ ಜಿಲ್ಲೆಯಲ್ಲಿ ಡಿ.9ರಂದು ಸಂತೋಷ್ ದೇಶ್‌ಮುಖ್ ಅವರ ಹತ್ಯೆಯಾದ ಬಳಿಕ ವಾಲ್ಮೀಕ್ ತಲೆಮರೆಸಿಕೊಂಡಿದ್ದರು.

ದೇಶ್‌ಮುಖ್ ಅಪಹರಣ ಮತ್ತು ಹತ್ಯೆ, ಅವಾಡ ಸಮೂಹದಿಂದ ಹಣ ಸುಲಿಗೆ ಹಾಗೂ ಅದರ ಭದ್ರತಾ ಸಿಬ್ಬಂದಿ ಮೇಲಿನ ಹಲ್ಲೆ ಪ್ರಕರಣಗಳ ಬಗೆಗೆ ಸಿಐಡಿ ತನಿಖೆ ನಡೆಸುತ್ತಿದೆ.

'ನನ್ನ ವಿರುದ್ಧ ಸುಲಿಗೆ ಪ್ರಕರಣ ದಾಖಲಿಸಲಾಗಿದೆ. ನಾನು ನಿರೀಕ್ಷಣಾ ಜಾಮೀನು ಪಡೆಯಬಹುದಿತ್ತು. ಅದರ ಬದಲಾಗಿ ಸಿಐಡಿ ಮುಂದೆ ಶರಣಾಗುತ್ತೇನೆ. ಸಂತೋಷ್ ಹತ್ಯೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಅವರಿಗೆ ಮರಣದಂಡನೆ ವಿಧಿಸಬೇಕು. ರಾಜಕೀಯ ಕಾರಣಕ್ಕೆ ನನ್ನ ಹೆಸರನ್ನು ಈ ಪ್ರಕರಣದಲ್ಲಿ ಬಳಸಿಕೊಳ್ಳಲಾಗಿದೆ' ಎಂದು ವಾಲ್ಮೀಕ್ ಅವರು ಶರಣಾಗುವ ಮೊದಲು ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

ಸಂತೋಷ್ ಹತ್ಯೆಯಲ್ಲಿ ವಾಲ್ಮೀಕ್ ಕೈವಾಡವಿದೆ. ಸುಲಿಗೆ ಮಾಡುವುದನ್ನು ವಿರೋಧಿಸಿದ್ದಕ್ಕೆ ಕೊಲೆ ನಡೆದಿದೆ ಎಂದು ಸಂತೋಷ್ ಕುಟುಂಬಸ್ಥರು ಆರೋಪಿಸಿದ್ದರು.

ಕಾರ್ಯಪಡೆಗೆ ಬಗ್ಗದ ಡ್ರಗ್ಸ್ ದಂಧೆ

ಒಂದನೇ ಪುಟದಿಂದ...

ನಶೆ ಮುಕ್ತ ಆ್ಯಪ್‌ಗೆ ಪ್ರತಿನಿತ್ಯ ನೂರಾರು ಸಂದೇಶಗಳು ಬರುತ್ತಿದ್ದು, ಕಾರ್ಯಾಚರಣೆಗೆ ಅನುಕೂಲವಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಡ್ರಗ್ಸ್ ನಿಯಂತ್ರಣಕ್ಕೆ ಕಾರ್ಯಪಡೆ ರಚನೆ ಆಗಿದ್ದರೂ, ಡ್ರಗ್ಸ್ ಹಾವಳಿ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ಡ್ರಗ್ಸ್ ಪೆಡ್ಲರ್‌ಗಳಿಗೆ ಮಾದಕ ವಸ್ತುಗಳನ್ನು ಪೂರೈಸಲು ಮಹಾನಗರಗಳು ಪ್ರಮುಖ ಕೇಂದ್ರಗಳಾಗಿವೆ. ರಾಜ್ಯದ ಕರಾವಳಿ ಹಾಗೂ ಮಲೆನಾಡು ಪ್ರದೇಶದತ್ತ ಯುವ ಸಮೂಹ ವಾರಾಂತ್ಯದಲ್ಲಿ ಪ್ರವಾಸಕ್ಕೆ ತೆರಳುತ್ತಿದ್ದು, ಪೆಡ್ಲರ್‌ಗಳು ಈ ಭಾಗಕ್ಕೆ ಹೆಚ್ಚು ಮಾದಕವಸ್ತು ಪೂರೈಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಜಿಲ್ಲಾವಾರು ಬಂಧಿತರ ಸಂಖ್ಯೆ	
ಮಂಗಳೂರು ನಗರ	685
ಬೆಂಗಳೂರು ನಗರ	338
ಧಾರವಾಡ	206
ಹಾಸನ	108
ಶಿವಮೊಗ್ಗ	107
ಬೆಂಗಳೂರು ಜಿಲ್ಲೆ	85
ಕೊಡಗು	63

ಹೊಸ ವರ್ಷಾಚರಣೆ ವೇಳೆ ಮಾದಕ ವಸ್ತುಗಳ ಸಾಗಾಣಿಕೆ ತಡೆಗೆ ತನಿಖಾ ಠಾಣೆಗಳನ್ನು ಸ್ಥಾಪಿಸಿ ತಪಾಸಣೆ ಕೈಗೊಳ್ಳಲಾಗಿತ್ತು. ಹೋಟೆಲ್, ರೆಸ್ಟೋರೆಂಟ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಆದರೂ, ಅಪಾರ ಪ್ರಮಾಣದ ಡ್ರಗ್ಸ್ ಪೂರೈಕೆ ಆಗಿದೆ ಎಂದಿವೆ.

ಎನ್‌ಡಿಪಿಎಸ್ ಅಡಿ ದಾಖಲಾದ ಪ್ರಕರಣಗಳು

ಜಿಲ್ಲೆ	ಪ್ರಕರಣ
ಮಂಗಳೂರು ನಗರ	674
ಶಿವಮೊಗ್ಗ	194
ಚಿಕ್ಕಮಗಳೂರು	99
ಧಾರವಾಡ	86
ಉಡುಪಿ	70
ಹಾಸನ	43
ಕೊಡಗು	30

ಹೇಗೆ ಬರುತ್ತಿದೆ?: ಕೊರಿಯರ್ ಕಂಪನಿಗಳ ಪಾರ್ಸೆಲ್, ಹೊರ ರಾಜ್ಯಗಳಿಂದ ಬಸ್, ಸರಕು ಸಾಗಣೆ ಲಾರಿ, ವಿದೇಶಗಳಿಂದ ಅಂಚೆಗಳ ಮೂಲಕ ಪಾರ್ಸೆಲ್‌ನಲ್ಲಿ ಡ್ರಗ್ಸ್ ಬರುತ್ತಿರುವುದು ತನಿಖೆಯಿಂದ ಗೊತ್ತಾಗಿದೆ.

ಐದು ವರ್ಷಗಳಲ್ಲಿನ ಬಂಧಿತರ ಸಂಖ್ಯೆ

ವರ್ಷ	ಬಂಧಿತರು
2020	5,770
2021	7,849
2022	8,267
2023	8,648
2024	3,565

'ಡ್ರಗ್ಸ್ ದಂಧೆ ತಡೆಗೆ ಸಿಐಡಿ ಘಟಕದಲ್ಲಿ ಎಡಿಜಿಪಿ ಮತ್ತು ಡಿಐಜಿಪಿ (ಮಾದಕ ವಸ್ತು ಹಾಗೂ ಸೈಬರ್ ಅಪರಾಧ) ಹುದ್ದೆಗಳನ್ನು ಸೃಜಿಸಲಾಗಿದೆ. ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಮಾದರಿಯಲ್ಲಿ ರಾಜ್ಯದಲ್ಲೂ ಮಾದಕ ದ್ರವ್ಯ ನಿಗ್ರಹ ಪಡೆ- (ಎಎನ್‌ಟಿಎಫ್) ಸ್ಥಾಪಿಸಲು ನಿರ್ಧರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.


ಸಾರಿಗೆ: ₹2,000 ಕೋಟಿ ಸಾಲಕ್ಕೆ ಒಪ್ಪಿಗೆ

ಒಂದನೇ ಪುಟದಿಂದ...

'ಸಾರಿಗೆ ಸಂಸ್ಥೆಗಳು ಉಳಿಸಿಕೊಂಡಿರುವ ಬಾಕಿಗಳನ್ನು ಪಾವತಿ ಮಾಡಲು ಯಾವುದೇ ಇತರ ಸಂಪನ್ಮೂಲಗಳು ಲಭ್ಯವಿರುವುದಿಲ್ಲ. ಹೀಗಾಗಿ ಈಗ ಡೀಸೆಲ್ ಶುಲ್ಕ ಮತ್ತು ಭವಿಷ್ಯ ನಿಧಿ ವಂತಿಗೆ ಬಾಕಿ ಪಾವತಿಗೆ ಅಗತ್ಯವಿರುವ ಸ್ವಲ್ಪ ಮೊತ್ತವನ್ನು ಪಾವತಿ ಮಾಡಲು ಸರ್ಕಾರದ ಖಾತರಿಯೊಂದಿಗೆ ಸಾಲ ಪಡೆಯಬಹುದು' ಎಂದು ಸರ್ಕಾರ ಅನುಮೋದನೆ ನೀಡಿದೆ.

'ಈ ಸಾಲದ ಮೊತ್ತ ಮತ್ತು ಸಂಬಂಧಿತ ಬಡ್ಡಿಯನ್ನು ಸಾರಿಗೆ ಸಂಸ್ಥೆಗಳೇ ಮರುಪಾವತಿಸಬೇಕು. ಸದರಿ ಮೊತ್ತವನ್ನು ಡೀಸೆಲ್ ಶುಲ್ಕ ಪಾವತಿಗೆ ಆದ್ಯತೆ ಮೇರೆಗೆ ಬಳಸತಕ್ಕದ್ದು' ಎಂದು ಸರ್ಕಾರ ಷರತ್ತು ಹಾಕಿದೆ.

ಯಾವ ಸಂಸ್ಥೆಗೆ ಎಷ್ಟು ಸಾಲ...



ಅಂಕಿ ಅಂಶಗಳು

₹2,901.53 ಕೋಟಿ ಭವಿಷ್ಯ ನಿಧಿ ವಂತಿಗೆ ಪಾವತಿ ಬಾಕಿ

₹827.37 ಕೋಟಿ ಡೀಸೆಲ್ ಶುಲ್ಕ ಪಾವತಿ ಬಾಕಿ



'ಶಕ್ತಿ' ಅಧ್ಯಯನಕ್ಕೆ ಆಂಧ್ರ ನಿಯೋಗ

ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ 'ಶಕ್ತಿ'ಯ ಅನುಷ್ಠಾನ, ಕಾರ್ಯಸಾಧ್ಯತೆ ಮತ್ತು ಪರಿಣಾಮಗಳ ಅಧ್ಯಯನ ನಡೆಸಲು ಆಂಧ್ರ ಪ್ರದೇಶ ಸರ್ಕಾರದ ಸಚಿವರು ಮತ್ತು ಅಧಿಕಾರಿಗಳ ತಂಡವು ರಾಜ್ಯಕ್ಕೆ ಭೇಟಿ ನೀಡಲಿದೆ.

ಕರ್ನಾಟಕದಂತೆಯೇ ಆಂಧ್ರ ಪ್ರದೇಶದಲ್ಲೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸವಲತ್ತು ನೀಡಲು ಚರ್ಚೆ ನಡೆಯುತ್ತಿದೆ. ಈ ಬಗ್ಗೆ ಪರಿಶೀಲನೆ ನಡೆಸಲು ಆಂಧ್ರದ ಸಾರಿಗೆ ಸಚಿವ ಮಂಡಿಪಲ್ಲಿ ರಾಮಪ್ರಸಾದ್ ಶೆಟ್ಟಿ, ಗೃಹ ಸಚಿವೆ ವಂಗಲಪುಡಿ ಅನಿತಾ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಗುಮ್ಮಟ್ಟಿ ಸಂಧ್ಯಾರಾಣಿ ಇದೇ ಜನವರಿ 2ರಂದು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ.


ಸಚಿವರ ಜತೆ 12 ಅಧಿಕಾರಿಗಳ ನಿಯೋಗವೂ ಇರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ರಾಜ್ಯದ ಅಧಿಕಾರಿಗಳ ಜತೆ ಆಂಧ್ರದ ನಿಯೋಗವು ಸಮಾಲೋಚನೆ ನಡೆಸಲಿದೆ.

ಇಸ್ರೊ 'ಸ್ಪೇಡೆಕ್ಸ್': ಏನಿದು ಯೋಜನೆ?

ಬಾಹ್ಯಾಕಾಶದಲ್ಲಿ ಎರಡು ಉಪಗ್ರಹಗಳನ್ನು ಜೋಡಿಸುವ (ಡಾಕಿಂಗ್) ಮತ್ತು ಬೇರ್ಪಡಿಸುವ (ಅನ್‌ಡಾಕಿಂಗ್) 'ಸ್ಪೇಡೆಕ್ಸ್ ಯೋಜನೆ'ಗಾಗಿ ಎರಡು ಪುಟ್ಟ ಉಪಗ್ರಹಗಳನ್ನು ಹೊತ್ತ ಪಿಎಸ್‌ಎಲ್‌ವಿ ರಾಕೆಟ್ ಅನ್ನು ಸೋಮವಾರ ರಾತ್ರಿ 10 ಗಂಟೆಗೆ ಆಂಧ್ರ ಪ್ರದೇಶದ ಶ್ರೀಹರಿಕೋಟಾದಿಂದ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ.

'ಜನವರಿ 7ರಂದು ಎರಡು ಉಪಗ್ರಹಗಳ ಡಾಕಿಂಗ್ ಪ್ರಕ್ರಿಯೆ ನಡೆಯಲಿದೆ' ಎಂದು ಇಸ್ರೊ ಹೇಳಿದೆ. ಈ ಯೋಜನೆಯು ಯಶಸ್ವಿಯಾದರೆ, ಭಾರತವು ಡಾಕಿಂಗ್ ತಂತ್ರಜ್ಞಾನ ಹೊಂದಿರುವ ನಾಲ್ಕನೇ ದೇಶವಾಗಲಿದೆ. ಅಮೆರಿಕ, ರಷ್ಯಾ ಮತ್ತು ಚೀನಾದ ಬಳಿ ಈ ತಂತ್ರಜ್ಞಾನ ಈಗಾಗಲೇ ಇದೆ.

ಬಾಹ್ಯಾಕಾಶದಲ್ಲಿ ಭಾರತೀಯ ಅಂತರಿಕ್ಷ ಕೇಂದ್ರ (ಬಿಎಸ್‌ಎ) ಸ್ಥಾಪನೆ ಸೇರಿದಂತೆ ದೇಶದ ಹಲವು ಕನಸುಗಳ ಈಡೇರಿಕೆಗೆ ಈ ಯೋಜನೆಯು ಮೊದಲ ಹೆಜ್ಜೆಯಾಗಲಿದೆ. ಒಂದೇ ಯೋಜನೆ ಸಂಬಂಧ ಒಂದೇ ಬಾರಿಗೆ ಹಲವಾರು ರಾಕೆಟ್‌ಗಳನ್ನು ಉಡ್ಡಯನ ಮಾಡಿದಾಗ ಡಾಕಿಂಗ್ ಮತ್ತು ಅನ್‌ಡಾಕಿಂಗ್ ತಂತ್ರಜ್ಞಾನವು ಬಲು ಉಪಕಾರಿಯಾಗಲಿದೆ.



ಆಧಾರ: ಪಿಟಿಐ, ಇಸ್ರೊ ಪ್ರಕಟಣೆ
ಪ್ರ. ವಾ ಗ್ರಾಫಿಕ್: ಕಣಕಾಲಮಠ

'ಇಂಡೋ–ಪೆಸಿಫಿಕ್ ವಲಯದಲ್ಲಿ ಶಾಂತಿ ಕಾಪಾಡಲು ಬದ್ಧ'

ನವದೆಹಲಿ (ಪಿಟಿಐ): ಇಂಡೋ–ಪೆಸಿಫಿಕ್ ವಲಯವನ್ನು ಸ್ವತಂತ್ರ ಹಾಗೂ ಮುಕ್ತಗೊಳಿಸಿ, ಶಾಂತಿಯುತ ಹಾಗೂ ಸೌಹಾರ್ದ ವಾತಾವರಣವನ್ನು ಕಾಪಾಡಲು ಬದ್ಧವಿರುವುದಾಗಿ 'ಕ್ವಾಡ್' ಸದಸ್ಯ ರಾಷ್ಟ್ರಗಳು ಮಂಗಳವಾರ ಪುನರುಚ್ಚರಿಸಿವೆ.

ವಿದ್ಯಾಲಯದ ವಿವಿಧ ವಿಭಾಗಗಳ 18 ವಿದ್ಯಾರ್ಥಿಗಳು, ಆರು ಅಧ್ಯಾಪಕರು ಭಾಗಿ

ಎಸ್‌ಜೆಸಿಐಟಿ 'ಬಿಜಿಎಸ್ ಅರ್ಪಿತ್' ಉಪಗ್ರಹ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಆಂಧ್ರಪ್ರದೇಶದ ಶ್ರೀಹರಿಕೋಟದಿಂದ ಸೋಮವಾರ ರಾತ್ರಿ ನಭಕ್ಕೆ ಜಿಗಿದ ಪಿಎಸ್‌ಎಲ್‌ವಿ ರಾಕೆಟ್ ಹೊತ್ತೊಯ್ದ ಪೇಲೋಡ್‌ಗಳಲ್ಲಿ ಚಿಕ್ಕಬಳ್ಳಾಪುರದ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಎಸ್‌ಜೆಸಿ ತಾಂತ್ರಿಕ ವಿದ್ಯಾಲಯದ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ 'ಬಿಜಿಎಸ್ ಅರ್ಪಿತ್' ಪೇಲೋಡ್ ಕೂಡ ಸೇರಿದೆ.

ಎಸ್‌ಜೆಸಿಐಟಿಯ ವಿವಿಧ ವಿಭಾಗಗಳ 18 ವಿದ್ಯಾರ್ಥಿಗಳು ಮತ್ತು ಆರು ಅಧ್ಯಾಪಕರ ತಂಡ ಪ್ರೊ.ಶ್ರೀಹರಿ ನೇತೃತ್ವದಲ್ಲಿ ಪೇಲೋಡ್ ವಿನ್ಯಾಸ ಮಾಡಿದೆ. ಅಮ್ಯೆಚೂರ್ ರೇಡಿಯೊ ಪೇಲೋಡ್ ಫಾರ್ ಇನ್ಫಾರ್ಮೇಶನ್ ಟ್ರಾನ್ಸ್‌ಮಿಷನ್ (ARPIT- Amateur Radio Payload for Information Transmission) ಸಂಕ್ಷಿಪ್ತ ರೂಪವನ್ನೇ ಪೇಲೋಡ್‌ಗೆ ನಾಮಕರಣ ಮಾಡಲಾಗಿದೆ.

ಬಾಹ್ಯಾಕಾಶದಲ್ಲಿ ಎರಡು ಉಪಗ್ರಹಗಳನ್ನು ಜೋಡಿಸುವ(ಡಾಕಿಂಗ್) ಸ್ಪೇಡೆಕ್ಸ್ ಯೋಜನೆಗಾಗಿ ಪಿಎಸ್‌ಎಲ್‌ವಿ ರಾಕೆಟ್ ಎರಡು ಉಪಗ್ರಹ ಮತ್ತು ಹಲವು ಪೇಲೋಡ್‌ಗಳನ್ನು ಪಿಎಸ್‌ಎಲ್‌ವಿ ರಾಕೆಟ್ ಹೊತ್ತೊಯ್ದಿದೆ.

ಎಫ್.ಎಂ ಸಂಕೇತ, ವಿಎಚ್‌ಎಫ್ ಬ್ಯಾಂಡ್ ಮೂಲಕ ಉಪಗ್ರಹದಿಂದ ಉತ್ತಮ ಗುಣಮಟ್ಟದ ಧ್ವನಿ, ಸಂದೇಶ, ಛಾಯಾಚಿತ್ರ, ವಿಡಿಯೊಗಳನ್ನು ಭೂಮಿಗೆ ರವಾನಿಸಲು ಅನುಕೂಲವಾಗುವಂತೆ 'ಬಿಜಿಎಸ್ ಅರ್ಪಿತ್' ಪೇಲೋಡ್ ವಿನ್ಯಾಸಗೊಳಿಸಲಾಗಿದೆ.

ಬೆಂಗಳೂರಿನ ಅನಂತ್ ಟೆಕ್ನಾಲಜೀಸ್ ಮತ್ತು ಹೈದರಾಬಾದ್‌ನ ಆಸ್ಟ್ರಾ ಮೈಕ್ರೊವೇವ್‌ನಲ್ಲಿ ಪರೀಕ್ಷಿಸಿದ ನಂತರ ತಿರುವನಂತಪುರದ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರ ಮತ್ತು ಶ್ರೀಹರಿಕೋಟಾ ಉಡಾವಣಾ ಕೇಂದ್ರಗಳು ಈ ಮಾದರಿಗೆ ಅಂತಿಮ ಮುದ್ರೆ ಒತ್ತಿವೆ.

'ಎರಡು ವರ್ಷಗಳಿಂದ ನಮ್ಮ ವಿದ್ಯಾಲಯದಲ್ಲಿಯೇ 'ಬಿಜಿಎಸ್ ಅರ್ಪಿತ್' ಪೇಲೋಡ್ ಅಭಿವೃದ್ಧಿಗೊಳಿಸಲಾಗಿದೆ. ಇದು ಸಂವಹನ ಕ್ಷೇತ್ರದಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಲಿದೆ' ಎಂದು ಎಸ್‌ಜೆಸಿಐಟಿ ರಿಜಿಸ್ಟ್ರಾರ್ ಸುರೇಶ್ ತಿಳಿಸಿದ್ದಾರೆ.



ಬಿಜಿಎಸ್ ಅರ್ಪಿತ್ ಪೇಲೋಡ್ ಅಭಿವೃದ್ಧಿಗೊಳಿಸಿದ ತಂಡದ ಜೊತೆ ಚಿಕ್ಕಬಳ್ಳಾಪುರ ಎಸ್‌ಜೆಸಿಐಟಿ ಪ್ರಾಂಶುಪಾಲ ಜಿ.ಟಿ. ರಾಜು ಮತ್ತು ರಿಜಿಸ್ಟ್ರಾರ್ ಸುರೇಶ್

ಜನವರಿಯಲ್ಲಿ 100ನೆಯ ಉಡಾವಣೆ

ಚೆನ್ನೈ: ಶ್ರೀಹರಿಕೋಟದಲ್ಲಿ ಇರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರವು ಜನವರಿಯಲ್ಲಿ ನೂರನೆಯ ಉಡಾವಣಾ ವಾಹನವನ್ನು ನಭಕ್ಕೆ ಕಳುಹಿಸಿದ ದಾಖಲೆ ಬರೆಯಲಿದೆ. ಜನವರಿಯಲ್ಲಿ ಇಲ್ಲಿಂದ ಜಿಎಸ್‌ಎಲ್‌ವಿ ರಾಕೆಟ್ ಮೂಲಕ ಉಪಗ್ರಹವೊಂದನ್ನು ಹಾರಿಬಿಡಲಾಗುತ್ತದೆ.


ಸ್ಪೇಡೆಕ್ಸ್ ಉಡಾವಣೆಯ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, 'ಸ್ಪೇಡೆಕ್ಸ್ ರಾಕೆಟ್ ಉಡಾವಣೆಯು ಈ ಕೇಂದ್ರದಿಂದ ನಡೆದಿರುವ 99ನೆಯ ಉಡಾವಣೆ' ಎಂದರು. ಶ್ರೀಹರಿಕೋಟದಿಂದ ಆಗಸಕ್ಕೆ ಚಿಮ್ಮಿದ ಮೊದಲ ಉಡಾವಣಾ ವಾಹನ ಎಸ್‌ಎಲ್‌ವಿ–ಇ–01.

ಬೆಂಗಳೂರಿನ ಎಟಿಎಲ್‌ನಲ್ಲಿ ಉಪಗ್ರಹಗಳ ನಿರ್ಮಾಣ

ನವದೆಹಲಿ (ಪಿಟಿಐ): 'ಸ್ಪೇಡೆಕ್ಸ್' ಬಾಹ್ಯಾಕಾಶ ಯೋಜನೆಯ 'ಡಾಕಿಂಗ್' ಪ್ರಯೋಗದ ಉಪಗ್ರಹಗಳಾದ 'ಚೇಸರ್' (ಸ್ಪೇಡೆಕ್ಸ್ ಎ) ಹಾಗೂ 'ಟಾರ್ಗೆಟ್'(ಸ್ಪೇಡೆಕ್ಸ್ ಬಿ)ಅನ್ನು ಇದೇ ಮೊದಲ ಬಾರಿಗೆ ದೇಶೀಯ ಉದ್ಯಮವೊಂದು ನಿರ್ಮಿಸಿದೆ ಎಂದು ಇಸ್ರೊ ಹೇಳಿದೆ.

ಈ ಉಪಗ್ರಹಗಳನ್ನು ಬೆಂಗಳೂರಿನ ಅನಂತ ಟೆಕ್ನಾಲಜೀಸ್ ಲಿಮಿಟೆಡ್(ಎಟಿಎಲ್) ನಿರ್ಮಿಸಿ, ಪರೀಕ್ಷೆಗೆ ಒಳಪಡಿಸಿದೆ. 'ಈವರೆಗೆ ದೊಡ್ಡ ಉಪಗ್ರಹಗಳನ್ನು ಉದ್ಯಮಗಳು ನಿರ್ಮಿಸಿಲ್ಲ. ಇದೇ ಮೊದಲ ಬಾರಿಗೆ ಬಾಹ್ಯಾಕಾಶ ಕ್ಷೇತ್ರದ ಉದ್ಯಮವೊಂದು ಇಂತಹ ಕಾರ್ಯ ಮಾಡಿದೆ' ಎಂದು ಯು.ಆರ್.ರಾವ್ ಉಪಗ್ರಹ ಕೇಂದ್ರ (ಯುಆರ್‌ಎಸ್‌ಸಿ) ನಿರ್ದೇಶಕ ಎಂ.ಶಂಕರನ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು 109



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,644
ಇಂದಿನ ಅಂತ್ಯ	23,644
▼	0.10
ದಿನದ ಕನಿಷ್ಠ	23,460

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹560
12 ಕ್ಕೆ	₹80
ಮೈಸೂರು	
100ಕ್ಕೆ	₹563

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹222-622

ದ್ವಿತಳಿ (ಬಿ.ವಿ) ₹263-752

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹187

ಆರ್‌ಎಸ್‌ಎಸ್-5 ₹181

ಗುಡ್ ಲಾಟ್ ₹175

(ಪ್ರತಿ ಕೆ.ಜಿಗೆ)

ವಿಆರ್‌ಎಸ್ ಜಾರಿಗೆ ನೌಕರರ ವಿರೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಎರಡನೇ ಸುತ್ತಿನ ಸ್ವಯಂ ನಿವೃತ್ತಿ ಯೋಜನೆ (ವಿಆರ್‌ಎಸ್) ಜಾರಿ ನಿರ್ಧಾರದಿಂದ ಹಿಂದೆ ಸರಿಯುವಂತೆ ನೌಕರರ ಒಕ್ಕೂಟವು ಬಿಎಸ್‌ಎನ್‌ಎಲ್ ಆಡಳಿತ ವಿಭಾಗವನ್ನು ಒತ್ತಾಯಿಸಿದೆ.

‘ಬಿಎಸ್‌ಎನ್‌ಎಲ್ ಆರ್ಥಿಕ ಸಂಕಷ್ಟಕ್ಕೆ ನೌಕರರು ಕಾರಣರಲ್ಲ, ಬದಲಾಗಿ ಆದಾಯ ಹೆಚ್ಚಳಕ್ಕೆ ಕ್ರಮ ಕೈಗೊಳ್ಳುವಲ್ಲಿ ಆಡಳಿತ ವಿಭಾಗ ವಿಫಲವಾಗಿದೆ’ ಎಂದು ಬಿಎಸ್‌ಎನ್‌ಎಲ್ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪಿ. ಅಭಿಮನ್ಯು ಅವರು ಸಂಸ್ಥೆಗೆ ಬರೆದಿರುವ ಪತ್ರದಲ್ಲಿ ಆರೋಪಿಸಿದ್ದಾರೆ.



ಜಾಗತಿಕ ಬಿಕ್ಕಟ್ಟು: 10 ಗ್ರಾಂಗೆ ₹90 ಸಾವಿರ ತಲುಪುವ ನಿರೀಕ್ಷೆ?

ಚಿನ್ನದ ಧಾರಣೆ ನಾಗಾಲೋಟ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿಯೂ ಹಳದಿ ಲೋಹದ ಬೆಲೆ ಏರಿಕೆ ಮುಂದುವರಿಯುವ ನಿರೀಕ್ಷೆಯಿದ್ದು, 10 ಗ್ರಾಂಗೆ ₹85 ಸಾವಿರಕ್ಕೆ ತಲುಪಬಹುದು. ಸದ್ಯ ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಬಿಕ್ಕಟ್ಟು ಹಾಗೂ ಆರ್ಥಿಕ ಬೆಳವಣಿಗೆಯ ಅನಿಶ್ಚಿತತೆ ಶಮನಗೊಳ್ಳದಿದ್ದರೆ ದೇಶೀಯ ಮಾರುಕಟ್ಟೆಯಲ್ಲಿ ₹90 ಸಾವಿರಕ್ಕೆ ಮುಟ್ಟುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ಕೆಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಕಡಿತಕ್ಕೆ ಮುಂದಾಗಿವೆ. ಹಣದ ಪೂರೈಕೆ ಹೆಚ್ಚಿಸುವ ವಿತ್ತೀಯ ನೀತಿಯನ್ನು ಅನುಸರಿಸುತ್ತಿವೆ. ಮತ್ತೊಂದೆಡೆ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತದ ಹಾದಿ ಹಿಡಿದಿದೆ. ರಷ್ಯಾ–ಉಕ್ರೇನ್, ಇಸ್ರೇಲ್–ಇರಾನ್ ನಡುವಿನ ಬಿಕ್ಕಟ್ಟು ಶಮನಗೊಂಡರಷ್ಟೇ ಚಿನ್ನದ ಬೆಲೆ ಇಳಿಕೆಯಾಗಬಹುದು ಎಂದು ಹೇಳಿದ್ದಾರೆ.



ಮಂಗಳವಾರ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ಬೆಲೆ ₹78,950 ಆಗಿದ್ದರೆ, ಸರಕುಗಳ ಅತಿದೊಡ್ಡ ವಿನಿಮಯ ಮಾರುಕಟ್ಟೆ ಆಗಿರುವ ಮಲ್ಟಿ ಕಮಾಡಿಟಿ ಎಕ್ಸ್‌ಚೇಂಜ್‌ನಲ್ಲಿ (ಎಂಸಿಎಕ್ಸ್) ₹76,600 ಆಗಿದೆ.

2024ರ ಆರಂಭದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಔನ್ಸ್ (28.34 ಗ್ರಾಂ) ಚಿನ್ನದ ಬೆಲೆಯು 2,062 (₹1.76 ಲಕ್ಷ) ಡಾಲರ್ ಇತ್ತು. ಅಕ್ಟೋಬರ್ 31ರಂದು 2,790 ಡಾಲರ್‌ಗೆ (₹2.38 ಲಕ್ಷ) ತಲುಪಿತ್ತು. ಹೂಡಿಕೆದಾರರಿಗೆ ಶೇ 28ರಷ್ಟು ಗಳಿಕೆ ತಂದು ಕೊಟ್ಟಿದೆ. ಜಾಗತಿಕ ಮಟ್ಟದಲ್ಲಿನ ಅನಿಶ್ಚಿತತೆಯೇ ಇದಕ್ಕೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಗಳಿಕೆ ಎಷ್ಟು?

2024ರಲ್ಲಿ ಚಿನ್ನವು ಹೂಡಿಕೆದಾರರಿಗೆ ಉತ್ತಮ ಲಾಭ ತಂದುಕೊಂಡಿದೆ. ದೇಶೀಯ ಮಾರುಕಟ್ಟೆಯಲ್ಲಿ ಶೇ 23ರಷ್ಟು ಗಳಿಕೆ ನೀಡಿದೆ. ಅಕ್ಟೋಬರ್ 30ರಂದು 10 ಗ್ರಾಂ ಚಿನ್ನದ ಬೆಲೆಯು ₹82,400ಕ್ಕೆ ಮುಟ್ಟುವ ಮೂಲಕ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿತ್ತು. ಬೆಳ್ಳಿ ಕೂಡ ಹೂಡಿಕೆದಾರರಿಗೆ ಒಳ್ಳೆಯ ಲಾಭ ತಂದುಕೊಟ್ಟಿದೆ. ಒಟ್ಟಾರೆ ಶೇ 30ರಷ್ಟು ಗಳಿಕೆ ನೀಡಿದ್ದು, ಪ್ರತಿ ಕೆ.ಜಿಗೆ ದರವು ₹1 ಲಕ್ಷ ದಾಟಿತ್ತು.

ಜಾಗತಿಕ ಬಿಕ್ಕಟ್ಟು ಸದ್ಯಕ್ಕೆ ಅಂತ್ಯಗೊಳ್ಳುವ ಮುನ್ಸೂಚನೆಗಳಿಲ್ಲ. ಜೊತೆಗೆ, ಕೇಂದ್ರೀಯ ಬ್ಯಾಂಕ್‌ಗಳಿಂದ ಚಿನ್ನದ ಖರೀದಿಯು ಮುಂದುವರಿಯಲಿದೆ. ಅಲ್ಲದೆ, ಕೆಲವು ಪ್ರಮುಖ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ದರ ಕಡಿತಕ್ಕೆ ಮುಂದಾಗಿವೆ. ಹಾಗಾಗಿ, 2025ರಲ್ಲಿಯೂ ಹಳದಿ ಲೋಹದ ಬೆಲೆ ಮತ್ತಷ್ಟು ಏರಿಕೆಯಾಗಬಹುದು ಎಂದು ಹೇಳಿದ್ದಾರೆ.

‘ಜಾಗತಿಕ ಬಿಕ್ಕಟ್ಟಿನಿಂದಾಗಿ ಚಿನ್ನದ ಮೇಲಿನ ಹೂಡಿಕೆಯು ಸುರಕ್ಷಿತವಾಗಿದೆ. ದೇಶೀಯ ಮಾರುಕಟ್ಟೆಯಲ್ಲಿ 10 ಗ್ರಾಂ ಚಿನ್ನದ ದರವು ₹85 ಸಾವಿರಕ್ಕೆ ಹಾಗೂ ಬೆಳ್ಳಿ ದರವು ಕೆ.ಜಿಗೆ ₹1.10 ಲಕ್ಷಕ್ಕೆ ಮುಟ್ಟಬಹುದು. ಬಿಕ್ಕಟ್ಟು ಮತ್ತಷ್ಟು ಉಲ್ಬಣಿಸಿದರೆ ಚಿನ್ನವು ₹90 ಸಾವಿರಕ್ಕೆ ಹಾಗೂ ಬೆಳ್ಳಿಯು ₹1.25 ಲಕ್ಷಕ್ಕೆ ತಲುಪಬಹುದು’ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಉಪಾಧ್ಯಕ್ಷ (ಸರಕು–ಕರೆನ್ಸಿಯ ಸಂಶೋಧನಾ ವಿಭಾಗ) ಜತೀನ್ ತ್ರಿವೇದಿ ತಿಳಿಸಿದ್ದಾರೆ.

ಭಾರತವು ನವೆಂಬರ್‌ನಲ್ಲಿ ಒಟ್ಟು ₹1.26 ಲಕ್ಷ ಕೋಟಿ ಮೌಲ್ಯದ ಚಿನ್ನವನ್ನು ಆಮದು ಮಾಡಿಕೊಂಡಿದ್ದು, ದಾಖಲೆಯಾಗಿದೆ.

ವಾಟ್ಸ್‌ಆ್ಯಪ್ ಪಾವತಿ: ಎಲ್ಲರಿಗೂ ಲಭ್ಯ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್ ಪಾವತಿ ಸೇವೆಗೆ ಸಂಬಂಧಿಸಿದಂತೆ ಹೇರಿದ್ದ ಮಿತಿಯನ್ನು ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಮಂಗಳವಾರ ತೆಗೆದುಹಾಕಿದೆ.

ಇನ್ನು ಮುಂದೆ ಡಿಜಿಟಲ್ ಪಾವತಿ ಸೇವೆಯಾದ ವಾಟ್ಸ್‌ಆ್ಯಪ್ ಪೇ ಎಲ್ಲಾ ಬಳಕೆದಾರರಿಗೂ ದೊರೆಯಲಿದೆ ಎಂದು ಎನ್‌ಪಿಸಿಐ ತಿಳಿಸಿದೆ. 10 ಕೋಟಿ ಬಳಕೆದಾರರಿಗಷ್ಟೇ ಯುಪಿಐ (ಏಕೀಕೃತ ಪಾವತಿ ವ್ಯವಸ್ಥೆ) ಆಧರಿತ ಪಾವತಿ ಸೌಲಭ್ಯ ಕಲ್ಪಿಸಲಾಗಿತ್ತು. ಯುಪಿಐ ಮಾರ್ಗಸೂಚಿ ಮತ್ತು ಸುತ್ತೋಲೆಗಳ ಪ್ರಕಾರ ವಾಟ್ಸ್‌ಆ್ಯಪ್ ಪೇ ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದೆ.

ಸಣ್ಣ ಉಳಿತಾಯ: ಬಡ್ಡಿದರ ಯಥಾಸ್ಥಿತಿ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕಕ್ಕೆ ಅನ್ವಯಿಸುವಂತೆ ವಿವಿಧ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡದೆ ಕೇಂದ್ರ ಸರ್ಕಾರವು ಯಥಾಸ್ಥಿತಿ ಕಾಯ್ದುಕೊಂಡಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿದ್ದ ಬಡ್ಡಿದರವು ಮಾರ್ಚ್ ತ್ರೈಮಾಸಿಕಕ್ಕೂ (ಜನವರಿ 1ರಿಂದ ಮಾರ್ಚ್ 31ರ ವರೆಗೆ) ಅನ್ವಯವಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಮಂಗಳವಾರ ತಿಳಿಸಿದೆ. ಪ್ರಸ್ತುತ ಸುಕನ್ಯಾ ಸಮೃದ್ಧಿ ಶೇ 8.2, ಪಿಪಿಎಫ್ ಶೇ 7.1, ಅಂಚೆ ಕಚೇರಿಯ ಉಳಿತಾಯ ಠೇವಣಿ ಶೇ 4, ಕಿಸಾನ್ ವಿಕಾಸ್ ಪತ್ರ ಶೇ 7.5, ಎನ್‌ಎಸ್‌ಸಿ ಶೇ 7.7 ಹಾಗೂ ಮಾಸಿಕ ಉಳಿತಾಯ ಯೋಜನೆಗೆ ಶೇ 7.4ರಷ್ಟು ಬಡ್ಡಿದರ ನಿಗದಿಪಡಿಸಲಾಗಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಯನಾ ಶ್ರೀನಿವಾಸ್, ಶಿವಮೊಗ್ಗ.

• **ಪ್ರಶ್ನೆ:** ನಾನು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ವೈಯಕ್ತಿಕ ಸಾಲ ಪಡೆಯಬೇಕೆಂದಿದ್ದೇನೆ. ನನ್ನ ಮಿತ್ರರ ಜೊತೆ ಇತ್ತೀಚೆಗೆ ಮಾತುಕತೆ ನಡೆಸುತ್ತಿದ್ದಾಗ ಪದೇ ಪದೇ ಸಿಬಿಲ್ ಸ್ಕೋರ್ ಬಗೆಗಿನ ಮಾಹಿತಿ ಅನ್ವೇಷಿಸುತ್ತಿದ್ದರೆ ನಮ್ಮ ಒಟ್ಟಾರೆ ಕ್ರೆಡಿಟ್ ಸ್ಕೋರ್ ಕಡಿಮೆ ಆಗುತ್ತದೆ ಎಂದು ಹೇಳಿದರು. ಈ ವಿಚಾರ ಸರಿಯೇ. ನಮ್ಮ ಕ್ರೆಡಿಟ್ ಸ್ಕೋರ್ ಬಗ್ಗೆ ತಿಳಿದು ಸರಿಪಡಿಸಿಕೊಳ್ಳಲು ನಮಗೆ ಅವಕಾಶ ಇಲ್ಲದಿದ್ದರೆ ಹೇಗೆ? ಈ ಬಗ್ಗೆ ಸಾಲ ಸಿಗಬಹುದೇ ಇಲ್ಲವೇ ಎಂಬ ಬಗ್ಗೆ ಆತಂಕ ಇದೆ? ಇದು ಖಾಸಗಿ ಸಂಸ್ಥೆ ನೀಡುವ ಮೌಲ್ಯಾಂಕ ಆದ ಕಾರಣ ಇದನ್ನು ನಾವು ಪರಿಗಣಿಸಬೇಕೆ ಹಾಗೂ ಈ ಸಂಸ್ಥೆಗೆ ಮಾನ್ಯತೆ ಇದೆಯೇ?

ಉತ್ತರ: ಈ ಹಿಂದೆ ಕ್ರೆಡಿಟ್ ಇನ್ಫಾರ್ಮೇಷನ್ ಬ್ಯೂರೊ (ಇಂಡಿಯಾ) ಲಿಮಿಟೆಡ್ ಎಂದು ಕರೆಯಲ್ಪಡುತ್ತಿದ್ದ ಇಂದಿನ ಸಿಬಿಲ್ ಲಿಮಿಟೆಡ್ ಸಂಸ್ಥೆ ‘ಸಿಬಿಲ್ ಸ್ಕೋರ್’ ಎನ್ನುವ ರೇಟಿಂಗ್ ನೀಡುತ್ತಾ ಬಂದಿದೆ. ಇದು ವೈಯಕ್ತಿಕ ಆರ್ಥಿಕ ಕ್ಷಮತೆಯ ಮಾಹಿತಿ ನೀಡುತ್ತದೆ. ಇದು ಹೆಚ್ಚಿದ್ದಷ್ಟು ಉತ್ತಮ. ಇದು ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧಿಕೃತ ಮಾನ್ಯತೆ ಮೇರೆಗೆ ಸಾಲಗಾರರ ಬಗ್ಗೆ ಮಾಹಿತಿ ಸಂಗ್ರಹಿಸುವ ಹಾಗೂ ಅಗತ್ಯವುಳ್ಳವರಿಗೆ ಮಾಹಿತಿ ನೀಡುವ ಅಧಿಕಾರ ಹೊಂದಿದೆ.

ಬ್ಯಾಂಕ್ ಹಾಗೂ ಸಾಲ ನೀಡುವ ಯಾವುದೇ ಸಂಸ್ಥೆಗೆ ಸಾಲಗಾರನ ಆರ್ಥಿಕ ಸಾಮರ್ಥ್ಯ ಅರಿತು ಸಾಲ ನೀಡಬೇಕು. ಸಂಭಾವ್ಯ ಆರ್ಥಿಕ ವಂಚನೆಗಳನ್ನು ತಪ್ಪಿಸಬೇಕೆನ್ನುವುದು ಇದರ ಉದ್ದೇಶ.

ಹೀಗಾಗಿ ಈ ಸಂಸ್ಥೆಯ ಬಗ್ಗೆ ಅನಗತ್ಯ ಸಂದೇಹ ಬೇಡ ಹಾಗೂ ಇದು ಯಾವುದೇ ಸಾಲ ಪಡೆಯುವಾಗ ವೈಯಕ್ತಿಕ ಸಾಲಗಾರರಲ್ಲಿ ಕೇಳುವ ಅಥವಾ ಅವರ ಬಗ್ಗೆ ಅನ್ವೇಷಿಸುವ ಮೊದಲ ಮಾಹಿತಿಯಾಗಿದೆ. ಎಲ್ಲ ಬ್ಯಾಂಕ್ ಹಾಗೂ ಸಾಲ ವಿತರಿಸುವ ಸಂಸ್ಥೆಗಳು ಇದರ ಸದಸ್ಯರಾದ ಕಾರಣ ಸಾಲದ ಸುರಕ್ಷತೆ ಹಾಗೂ ಸಾಲಕ್ಕೆ ಸಂಬಂಧಿಸಿದ ಆರ್ಥಿಕ ಚಟುವಟಿಕೆಗಳ ಮೇಲೆ ನಿಗಾ ಇಟ್ಟು 300ರಿಂದ ಗರಿಷ್ಠ 900ರ ತನಕ ಇರುವ ಮೌಲ್ಯಾಂಕ ನೀಡಲಾಗುತ್ತದೆ.

ಸ್ವತಃ ನಮ್ಮ ಅಂಕ ಪರಿಶೀಲಿಸುವುದಕ್ಕೆ ಅವಕಾಶ ಇದೆ. ಇದನ್ನು ಸಾಫ್ಟ್ ಎನ್‌ಕ್ವೈರಿ ಎಂದು ಕರೆಯಲಾಗುತ್ತದೆ. ಯಾವುದೇ ಸಾಲ ನೀಡುವ ಸಂಸ್ಥೆ- ಬ್ಯಾಂಕ್ ಮಾಡುವ ಅಂಕ ಪರಿಶೀಲನೆಯನ್ನು ಹಾರ್ಡ್ ಎನ್‌ಕ್ವೈರಿ ಎಂದೂ ತಿಳಿಯಲಾಗುತ್ತದೆ. ಸ್ವತಃ ಮಾಡುವ ಪರಿಶೀಲನೆಯಿಂದ ಯಾವುದೇ ಮೌಲ್ಯಾಂಕಕ್ಕೆ ಹಾನಿ ಇಲ್ಲ. ಆದರೆ, ಪದೇ ಪದೇ ಸಾಲ ಕೇಳುತ್ತಿದ್ದಂತೆ ಸಾಲ ನೀಡುವ ಸಂಸ್ಥೆಗಳು ಮಾಡುವ ಮೌಲ್ಯಾಂಕ ಪರಿಶೀಲನೆಯಿಂದ ಸ್ಕೋರಿಂಗ್ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ, ಈ ಬಗ್ಗೆ ಜಾಗರೂಕರಾಗಿರಿ ಹಾಗೂ ಅದನ್ನು ಉನ್ನತೀಕರಿಸುವ ಬಗ್ಗೆ ಕ್ರಮ ಕೈಗೊಳ್ಳಿ.

ಶಿವಾನಂದ ಹೆಬ್ಬಾರ, ರಾಜಾಜಿನಗರ, ಬೆಂಗಳೂರು.

• **ಪ್ರಶ್ನೆ:** ನನ್ನ ತಂದೆ ಸರ್ಕಾರದ ಉದ್ಯೋಗದಲ್ಲಿದ್ದರು. ನಿವೃತ್ತಿಯಾದ ನಂತರ ಪಿಂಚಣಿ ಪಡೆಯುತ್ತಿದ್ದಾರೆ. ಇತ್ತೀಚೆಗೆ ಅವರು ಕೇರಳ ರಾಜ್ಯದ ಲಾಟರಿ ಖರೀದಿಸಿದ್ದರು. ಬಹುಮಾನವಾಗಿ ₹2 ಲಕ್ಷ ಸಿಗಲಿದೆ ಎಂದು ತಿಳಿಯಿತು. ಇದನ್ನು ಮೂರು ತಿಂಗಳ ಒಳಗಾಗಿ ಸಂಬಂಧಪಟ್ಟ ಕಚೇರಿಗೆ ಹೋಗಿ ಅಗತ್ಯ ದಾಖಲೆಗಳೊಂದಿಗೆ ಪ್ಯಾನ್ ಸಂಖ್ಯೆ ಕೊಡುವ ಮೂಲಕ ಪಡೆಯಬಹುದೆಂದು ತಿಳಿದುಕೊಂಡೆವು.

ನಮಗೆ ಲಾಟರಿ ಬಗೆಗಿನ ಆದಾಯ ತೆರಿಗೆ ನಿಯಮಾವಳಿಗಳ ಬಗ್ಗೆ ತಿಳಿಸಿ. ಅವರ ಹೆಸರಲ್ಲಿ ತೆರಿಗೆ ಬರುತ್ತದೆಯೇ? ತಿಂಗಳ ಪಿಂಚಣಿ ಸುಮಾರು ₹25 ಸಾವಿರ ಬರುತ್ತಿದೆ. ತೆರಿಗೆ ಇಲ್ಲವಾದರೆ ರಿಫಂಡ್ ಪಡೆಯಬಹುದೇ? ಈ ಬಹುಮಾನ ನಗದೀಕರಿಸಿದರೆ ಆದಾಯ ಘೋಷಣೆ ಕಡ್ಡಾಯವೇ?

ಉತ್ತರ: ನೀವು ನೀಡಿದ ಮಾಹಿತಿಯಂತೆ ತಂದೆಯವರು ವಾರ್ಷಿಕವಾಗಿ ₹3 ಲಕ್ಷವನ್ನು ಪಿಂಚಣಿ ರೂಪದಲ್ಲಿ ಪಡೆಯುತ್ತಿದ್ದಾರೆ. ಪ್ರಸ್ತುತ ₹2 ಲಕ್ಷದ ಲಾಟರಿ ಆದಾಯ ಸಿಗುವುದಾಗಿ ತಿಳಿಸಿದ್ದೀರಿ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194ಬಿ ಪ್ರಕಾರ ₹10 ಸಾವಿರ ಮತ್ತು ಅದಕ್ಕಿಂತ ಹೆಚ್ಚಿನ ಎಲ್ಲಾ ಮೊತ್ತದ ಮೇಲೆ ಶೇ 30ರ ಮೂಲ ತೆರಿಗೆ ಕಡಿತ ಅನ್ವಯವಾಗುತ್ತದೆ. ಸೆಸ್ ಮತ್ತು ಹೆಚ್ಚುವರಿ ಶುಲ್ಕದೊಂದಿಗೆ, ಪರಿಣಾಮಕಾರಿ ದರವು ಶೇ 31.2 ಆಗಿರುತ್ತದೆ. ಬಹುಮಾನದ ಹಣ ವಿತರಿಸುವ ಕಂಪನಿ ಅಥವಾ ಸಂಸ್ಥೆಗಳು ತೆರಿಗೆ ಕಡಿತಗೊಳಿಸಿ ನಿವ್ವಳ ಮೊತ್ತವನ್ನು ಕೊಡಬೇಕೆಂಬುದು ನಿಯಮ.

ಈ ದರವು ವೈಯಕ್ತಿಕ ತೆರಿಗೆ ದರದಿಂದ ಸ್ವತಂತ್ರವಾಗಿರುತ್ತದೆ. ಅಂದರೆ ವ್ಯಕ್ತಿಯ ಆದಾಯವು ಶೇ 5, 10, 15 ಇತ್ಯಾದಿ ದರದಲ್ಲಿದ್ದರೂ, ಲಾಟರಿ ಬಹುಮಾನಗಳಿಂದ ಗಳಿಸಿದ ಆದಾಯದ ಮೇಲೆ ಶೇ 31.20ರಷ್ಟು ತೆರಿಗೆ ವಿಧಿಸಲಾಗುತ್ತದೆ. ಈ ಆದಾಯಕ್ಕೆ ಸಂಬಂಧಿಸಿ ಯಾವುದೇ ಖರ್ಚು ಪಡೆಯುವುದಕ್ಕೆ ಅವಕಾಶವಿರುವುದಿಲ್ಲ. ಇತರೆ ನಷ್ಟಗಳೊಡನೆ ವಜಾ ಮಾಡುವ ಅವಕಾಶವಿಲ್ಲ. ಅಲ್ಲದೆ, ಹಳೆಯ ತೆರಿಗೆ ನಿಯಮ ಅನುಸರಿಸಿದರೂ ಆದಾಯದಿಂದ ಸೆಕ್ಷನ್ 80ಸಿ ಅಥವಾ 80ಡಿ ಅಥವಾ ಯಾವುದೇ ಇತರ ಕಡಿತ/ ಭತ್ಯೆ ಅಡಿಯಲ್ಲಿ ರಿಯಾಯಿತಿ ಪಡೆಯಲು ಅವಕಾಶವಿಲ್ಲ.

ಮೂಲ ವಿನಾಯಿತಿ ಮಿತಿ ಮತ್ತು ಆದಾಯ ತೆರಿಗೆ ಸ್ಲ್ಯಾಬ್ ದರದ ಪ್ರಯೋಜನವು ಈ ಆದಾಯಕ್ಕೆ ಅನ್ವಯಿಸುವುದಿಲ್ಲ. ಸ್ವೀಕರಿಸಿದ ಸಂಪೂರ್ಣ ಮೊತ್ತವು ಶೇ 31.20ರ ಫ್ಲಾಟ್ ದರದಲ್ಲಿ ತೆರಿಗೆಗೆ ಒಳಪಡುತ್ತದೆ. ತೆರಿಗೆ ಕಡಿತಗೊಳ್ಳುವ ಕಾರಣ ಆ ಮೊತ್ತ ನೀವು ವಾರ್ಷಿಕ ರಿಟರ್ನ್ಸ್ ಸಲ್ಲಿಸುವಾಗ ಬಳಸಿಕೊಳ್ಳಬಹುದು.

ಲಾಟರಿ ಆದಾಯದ ಮೂಲಕ ಪಡೆದ ಮೊತ್ತವನ್ನು ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಘೋಷಿಸದಿದ್ದರೆ, ಮುಂದೆ ಈ ಬಗ್ಗೆ ನೋಟಿಸ್ ಬರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಅಪೂರ್ಣ ಮಾಹಿತಿ ಸಲ್ಲಿಕೆ ಬಗ್ಗೆಯೂ ಸೆಕ್ಷನ್ 270ಎ ಅಡಿ ದಂಡ ಅನ್ವಯವಾಗುತ್ತದೆ. ಇಂತಹ ಮೊತ್ತ ಸ್ವೀಕರಿಸುವವರ ಪ್ಯಾನ್ ಆಧಾರದಲ್ಲಿ ಬಹುಮಾನದ ಮೊತ್ತ ನೀಡುವ ಕಾರಣ ಆದಾಯ ಘೋಷಿಸದಿದ್ದರೂ ಸರ್ಕಾರದ ಬಳಿ ಮಾಹಿತಿ ಕಲೆ ಹಾಕುವ ಸೌಲಭ್ಯ ಇರುವ ಕಾರಣ, ಮುಂದೆ ಆದಾಯ ತೆರಿಗೆಯ ನೋಟಿಸ್ ನಿರೀಕ್ಷಿಸುವುದಕ್ಕಿಂತ ಆದಾಯ ಘೋಷಿಸುವುದೇ ಉತ್ತಮ.

ಈ ಮೇಲಿನ ಮಾಹಿತಿಯಂತೆ ನಿಮಗೆ ಬಂದಿರುವ ಆದಾಯವನ್ನು ಇತರೆ ಯಾವುದೇ ತೆರಿಗೆ ಆದಾಯಕ್ಕೆ ಹೊಂದಾಣಿಕೆ ಮಾಡದೆ ಪ್ರತ್ಯೇಕವಾಗಿ ಘೋಷಿಸಬೇಕಾಗುತ್ತದೆ. ಅಲ್ಲದೆ, ಒಂದು ವೇಳೆ ನಿಮಗೆ ಇತರೆ ಯಾವುದೇ ತೆರಿಗೆ ಆದಾಯ ಇಲ್ಲದಿದ್ದಾಗಲೂ ಈ ಮೊತ್ತಕ್ಕೆ ವಿನಾಯಿತಿ ಇಲ್ಲ. ಹೀಗಾಗಿ, ರಿಫಂಡ್ ಪಡೆಯುವ ಅವಕಾಶ ಇರುವುದಿಲ್ಲ. ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ಈ ಸಂಬಂಧ ಮಾಹಿತಿ ನೀಡುವ ವಿಭಾಗದಲ್ಲಿ ಸಮರ್ಪಕವಾಗಿ ಭರಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

ವರ್ಷದಲ್ಲಿ ಸೆನ್ಸೆಕ್ಸ್ ಶೇ 8ರಷ್ಟು ಏರಿಕೆ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 2024ರಲ್ಲಿ ಶೇ 8.16ರಷ್ಟು ಏರಿಕೆ ಕಂಡಿದ್ದು, ಹೂಡಿಕೆದಾರರ ಸಂಪತ್ತು ₹77.66 ಲಕ್ಷ ಕೋಟಿ ಏರಿಕೆಯಾಗಿದೆ.



ಮಾರುಕಟ್ಟೆಯು ಹಲವು ಬಾರಿ ಗೂಳಿಯ ನಾಗಾಲೋಟಕ್ಕೆ ಸಾಕ್ಷಿಯಾದರೂ, ಕರಡಿ ಕುಣಿತ ಕೂಡ ಕಂಡಿದೆ. ಜಾಗತಿಕ ಆರ್ಥಿಕ ಅನಿಶ್ಚಿತತೆ ನಡುವೆಯೂ ದೇಶೀಯ ಮಾರುಕಟ್ಟೆಯು ಹೂಡಿಕೆದಾರರಿಗೆ ಒಳ್ಳೆಯ ಲಾಭ ತಂದುಕೊಟ್ಟಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

‘ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಜನವರಿಯಿಂದ ಸೆಪ್ಟೆಂಬರ್‌ವರೆಗೆ ಸ್ಥಿರವಾದ ಏರಿಕೆ ದಾಖಲಿಸಿದೆ. 26,277 ಅಂಶಕ್ಕೆ ಮುಟ್ಟುವ ಮೂಲಕ ಹೊಸ ದಾಖಲೆ ಬರೆದಿತ್ತು. ಸತತ ಒಂಬತ್ತನೇ ವರ್ಷವೂ ಹೂಡಿಕೆದಾರರಿಗೆ ನಿಫ್ಟಿ ಒಳ್ಳೆಯ ಲಾಭ ತಂದು ಕೊಟ್ಟಿದೆ’ ಎಂದು ಮೆಹ್ತಾ ಈಕ್ವಿಟೀಸ್ ಸಂಸ್ಥೆಯ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಸೆನ್ಸೆಕ್ಸ್ ಒಟ್ಟಾರೆ 5,898 ಅಂಶ ಏರಿಕೆ ಕಂಡಿದೆ. ಸೆಪ್ಟೆಂಬರ್ 27ರಂದು 85,978 ಅಂಶ ತಲುಪುವ ಮೂಲಕ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿತ್ತು.

ರೂಪಾಯಿ ಮೌಲ್ಯ 12 ಪೈಸೆ ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 12 ಪೈಸೆ ಕುಸಿದಿದೆ. ವಹಿವಾಟಿನ ಅಂತ್ಯಕ್ಕೆ ಪ್ರತೀ ಡಾಲರ್ ಮೌಲ್ಯ ₹85.64 ಆಗಿದೆ.

ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳದ ಹೊರಹರಿವು ಮುಂದುವರಿದಿದೆ. ಮತ್ತೊಂದೆಡೆ ಡಾಲರ್ ಮೌಲ್ಯ ಬಲಗೊಳ್ಳುತ್ತಿದೆ. ಇದರಿಂದ 2024ರಲ್ಲಿ ರೂಪಾಯಿ ಮೌಲ್ಯವು ಶೇ 3ರಷ್ಟು ಕುಸಿತ ಕಂಡಿದೆ.

ವಿತ್ತೀಯ ಕೊರತೆ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು 2024–25ನೇ ಆರ್ಥಿಕ ವರ್ಷದ ಎಂಟು ತಿಂಗಳ ಅವಧಿಯಲ್ಲಿ ಇಡೀ ವರ್ಷದ ಗುರಿಯ ಶೇ 52.5ರಷ್ಟು ಆಗಿದೆ.

ಏಪ್ರಿಲ್‌ನಿಂದ ನವೆಂಬರ್ ಅವಧಿಯಲ್ಲಿ ವಿತ್ತೀಯ ಕೊರತೆಯು ₹8.47 ಲಕ್ಷ ಕೋಟಿ ಆಗಿದೆ ಎಂದು ಲೆಕ್ಕಪತ್ರಗಳ ಮಹಾ ನಿಯಂತ್ರಕರು (ಸಿಜಿಎ) ಮಂಗಳವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

2023–24ರಲ್ಲಿ ವಿತ್ತೀಯ ಕೊರತೆಯು ಶೇ 5.6ರಷ್ಟಿತ್ತು. 2024–25ರಲ್ಲಿ ಇದನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.9ಕ್ಕೆ ತಗ್ಗಿಸಲು ಸರ್ಕಾರವು ಬಜೆಟ್‌ನಲ್ಲಿ ಗುರಿ ನಿಗದಿಪಡಿಸಿದೆ. ಇದು ಮೌಲ್ಯದ ಲೆಕ್ಕದಲ್ಲಿ ₹16.13 ಲಕ್ಷ ಕೋಟಿ ಆಗಿದೆ.

ಏಪ್ರಿಲ್‌ನಿಂದ ನವೆಂಬರ್ ಅವಧಿಯಲ್ಲಿ ₹14.43 ಲಕ್ಷ ಕೋಟಿ ನಿವ್ವಳ ತೆರಿಗೆ ಸಂಗ್ರಹವಾಗಿದೆ. ಇದೇ ಅವಧಿಯಲ್ಲಿ ಸರ್ಕಾರದ ವೆಚ್ಚವು ₹27.47 ಲಕ್ಷ ಕೋಟಿ ಆಗಿದೆ (ಶೇ 56.9ರಷ್ಟು).

ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ಕಚ್ಚಾ ತೈಲ, ನೈಸರ್ಗಿಕ ಅನಿಲ ಸೇರಿ ಪ್ರಮುಖ ಎಂಟು ಮೂಲಸೌಕರ್ಯ ವಲಯದ ಉತ್ಪಾದನೆಯು ನವೆಂಬರ್‌ನಲ್ಲಿ ಇಳಿಕೆಯಾಗಿದೆ.

ಕಳೆದ ವರ್ಷದ ನವೆಂಬರ್‌ನಲ್ಲಿ ಶೇ 7.9ರಷ್ಟು ಪ್ರಗತಿ ದಾಖಲಾಗಿತ್ತು. ಈ ಬಾರಿ ಶೇ 4.3ಕ್ಕೆ ಇಳಿದಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

ಅಕ್ಟೋಬರ್ ತಿಂಗಳಲ್ಲಿ ಶೇ 3.7ರಷ್ಟು ಪ್ರಗತಿಯಾಗಿತ್ತು. ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನ, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಎಂಟು ವಲಯಗಳಾಗಿವೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ನವೆಂಬರ್ ಅವಧಿಯಲ್ಲಿ ಈ ವಲಯಗಳ ಬೆಳವಣಿಗೆಯು ಶೇ 4.2ರಷ್ಟಿದೆ. 2023–24ರ ಇದೇ ಅವಧಿಯಲ್ಲಿ ಶೇ 8.7ರಷ್ಟಿತ್ತು ಎಂದು ತಿಳಿಸಿದೆ.

ಹಾಲಿನ ವಿಶೇಷ ಪ್ರೋತ್ಸಾಹಧನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು (ಡಿಕೆಎಂಯು) ಹೈನುಗಾರರಿಗೆ ನೀಡುತ್ತಿರುವ ವಿಶೇಷ ಪ್ರೋತ್ಸಾಹಧನವನ್ನು ₹1ರಿಂದ ₹1.50ಕ್ಕೆ ಹೆಚ್ಚಿಸಿದೆ.

ಪರಿಷ್ಕೃತ ಪ್ರೋತ್ಸಾಹಧನವು ಜನವರಿ 1ರಿಂದ ಅನ್ವಯವಾಗಲಿದೆ ಎಂದು ಒಕ್ಕೂಟದ ಅಧ್ಯಕ್ಷ ಸುಚರಿತ ಶೆಟ್ಟಿ ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಹಾಲಿನ ಉತ್ಪಾದನಾ ವೆಚ್ಚವು ಬೇರೆ ಜಿಲ್ಲೆಗಳಿಗಿಂತ ಜಾಸ್ತಿ ಇದೆ. ಹಾಗಾಗಿ, ಹಾಲಿನ ದರ ಪರಿಷ್ಕರಣೆ ವೇಳೆ ಪ್ರತಿ ಲೀಟರ್ ಹಾಲಿಗೆ ಬೇರೆ ಜಿಲ್ಲೆಗಳಿಗಿಂತ ₹2 ಹೆಚ್ಚು ದರ ನಿಗದಿಪಡಿಸುವಂತೆ ಸರ್ಕಾರದ ಹಾಗೂ ಕೆಎಂಎಫ್‌ನ ಅನುಮತಿ ಕೋರಿದ್ದೇವೆ’ ಎಂದರು.

‘ನಮ್ಮ ಒಕ್ಕೂಟದ ವ್ಯಾಪ್ತಿಯಲ್ಲಿ ಕೆಲ ವರ್ಷಗಳ ಹಿಂದೆ ಉತ್ಪಾದನಾ ವೆಚ್ಚ ಹೆಚ್ಚಳದಿಂದಾಗಿ ಹಾಲು ಸಂಗ್ರಹ ತೀವ್ರ ಕುಸಿತ ಕಂಡಿತ್ತು. ಆಗ ಬೇರೆ ಜಿಲ್ಲೆಗಳಿಗಿಂತ ಹಾಲು ಖರೀದಿಗೆ ₹2 ಹೆಚ್ಚು ದರ ನೀಡಲು ಅನುಮತಿ ನೀಡಲಾಗಿತ್ತು. ಹಾಲಿಗೆ ರಾಜ್ಯದಾದ್ಯಂತ ಕೆಎಂಎಫ್ ಏಕರೂಪ ದರ ನಿಗದಿಪಡಿಸಿದ ಬಳಿಕ ಆ ಅವಕಾಶ ತಪ್ಪಿಹೋಗಿದೆ’ ಎಂದರು.

‘ಒಕ್ಕೂಟದ ವ್ಯಾಪ್ತಿಯಲ್ಲಿ ದೈನಂದಿನ ಹಾಲು ಉತ್ಪಾದನೆಯು ಬೇಡಿಕೆಗಿಂತ ಸುಮಾರು 2 ಲಕ್ಷ ಲೀಟರ್‌ನಷ್ಟು ಕಡಿಮೆ ಇದೆ. ಹಾಸನ, ಮಂಡ್ಯದಿಂದ ಹಾಲು ತರಿಸುತ್ತಿದ್ದೇವೆ. ನಿತ್ಯ ಸರಾಸರಿ 4.01 ಲಕ್ಷ ಲೀಟರ್ ಹಾಲು, 78 ಸಾವಿರ ಕೆ.ಜಿ ಮೊಸರು ಮಾರಾಟವಾಗುತ್ತಿದೆ’ ಎಂದು ವಿವರಿಸಿದರು.

‘ಹೆಂಡತಿ ಓಡಿ ಹೋಗುತ್ತಾಳೆ’

ಪ್ರಜಾವಾಣಿ ವಾರ್ತೆ



ಗೌತಮ್ ಅದಾನಿ

ಬೆಂಗಳೂರು: ಇನ್ಫೋಸಿಸ್ ಸಹ ಸಂಸ್ಥಾಪಕ ಎನ್. ಆರ್. ನಾರಾಯಣ ಮೂರ್ತಿ ಅವರು ‘ವಾರಕ್ಕೆ 70 ತಾಸು ಕೆಲಸ ಮಾಡಬೇಕು’ ಎಂದು ಕೆಲವು ತಿಂಗಳ ಹಿಂದೆ ಹೇಳಿದ್ದು ಪರ ವಿರೋಧ ಚರ್ಚೆಯನ್ನು ಹುಟ್ಟುಹಾಕಿತ್ತು. ‘ಹೆಂಡತಿ ಓಡಿ ಹೋಗುತ್ತಾಳೆ’ ಎನ್ನುವ ಮೂಲಕ ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಅವರು ಈ ಚರ್ಚೆಯಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಖಾಸಗಿ ಮಾಧ್ಯಮದೊಂದಿಗೆ ಮಾತನಾಡುತ್ತಾ ಅದಾನಿ ಅವರು ಈ ರೀತಿ ಹೇಳಿದ್ದಾರೆ. ‘ಖಾಸಗಿ ಬದುಕು ಮತ್ತು ಉದ್ಯೋಗವನ್ನು ಹೇಗೆ ಸರಿದೂಗಿಸಿಕೊಳ್ಳಬೇಕು ಎಂಬುದನ್ನು ಯಾರ ಮೇಲೆಯೂ ಹೇರಲು ಸಾಧ್ಯವಿಲ್ಲ. ಒಬ್ಬರು ಕುಟುಂಬದೊಂದಿಗೆ ನಾಲ್ಕು ತಾಸಿನಷ್ಟು ಸಮಯ ಕಳೆಯಬಹುದು. ಇದರಿಂದ ಅವರು ಸಂತೋಷ ಪಡೆಯಬಹುದು. ಕೆಲವರು ದಿನಕ್ಕೆ ಎಂಟು ತಾಸು ಕೆಲಸ ಮಾಡಿ ಸಂತೋಷಪಡುತ್ತಾರೆ ಎಂದಿಟ್ಟುಕೊಳ್ಳೋಣ. ಆಗ ಹೆಂಡತಿ ಓಡಿ ಹೋಗುತ್ತಾಳೆ’ ಎಂದು ಹೇಳಿದ್ದಾರೆ.

‘ಯೆಮನ್: ನಿಮಿಷಾ ಪ್ರಿಯಾಗೆ ಸಾಧ್ಯವಿರುವ ಎಲ್ಲ ನೆರವು’



ನವದೆಹಲಿ(ಪಿಟಿಐ): ಕೊಲೆ ಪ್ರಕರಣವೊಂದರಲ್ಲಿ ಯೆಮನ್‌ನಲ್ಲಿ ಮರಣ ದಂಡನೆಗೆ ಗುರಿಯಾಗಿರುವ ಭಾರತೀಯ ನರ್ಸ್ ನಿಮಿಷಾ ಪ್ರಿಯಾ ಅವರಿಗೆ ಸಾಧ್ಯವಿರುವ ಎಲ್ಲ ನೆರವು ನೀಡಲಾಗುವುದು ಎಂದು ವಿದೇಶಾಂಗ ಸಚಿವಾಲಯ ಮಂಗಳವಾರ ಹೇಳಿದೆ.

‘ನಿಮಿಷಾ ಪ್ರಿಯಾ ಅವರಿಗೆ ಯೆಮನ್‌ನಲ್ಲಿ ವಿಧಿಸಲಾಗಿರುವ ಶಿಕ್ಷೆ ಕುರಿತು ಮಾಹಿತಿ ಇದೆ. ಅವರ ಬಿಡುಗಡೆಗೆ ಸಾಧ್ಯವಿರುವ ಆಯ್ಕೆಗಳ ಬಗ್ಗೆ ನಿಮಿಷಾ ಅವರ ಕುಟುಂಬ ಸಹ ಯೋಚಿಸುತ್ತಿದೆ’ ಎಂದು ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಕೇರಳದ ಪಾಲಕ್ಕಾಡ್ ಜಿಲ್ಲೆಯವರಾದ ನಿಮಿಷಾ ಪ್ರಿಯಾ ಅವರು ಯೆಮನ್ ಪ್ರಜೆಯೊಬ್ಬರನ್ನು ಹತ್ಯೆ ಮಾಡಿದ್ದಾರೆ ಎನ್ನಲಾಗಿದ್ದು, ಈ ಪ್ರಕರಣದಲ್ಲಿ ಅವರಿಗೆ ಗಲ್ಲು ಶಿಕ್ಷೆ ವಿಧಿಸಲಾಗಿದೆ.

ಯೆಮನ್‌ನ ವಿಚಾರಣಾ ನ್ಯಾಯಾಲಯ 2020ರಲ್ಲಿ ನಿಮಿಷಾ ಪ್ರಿಯಾ ಅವರಿಗೆ ಮರಣ ದಂಡನೆ ವಿಧಿಸಿ ಆದೇಶಿಸಿತ್ತು. ಯೆಮನ್‌ನ ‘ಸುಪ್ರೀಂ ಜುಡಿಷಿಯಲ್ ಕೌನ್ಸಿಲ್’ ಈ ಶಿಕ್ಷೆ ಎತ್ತಿ ಹಿಡಿದು 2023ರ ನವೆಂಬರ್‌ನಲ್ಲಿ ತೀರ್ಪು ನೀಡಿತ್ತು.

ಯೆಮನ್ ಅಧ್ಯಕ್ಷ ರಶದ್ ಅಲ್ ಅಮಿನಿ ಅವರು ಈಗ, ಶಿಕ್ಷೆ ಅನುಮೋದಿಸಿದ್ದಾರೆ.

ನೆರವಿಗೆ ಮೊರೆ (ತಿರುವನಂತಪುರ ವರದಿ): ಪಾಲಕ್ಕಾಡ್ ನಿವಾಸಿ, ನಿಮಿಷಾ ಅವರ ತಾಯಿ ಪ್ರೇಮ ಕುಮಾರಿ ಅವರು ತಮ್ಮ ಮಗಳನ್ನು ಶಿಕ್ಷೆಯಿಂದ ಪಾರು ಮಾಡಲು ಅಗತ್ಯ ನೆರವನ್ನು ಸಂಬಂಧಪಟ್ಟವರು ನೀಡಬೇಕು ಎಂದು ಮಾಧ್ಯಮದ ಮೂಲಕ ಮೊರೆಯಿಟ್ಟಿದ್ದಾರೆ.

ಪ್ರಕರಣವೇನು: ನಿಮಿಷಾ ಅವರು 2008ರಿಂದ ಯೆಮನ್‌ನಲ್ಲಿ ಉದ್ಯೋಗದಲ್ಲಿದ್ದು, 2014ರಲ್ಲಿ ಯೆಮನ್ ಪ್ರಜೆ ಮಹ್ದಿ ಅವರೊಂದಿಗೆ ಕ್ಲಿನಿಕ್‌ವೊಂದನ್ನು ಸ್ಥಾಪಿಸಲು ಮುಂದಾಗಿದ್ದರು. ಹಣ ನೀಡದೇ ವಂಚಿಸಿದ್ದರಿಂದ ಕೆರಳಿದ್ದ ನಿಮಿಷಾ ಅವರು, ತನ್ನ ಪಾಸ್‌ಪೋರ್ಟ್ ಪಡೆಯುವುದಕ್ಕಾಗಿ ಮಹ್ದಿಗೆ ನಿದ್ದೆ ಬರುವ ಪದಾರ್ಥ ನೀಡಿದ್ದರು ಎನ್ನಲಾಗಿದೆ. ಮಾತ್ರೆಯ ಡೋಸ್ ಹೆಚ್ಚಾಗಿದ್ದರಿಂದ ಮಹ್ದಿ ಮೃತಪಟ್ಟಿದ್ದ. ನಂತರ, ಆತನ ದೇಹವನ್ನು ತುಂಡುಗಳಾಗಿ ಕತ್ತರಿಸಿ, ನೀರಿನ ಟ್ಯಾಂಕ್‌ವೊಂದರಲ್ಲಿ ನಿಮಿಷಾ ಬಿಸಾಡಿದ್ದರು. ಇದಕ್ಕೆ ಮತ್ತೊಬ್ಬ ನರ್ಸ್ ನೆರವಾಗಿದ್ದರು ಎನ್ನಲಾಗಿದೆ.

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹22900
ಎಸಿ	₹11745
ಆರ್‌ಪಿ	₹19000
ಆರ್‌ಸಿ	₹10450

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)



ಅರಸೀಕೆರೆ	₹14400-14500
ಮಾಲೂರು	₹8000-10000

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಚಿತ್ರದುರ್ಗ	
ಅಪಿ	49219-49629
ಬೆಟ್ಟೆ	29159-29589
ಕೆಂಪುಗೋಟು	24809-25210
ರಾಶಿ	48739-49169
ಕಾರ್ಕಳ	
ಹೊಸತು	25000-35000
ಹಳತು	30000-45000
ಸಾಗರ	
ಬಿಳಿಗೋಟು	22499-25609
ಚಾಲಿ	31899-33399
ಕೋಕ	19499-19499
ರಾಶಿ	42999-48759
ಸಿಪ್ಪೆಗೋಟು	16589-16711
ಶಿವಮೊಗ್ಗ	
ಬೆಟ್ಟೆ	44699-55699
ಗೊರಬಲು	17000-31009
ರಾಶಿ	31009-50299
ಸರಕು	50009-75009
ಸಿದ್ದಾಪುರ	
ಬಿಳಿಗೋಟು	24319-27109
ಚಾಲಿ	32009-37619
ಕೋಕ	20899-24299
ಕೆಂಪುಗೋಟು	20699-22309
ರಾಶಿ	41509-47199
ತಟ್ಟಿಬೆಟ್ಟೆ	25699-20000
ಶಿರಸಿ	
ಬೆಟ್ಟೆ	27699-37699
ಬಿಳಿಗೋಟು	23009-30336
ಚಾಲಿ	34699-38801
ಕೆಂಪುಗೋಟು	13999-21399
ರಾಶಿ	42618-44789
ಯಲ್ಲಾಪುರ	
ಅಪಿ	58479-60699
ಬಿಳಿಗೋಟು	14109-26899
ಚಾಲಿ	27069-38440
ಕೋಕ	4600-16099
ಕೆಂಪುಗೋಟು	15010-26899
ರಾಶಿ	39469-58299
ತಟ್ಟಿಬೆಟ್ಟೆ	28219-38399

ಜಗತ್ತಿನಾದ್ಯಂತ ಹೊಸ ವರ್ಷಕ್ಕೆ ಸ್ವಾಗತ

ವೆಲ್ಲಿಂಗ್ಟನ್ (ಎಪಿ): ಜಗತ್ತಿನ ಹಲವು ದೇಶಗಳಲ್ಲಿ ರಾಜಕೀಯ ಅಸ್ಥಿರತೆ ಹಾಗೂ ಸಂಘರ್ಷದ ಹೊರತಾಗಿಯೂ ಸ್ಥಳೀಯ ಸಂಸ್ಕೃತಿ ಹಾಗೂ ಸಂಪ್ರದಾಯದಂತೆ ಜನರು ಹೊಸ ವರ್ಷವನ್ನು ಬರಮಾಡಿಕೊಂಡರು.

ದಕ್ಷಿಣ ಪೆಸಿಫಿಕ್ ರಾಷ್ಟ್ರಗಳು ಮೊದಲಿಗೆ ಹೊಸ ವರ್ಷವನ್ನು ಆಚರಿಸಿದವು. ನ್ಯೂಜಿಲೆಂಡ್‌ನ ಪ್ರಮುಖ ನಗರವಾದ ಆಕ್ಲೆಂಡ್‌ನಲ್ಲಿ ಸಾವಿರಾರು ಮಂದಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಆಸ್ಟ್ರೇಲಿಯಾದಲ್ಲಿ ಹೊಸ ವರ್ಷಾಚರಣೆ ಸಂಭ್ರಮದಿಂದ ನಡೆಯಿತು. ಸಿಡ್ನಿ ಬಂದರಿನಲ್ಲಿ ನಡೆಯುವ ಸಾಂಪ್ರದಾಯಿಕ ಸುಡುಮದ್ದು ಪ್ರದರ್ಶನಕ್ಕೆ 10 ಲಕ್ಷಕ್ಕೂ ಅಧಿಕ ಮಂದಿ ಸಾಕ್ಷಿಯಾದರು. ಬ್ರಿಟನ್‌ನ ಪಾಪ್‌ಸ್ಟಾರ್ ರಾಬಿ ವಿಲಿಯಮ್ಸ್ ಕಾರ್ಯಕ್ರಮ ನಡೆಸಿಕೊಟ್ಟರು. ಜಪಾನ್‌ನಲ್ಲಿ ದೇವಾಲಯವನ್ನು ಸ್ವಚ್ಛಗೊಳಿಸುವ ಮೂಲಕ ಹೊಸ ವರ್ಷ ಆಚರಿಸಲಾಯಿತು.



ಹೊಸ ವರ್ಷಾಚರಣೆ ಅಂಗವಾಗಿ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಮಂಗಳವಾರ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸಲಾಯಿತು —ಎಪಿ ಚಿತ್ರ

ಮುಂಬರುವ ವರ್ಷವೂ ಏಷ್ಯಾದ ರಾಶಿಚಕ್ರದ ಪ್ರಕಾರ, ಹಾವುಗಳ ಪುನರ್‌ಜನ್ಮ ಎಂದು ನಂಬಲಾಗಿದೆ. ಹೀಗಾಗಿ, ಜಪಾನ್‌ನ ಬಹುಪಾಲು ಮಳಿಗೆಗಳು ಜ.1ರಿಂದ ರಾಶಿಚಕ್ರದ ಆರಂಭ ಎಂದು ಪರಿಗಣಿಸಿ, ಹಾವುಗಳನ್ನು ಒಳಗೊಂಡ ವಸ್ತುಗಳ ಮಾರಾಟದಲ್ಲಿ ತೊಡಗುವುದು ವಿಶೇಷ.

ಜೆಜು ವಿಮಾನಯಾನ ಸಂಸ್ಥೆಗೆ ಸೇರಿದ ವಿಮಾನವೊಂದು ಭಾನುವಾರ ಪತನಗೊಂಡು 179 ಮಂದಿ ಮೃತಪಟ್ಟಿರುವ ಹಿನ್ನೆಲೆಯಲ್ಲಿ ದಕ್ಷಿಣ ಕೊರಿಯಾದಾದ್ಯಂತ ಶೋಕಾಚರಣೆ ಘೋಷಿಸಲಾಗಿದ್ದು, ಹೊಸ ವರ್ಷ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ.

400 ಔಷಧಗಳ ಗುಣಮಟ್ಟ ಕಳಪೆ

ಒಂದನೇ ಪುಟದಿಂದ...

ಇದೇ ರೀತಿ, ರಾಜ್ಯ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ವಿವಿಧ ಔಷಧಗಳ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಗಳಲ್ಲಿ ಗುಣಮಟ್ಟ ಪರೀಕ್ಷೆಗೆ ಒಳಪಡಿಸಿದ್ದರು. ಹಲವು ಔಷಧಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎನ್ನುವುದು ಪರೀಕ್ಷಾ ವರದಿಗಳಿಂದ ಖಚಿತಪಟ್ಟಿದೆ.

ರಾಜ್ಯದ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ಹಾಗೂ ಕ್ಲಿನಿಕ್‌ಗಳಲ್ಲಿ ಬಳಸಲಾಗುತ್ತಿರುವ ಔಷಧಗಳಿಗೆ ಸಂಬಂಧಿಸಿದಂತೆ 2023–24ನೇ ಸಾಲಿನಲ್ಲಿ ಇಲಾಖೆ ಅಧಿಕಾರಿಗಳು 7,420 ಔಷಧಗಳ ಮಾದರಿಗಳನ್ನು ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಿದ್ದರು. ಈ ಮಾದರಿಗಳಲ್ಲಿ 285 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲವೆಂಬ ವರದಿ ಬಂದಿದೆ. 2024–25ನೇ ಸಾಲಿನಲ್ಲಿ (ಅಕ್ಟೋಬರ್‌ವರೆಗೆ) 3,636 ಮಾದರಿಗಳನ್ನು ಪ್ರಯೋಗಾಲಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅವುಗಳಲ್ಲಿ 177 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎನ್ನುವುದು ದೃಢಪಟ್ಟಿದೆ.

ಪರಿಶೀಲನೆಯಿಂದ ದೃಢ: ಔಷಧ ತಯಾರಿಕಾ ಕಂಪನಿಗಳು ಔಷಧಗಳನ್ನು ಮಾರುಕಟ್ಟೆಗೆ ಸರಬರಾಜು ಮಾಡುವ ಮುನ್ನ ಪ್ರಯೋಗಾಲಯಗಳಲ್ಲಿ ಪರೀಕ್ಷೆಗಳನ್ನು ನಡೆಸಿ, ವಿವಿಧ ಮಾನದಂಡಗಳ ಆಧಾರದಲ್ಲಿ ಪ್ರಮಾಣಿತ ಗುಣಮಟ್ಟ ಹೊಂದಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕಾಗುತ್ತದೆ. ಇಷ್ಟಾಗಿಯೂ ಕೆಲವು ಕಂಪನಿಗಳ ಔಷಧಗಳ ವಿವಿಧ ಬ್ಯಾಚ್‌ಗಳು ಪ್ರಮಾಣಿತ ಗುಣಮಟ್ಟ ಹೊಂದಿರದಿರುವುದು ರಾಜ್ಯ ಔಷಧ ನಿಯಂತ್ರಕರು ನಡೆಸುವ ಪ್ರಯೋಗಾಲಯ ಪರೀಕ್ಷೆಯಿಂದ ದೃಢಪಡುತ್ತಿದೆ.

‘ರಿಂಗರ್ ಲ್ಯಾಕ್ಟೇಟ್’ ಐವಿ ದ್ರಾವಣಕ್ಕೆ ಸಂಬಂಧಿಸಿದಂತೆ ರಾಜ್ಯದ ಔಷಧ ನಿಯಂತ್ರಕರು ನಡೆಸಿದ ಪರೀಕ್ಷೆಯಲ್ಲಿ 22 ಬ್ಯಾಚ್‌ಗಳು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲ ಎಂಬ ವರದಿಗಳು ಬಂದಿದ್ದವು. ಕೇಂದ್ರೀಯ ಔಷಧ ಪ್ರಯೋಗಾಲಯ ನಡೆಸಿದ ಪರೀಕ್ಷೆಗಳಲ್ಲಿ ಇದೇ ದ್ರಾವಣದ 13 ಬ್ಯಾಚ್‌ಗಳಲ್ಲಿ ನಾಲ್ಕು ಬ್ಯಾಚ್‌ಗಳು ಗುಣಮಟ್ಟ ಹೊಂದಿವೆ ಎಂಬ ವರದಿ ಬಂದಿತ್ತು. ಇದು ಗೊಂದಲಕ್ಕೆ ಕಾರಣವಾಗಿದೆ.

‘ಔಷಧಗಳ ಗುಣಮಟ್ಟ ಪರಿಶೀಲನೆಗೆ ಸಂಬಂಧಿಸಿದಂತೆ ರಾಜ್ಯದ ವಿವಿಧೆಡೆ ಇರುವ ಇಲಾಖೆಯ ಪ್ರಯೋಗಾಲ ಯಗಳಿಗೆ ಔಷಧಗಳ ಮಾದರಿಗಳನ್ನು ನಿಯಮಿತವಾಗಿ ಕಳುಹಿಸಲಾಗುತ್ತಿದೆ. ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳ ಕಂಪನಿಗಳ ವಿರುದ್ಧ ಕಾನೂನಿನಡಿ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿಜಯ್ ಹಜಾರೆ ಟ್ರೋಫಿ • ಮಯಂಕ್ ಹ್ಯಾಟ್ರಿಕ್ ಶತಕ ಹೊಡೆದರೂ ದಕ್ಕದ ಗೆಲುವು

ವರುಣ್ ಸಾಹಸದಿಂದ ಗೆದ್ದ ತಿಲಕ್ ಪಡೆ

ಅಹಮದಾಬಾದ್: ಮೂರು ಇನಿಂಗ್ಸ್‌ಗಳಲ್ಲಿ ಮಯಾಂಕ್ ಅಗರವಾಲ್ ಮೊದಲ ಬಾರಿ ಔಟ್ ಆದರು. ಅಷ್ಟರೊಳಗೆ ಅವರು ಸತತ ಮೂರನೇ ಶತಕ ದಾಖಲಿಸಿದರು. ಆದರೆ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಕರ್ನಾಟಕ ತಂಡದ ನಾಯಕನ ಶತಕ (124, 112ಎ), ಎದುರಾಳಿ ಹೈದರಾಬಾದ್ ತಂಡದ ಪಲ್ಲಿ ವರುಣ್ ಗೌಡ್ ಅವರ ಶತಕದ ಎದುರು ಮಸುಕಾಯಿತು.

ಇಲ್ಲಿನ ಎಡಿಎಸ್‌ಎ ರೈಲ್ವೆ ಮೈದಾನದಲ್ಲಿ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಲು ನಿರ್ಧರಿಸಿದ ಕರ್ನಾಟಕ 50 ಓವರುಗಳಲ್ಲಿ 8 ವಿಕೆಟ್‌ಗೆ 320 ರನ್ ಗಳಿಸಿತು. ಈ ದೊಡ್ಡ ಮೊತ್ತಕ್ಕೆ ಉತ್ತರವಾಗಿ ಹೈದರಾಬಾದ್ ಎರಡು ಎಸೆತಗಳು ಉಳಿದಿರುವಂತೆ 7 ವಿಕೆಟ್‌ಗೆ 322 ರನ್ ಬಾರಿಸಿತು. ಮಧ್ಯಮ ಕ್ರಮಾಂಕದ ಬ್ಯಾಟರ್ ವರುಣ್ ಗೌಡ್ 82 ಎಸೆತಗಳಲ್ಲಿ ಅಜೇಯ 109 ರನ್ ಬಾರಿಸಿ ಗೆಲುವಿನ ಕಾಣಿಕೆ ನೀಡಿದರು. ಅವರ ಆಟದಲ್ಲಿ ಏಳು ಬೌಂಡರಿಗಳ ಜೊತೆ ಐದು ಸಿಕ್ಸರ್‌ಗಳಿದ್ದವು. ನಾಯಕ ತಿಲಕ್ ವರ್ಮಾ 106 ಎಸೆತಗಳಲ್ಲಿ 99 ರನ್ ಗಳಿಸಿದ್ದರು.

ಮಯಾಂಕ್ ಅವರ ಮೊದಲೆರಡು ಶತಕ ವಿಭಿನ್ನ ಸಂದರ್ಭಗಳಲ್ಲಿ, ಭಿನ್ನ ಶೈಲಿಗಳಲ್ಲಿ ಮೂಡಿಬಂದಿತ್ತು. ಪಂಜಾಬ್ ವಿರುದ್ಧ ಹೋರಾಡಿ ಔಟಾಗದೇ 139 ರನ್ ಬಾರಿಸಿದರೆ, ಅರುಣಾಚಲ ಪ್ರದೇಶದ ವಿರುದ್ಧ ಮಿಂಚಿನ ಅಜೇಯ 100 ರನ್ ಸಿಡಿಸಿದ್ದರು. ಆದರೆ ಆ ಎರಡು ಶತಕಗಳಿಗೆ ಹೋಲಿಸಿದರೆ ಇಂದಿನ ಶತಕ ಶಿಸ್ತಿನಿಂದ ಕೂಡಿತ್ತು. 15 ಬೌಂಡರಿಗಳ ಜೊತೆ ಎರಡು ಸಿಕ್ಸರ್‌ಗಳು ಅವರ ಆಟದಲ್ಲಿದ್ದವು.

ಮಯಾಂಕ್, ನಿಕಿನ್ ಜೋಸ್ (37) ಜೊತೆ ಮೊದಲ ವಿಕೆಟ್‌ಗೆ 91 ರನ್ ಸೇರಿಸಿದ್ದು ಕರ್ನಾಟಕ ಉತ್ತಮ ಆರಂಭ ಪಡೆಯಿತು. ಬಳಿಕ ಮಯಂಕ್, ಆರ್. ಸ್ಮರಣ್ (83) ಜೊತೆ ಮೂರನೇ ವಿಕೆಟ್‌ಗೆ 104 ರನ್ ಸೇರಿಸಿದರು. ಆದರೂ ಕರ್ನಾಟಕ ಮಧ್ಯಮ ಕ್ರಮಾಂಕ ಈ ಭದ್ರ ಬುನಾದಿಯ ಲಾಭವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಲಾಗಲಿಲ್ಲ. ವೇಗವಾಗಿ ರನ್ ಗಳಿಸುವ ಧಾವಂತದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡಿತು. 37ನೇ ಓವರಿನಲ್ಲಿ ಮಯಂಕ್ ನಿರ್ಗಮನದ (3ಕ್ಕೆ 225) ನಂತರ ಹೈದರಾಬಾದ್ ತಂಡ ಲಗಾಮು ಹಾಕಲು ಯಶಸ್ವಿ ಆಯಿತು.

ಹೈದರಾಬಾದ್ ತಂಡ ಆರಂಭದಲ್ಲೇ ಕುಸಿಯದಂತೆ ತಿಲಕ್ ವರ್ಮಾ (99) ಆಸರೆಯಾದರು. ಅವರು ಶತಕದಂಚಿನಲ್ಲಿ ಪಾರ್ಟ್‌ಟೈಮ್ ಆಫ್ ಸ್ಪಿನ್ನರ್ ನಿಕಿನ್ ಜೋಸ್‌ಗೆ ವಿಕೆಟ್ ನೀಡಿದರು. ನಂತರ ವರುಣ್ ಅವರ ಆಟ ರಂಗೇರಿತು.


ಸತತ ನಾಲ್ಕು ಪಂದ್ಯಗಳನ್ನು ಗೆದ್ದಿದ್ದ ಕರ್ನಾಟಕಕ್ಕೆ ಇದು ಮೊದಲ ಸೋಲು. ಮಯಂಕ್ ಪಡೆ ತನ್ನ ಮುಂದಿನ ಪಂದ್ಯವನ್ನು ಜನವರಿ 3ರಂದು ಸೌರಾಷ್ಟ್ರ ವಿರುದ್ಧ ಆಡಲಿದೆ.

(ಮಾಹಿತಿ: ಬಿಸಿಸಿಐ.ಟಿವಿ)



ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಬ್ಯಾಟಿಂಗ್

ಅತಿ ವೇಗದ 150+ ರನ್ ಗಳಿಸಿದ ಆಯುಷ್



ಆಯುಷ್ ಮ್ಹಾತ್ರೆ

ಅಹಮದಾಬಾದ್ (ಪಿಟಿಐ): ಮುಂಬೈನ ಬ್ಯಾಟರ್ ಆಯುಷ್ ಮ್ಹಾತ್ರೆ ಅವರು ಲಿಸ್ಟ್ 'ಎ' ಕ್ರಿಕೆಟ್ ಪಂದ್ಯದಲ್ಲಿ 150 + ರನ್ ಗಳಿಸಿದ ಅತಿ ಕಿರಿಯ ಆಟಗಾರ ಎಂಬ ಗೌರವಕ್ಕೆ ಪಾತ್ರರಾದರು.

ಮಂಗಳವಾರ ಅವರು ನಾಗಾಲ್ಯಾಂಡ್ ವಿರುದ್ಧ ವಿಜಯ್ ಹಜಾರೆ ಟ್ರೋಫಿ ಪಂದ್ಯದಲ್ಲಿ ಕೇವಲ 117 ಎಸೆತಗಳಲ್ಲಿ 181 ರನ್ ಸಿಡಿಸಿದರು.

ಆ ಹಾದಿಯಲ್ಲಿ 17 ವರ್ಷ 168 ದಿನ ವಯಸ್ಸಿನ ಆಯುಷ್, ತಮ್ಮದೇ ತಂಡದ ಯಶಸ್ವಿ ಜೈಸ್ವಾಲ್ ಹೆಸರಿನಲ್ಲಿದ್ದ ದಾಖಲೆ ಮುರಿದರು. 2019ರಲ್ಲಿ ಜಾರ್ಖಂಡ್ ವಿರುದ್ಧ ಯಶಸ್ವಿ ಜೈಸ್ವಾಲ್ 17 ವರ್ಷ 291 ದಿನ ವಯಸ್ಸಿನವರಾಗಿದ್ದಾಗ 150ಕ್ಕೂ ಹೆಚ್ಚು ರನ್ ಗಳಿಸಿದ್ದರು. ಅವರು 154 ಎಸೆತಗಳಲ್ಲಿ 203 ರನ್ ಗಳಿಸಿದ್ದರು.

ಈ ವರ್ಷದ ಆರಂಭದಲ್ಲಿ ಮುಂಬೈ ಪರ ದೇಶಿ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ವಿರಾರ್‌ನ (ಮುಂಬೈ ಉಪನಗರದಲ್ಲಿದೆ) ಮ್ಹಾತ್ರೆ ಅವರು 11 ಸಿಕ್ಸರ್ ಹಾಗೂ 15 ಬೌಂಡರಿಗಳನ್ನು ಬಾರಿಸಿದರು. ಮುಂಬೈ 50 ಓವರುಗಳಲ್ಲಿ 7 ವಿಕೆಟ್‌ಗೆ 403 ರನ್‌ಗಳ ಬೃಹತ್ ಮೊತ್ತ ಗಳಿಸಿತು. ನಾಗಾಲ್ಯಾಂಡ್ 9 ವಿಕೆಟ್‌ಗೆ 214 ರನ್ ಗಳಿಸಿ 189 ರನ್‌ಗಳಿಂದ ಸೋಲನುಭವಿಸಿತು.

ಸ್ಕೋರ್ ಕಾರ್ಡ್

ಕರ್ನಾಟಕ: 50 ಓವರುಗಳಲ್ಲಿ 8 ವಿಕೆಟ್‌ಗೆ 320
ನಿಕಿನ್ ಸಿ ಹೇಮತೇಜ ಬಿ ರಾಯುಡು 37 (43ಎ, 4x4, 6x1)
ಮಯಂಕ್ ಸಿ ಅವನೀಶ್ ಬಿ ಅಂಕಿತ್ 124 (112ಎ, 4x15, 6x2)
ಅನೀಶ್ ರನ್‌ಔಟ್ (ತ್ಯಾಗರಾಜನ್) 11 (18ಎ, 4x1)
ಸ್ಮರಣ್ ಸಿ ತ್ಯಾಗರಾಜನ್ ಬಿ ಮಿಲಿಂದ್ 83 (75ಎ, 4x3, 6x5)
ಅಭಿನವ್ ಸಿ ತಿಲಕ್ ವರ್ಮಾ ಬಿ ಅಂಕಿತ್ 1 (7ಎ)
ಶ್ರೀಜಿತ್ ಬಿ ಮಿಲಿಂದ್ 5 (10ಎ)
ಪ್ರವೀಣ್ ಸಿ ರಾಯುಡು ಬಿ ಮುದಾಸಿರ್ 24 (20ಎ, 4x3)
ವಿದ್ಯಾಧರ್ ಸಿ ಸಬ್ (ನಿತೇಶ್ ರೆಡ್ಡಿ) ಬಿ ಮಿಲಿಂದ್ 1 (2ಎ)
ಶ್ರೇಯಸ್ ಔಟಾಗದೇ 19 (9ಎ, 4x3)
ಅಭಿಲಾಷ್ ಶೆಟ್ಟಿ ಔಟಾಗದೇ 4 (4ಎ)
ಇತರೆ: 11 (ಬೈ1, ಲೆಗ್‌ಬೈ3, ವೈಡ್ 7)
ವಿಕೆಟ್ ಪತನ: 1-91 (ನಿಕಿನ್ ಜೋಸ್, 15.3), 2-121 (ಕೆ. ವಿ.ಅನೀಶ್, 21.2), 3-225 (ಮಯಂಕ್ ಅಗರವಾಲ್, 36.2), 4-229 (ಅಭಿನವ್ ಮನೋಹನ್, 38.2), 5-240 (ಕೃಷ್ಣನ್ ಶ್ರೀಜಿತ್, 41.1), 6-285 (ಪ್ರವೀಣ್ ದುಬೆ, 46.4), 7-295 (ಆರ್.ಸ್ಮರಣ್, 47.4), 8-296 (ವಿದ್ಯಾಧರ್ ಪಾಟೀಲ, 47.6).
ಬೌಲಿಂಗ್: ಮೊಹಮ್ಮದ್ ಮುದಾಸಿರ್ 10-1-60-1; ಚಮಾ ಮಿಲಿಂದ್ 10-0-66-3; ಅಂಕಿತ್ ರೆಡ್ಡಿ 10-0-40-2; ಎ.ವರುಣ್ ಗೌಡ್ 2-0-25-0; ರೋಹಿತ್ ರಾಯುಡು 7-0-46-1; ತನಯ್ ತ್ಯಾಗರಾಜನ್ 9-0-57-0; ತಿಲಕ್ ವರ್ಮಾ 2-0-22-0.

ಹೈದರಾಬಾದ್: 49.4 ಓವರುಗಳಲ್ಲಿ 7 ವಿಕೆಟ್‌ಗೆ 322
ತನ್ಮಯ್ ಸಿ ನಿಕಿನ್ ಬಿ ವಿದ್ಯಾಧರ 35 (48ಎ, 4x3, 6x1)
ರಾಯುಡು ಬಿ ಅಭಿಲಾಷ್ ಶೆಟ್ಟಿ 0 (1ಎ)
ತಿಲಕ್ ಸಿ ಪ್ರವೀಣ್ ಬಿ ನಿಕಿನ್ 99 (106ಎ, 4x7, 6x1)
ಹಿಮತೇಜ ಎಲ್‌ಬಿಡಬ್ಲ್ಯು ಬಿ ದುಬೆ 15 (22ಎ, 4x2)
ನಿತೇಶ್ ಎಲ್‌ಬಿಡಬ್ಲ್ಯು ಬಿ ನಿಕಿನ್ 0 (3ಎ)
ವರುಣ್ ಗೌಡ್ ಔಟಾಗದೇ 109 (82ಎ, 4x7, 6x5)
ಅವನೀಶ್ ಸಿ ಸ್ಮರಣ್ ಬಿ ಗೋಪಾಲ್ 17 (16ಎ, 4x1)
ತನಯ್ ಬಿ ದುಬೆ 25 (17ಎ, 4x3, 6x1)
ಮಿಲಿಂದ್ ಔಟಾಗದೇ 4 (3ಎ, 4x1)
ಇತರೆ: 18 (ಬೈ 4, ಲೆಗ್‌ಬೈ 3, ವೈಡ್ 11)
ವಿಕೆಟ್ ಪತನ: 1-0 (ರೋಹಿತ್ ರಾಯುಡು, 1.1), 2-70 (ತನ್ಮಯ್ ಅಗರವಾಲ್, 14.1), 3-93 (ಕೋಡಿಮೆಳ ಹಿಮತೇಜ, 19.6), 4-94 (ನಿತೇಶ್ ರೆಡ್ಡಿ, 20.4), 5-206 (ತಿಲಕ್ ವರ್ಮಾ, 38.1), 6-243 (ಅರವೆಲ್ಲಿ ಅವನೀಶ್, 43.5), 7-314 (ತನಯ್ ತ್ಯಾಗರಾಜನ್, 49.1)
ಬೌಲಿಂಗ್: ವಾಸುಕಿ ಕೌಶಿಕ್ 9-1-71-0; ಅಭಿಲಾಷ್ ಶೆಟ್ಟಿ 6-0-38-1; ವಿದ್ಯಾಧರ್ ಪಾಟೀಲ 8-0-49-1; ಶ್ರೇಯಸ್ ಗೋಪಾಲ್ 10-0-63-1; ನಿಕಿನ್ ಜೋಸ್ 8-0-45-2; ಪ್ರವೀಣ್ ದುಬೆ 8.4-0-49-2.
ಪಂದ್ಯದ ಆಟಗಾರ: ವರುಣ್ ಗೌಡ್

ಫಲಿತಾಂಶ: ಹೈದರಾಬಾದ್‌ಗೆ 3 ವಿಕೆಟ್ ಗೆಲುವು

ಅಗ್ರಸ್ಥಾನದೊಂದಿಗೆ ಕ್ವಾರ್ಟರ್‌ಗೆ ವೈಶಾಲಿ

ವಿಶ್ವ ಚೆಸ್ ಬ್ಲಿಟ್ಜ್ ಚಾಂಪಿಯನ್‌ಷಿಪ್: ಹಂಪಿ ನಿರ್ಗಮನ

ನ್ಯೂಯಾರ್ಕ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ, ಇಲ್ಲಿನ ವಾಲ್‌ಸ್ಟ್ರೀಟ್‌ನಲ್ಲಿ ನಡೆಯುತ್ತಿರುವ ವಿಶ್ವ ಬ್ಲಿಟ್ಜ್ (ಅತಿ ವೇಗದ) ಚೆಸ್ ಚಾಂಪಿಯನ್‌ಷಿಪ್‌ನ ಅಂತಿಮ ಕ್ವಾಲಿಫೈಯರ್ಸ್ ಗೆದ್ದು ಎಂಟರ ಘಟ್ಟ ತಲುಪಿದರು. ಭಾನುವಾರವಷ್ಟೇ ರ್‍ಯಾಪಿಡ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿದ್ದ ಕೋನೇರು ಹಂಪಿ ಬ್ಲಿಟ್ಜ್‌ನಲ್ಲಿ ಬೇಗ ಹೊರಬಿದ್ದರು.

ರ್‍ಯಾಪಿಡ್ ವಿಭಾಗದಲ್ಲಿ ಹಂಪಿ ಅವರ ಅಮೋಘ ಪ್ರದರ್ಶನದ ನಂತರ, ಬ್ಲಿಟ್ಜ್‌ನಲ್ಲಿ ಗಮನಸೆಳೆಯುವ ಸರದಿ ವೈಶಾಲಿ ಅವರದಾಯಿತು. ರ್‍ಯಾಪಿಡ್ ವಿಭಾಗದ ರೀತಿ ಬ್ಲಿಟ್ಜ್‌ನಲ್ಲಿ ಗೆದ್ದವರೂ ₹51 ಲಕ್ಷ ಬಹುಮಾನ ನಗದು ಬಹುಮಾನ ಪಡೆಯಲಿದ್ದಾರೆ. ವೈಶಾಲಿ 11 ಸುತ್ತುಗಳಿಂದ ಮೂರು ಡ್ರಾ ಸೇರಿ 9.5 ಪಾಯಿಂಟ್ಸ್ ಗಳಿಸಿದರು.

'ನನ್ನ ಇಂದಿನ ಪ್ರದರ್ಶನದಿಂದ ಸಂತಸವಾಗಿದೆ. ನಾಳೆ ನನ್ನ ಪಾಲಿಗೆ ಮಹತ್ವದ ದಿನ. ಪ್ರಾಮಾಣಿಕವಾಗಿ ಹೇಳುವುದಾದರೆ ಈ ರೀತಿಯ ಫಲಿತಾಂಶ ನಾನು ನಿರೀಕ್ಷಿಸಿಯೇ ಇರಲಿಲ್ಲ. ನಾಳೆಗೆ ನಾನು ಸೂಕ್ತ ರೀತಿ ಸಿದ್ಧತೆ ನಡೆಸಬೇಕಾಗಿದೆ' ಎಂದು ವೈಶಾಲಿ ಪ್ರತಿಕ್ರಿಯಿಸಿದರು.

ರಷ್ಯಾದ ಕ್ಯಾತರಿನಾ ಲಾಗ್ನೊ (8.5) ಅವರು ವೈಶಾಲಿ ಸನಿಹ ಇದ್ದರು. ಅರ್ಹತೆ ಪಡೆದ ಉಳಿದ ಆರು ಮಂದಿ ತಲಾ ಎಂಟು ಅಂಕ ಸಂಗ್ರಹಿಸಿದ್ದರು. ಹಂಪಿ ಸಹ ಇಷ್ಟೇ ಪಾಯಿಂಟ್ಸ್ ಪಡೆದರೂ ಅವರ ಟೈ ಬ್ರೇಕ್ ಅಂಕ ತೀರಾ ಕಡಿಮೆಯಿದ್ದು, 9ನೇ ಸ್ಥಾನಕ್ಕೆ ಸರಿದರು. ಎಂಟು ಮಂದಿ ಮಾತ್ರ ಮುಂದಿನ ಸುತ್ತಿಗೆ (ಕ್ವಾರ್ಟರ್‌ಫೈನಲ್) ತೇರ್ಗಡೆಗೊಳ್ಳುತ್ತಾರೆ. ವೈಶಾಲಿ ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾದ ಗ್ರ್ಯಾಂಡ್‌ಮಾಸ್ಟರ್ ಝು ಜಿನರ್ ಅವರನ್ನು ಎದುರಿಸಲಿದ್ದಾರೆ.

ಭಾರತದ ಆಟಗಾರರಿಲ್ಲ: ಓಪನ್ ವಿಭಾಗದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್ ಸನ್ ಸೇರಿದಂತೆ 10 ಮಂದಿ ಆಟಗಾರರು 13 ಸುತ್ತುಗಳಿಂದ 9.5 ಅಂಕ ಕಲೆಹಾಕಿ ಅಗ್ರಸ್ಥಾನಕ್ಕೆ ಟೈ ಮಾಡಿ ಕೊಂಡಿದ್ದರು. ರಷ್ಯಾದ ಇಯಾನ್ ನಿಪೊಮ್‌ನಿಷಿ ಕ್ವಾಲಿಫೈರ್ಸ್‌ಲ್ಲಿ ಮೊದಲಿಗರಾದರು. ಅಮೆರಿ ಕದ ಫ್ಯಾಬಿಯಾನೊ ಕರುವಾನಾ ಎರಡನೇ ಸ್ಥಾನ ಪಡೆದರೆ, ಕಾರ್ಲ್‌ಸನ್ ಮೂರನೇ ಸ್ಥಾನ ಗಳಿಸಿದರು.

ಆದರೆ ಅನಿರೀಕ್ಷಿತ ಎಂಬಂತೆ ಅಂತಿಮ ಸುತ್ತಿಗೆ ಮುನ್ನಡೆದ ಎಂಟು ಆಟಗಾರರಲ್ಲಿ ಭಾರತದ ಒಬ್ಬರೂ ಸ್ಥಾನ ಪಡೆಯಲಿಲ್ಲ. ಆರಂಭದಲ್ಲಿ ಭರವಸೆ ಮೂಡಿಸಿದರೂ ನಂತರದ ಸುತ್ತುಗಳಲ್ಲಿ ಹಿನ್ನಡೆ ಅನುಭವಿಸಿದರು.

ಕಾರ್ಲ್‌ಸನ್ ಎಂಟರ ಘಟ್ಟದಲ್ಲಿ ಅಮೆರಿಕದ ಹ್ಯಾನ್ಸ್ ನೀಮನ್ ಎದುರು ಆಡುವರು. ಮೊದಲ ಐದು ಸುತ್ತುಗಳಲ್ಲಿ ಅರ್ಜುನ್ ಇರಿಗೇಶಿ ಐದೂ ಗೆದ್ದು ಉತ್ತಮ ಆರಂಭ ಮಾಡಿದರೂ, ನಂತರ ಹಿನ್ನಡೆ ಕಂಡು ಏಳು ಪಾಯಿಂಟ್ ಗಳಿಸಲಷ್ಟೇ ಶಕ್ತರಾದರು. ಆರ್.ಪ್ರಜ್ಞಾನಂದ ಕ್ವಾಲಿಫೈಯರ್ಸ್‌ಲ್ಲಿ ಭಾರತದ ಆಟಗಾರರಲ್ಲಿ ಹೆಚ್ಚಿನ ಪಾಯಿಂಟ್ಸ್ (8.5) ಗಳಿಸಿದರು. ಆದರೆ ಕೊನೆಯ ಸುತ್ತಿನಲ್ಲಿ ರಷ್ಯಾದ ಡೇನಿಯಲ್ ಡುಬೋವ್ ಅವರಿಗೆ ಸೋತಿದ್ದು ಎಂಟರ ಘಟ್ಟದ ಅವಕಾಶ ತಪ್ಪಿಸಿತು.

ನಾಕೌಟ್‌ಗೆ ಅರ್ಹತೆ ಪಡೆದವರು: ಓಪನ್ ವಿಭಾಗ: ಇಯಾನ್ ನಿಪೊಮ್ ನಿಷಿ, ವ್ಲೊಲೊಡರ್ ಮುರ್ಝಿ ನ್ (ಫಿಡೆ), ಫ್ಯಾಬಿಯಾನೊ ಕರುವಾನ, ಹ್ಯಾನ್ಸ್ ನೀಮನ್ ಮೋಕೆ, ವೆಸ್ಲಿ ಸೊ (ಅಮೆರಿಕ), ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ), ಯಾನ್-ಕ್ರಿಸ್ಟೋಫ್ ಡೂಡಾ (ಪೋಲೆಂಡ್), ಅಲಿರೇಝಾ ಫಿರೋಜ್ (ಫ್ರಾನ್ಸ್). **ಮಹಿಳಾ ವಿಭಾಗ:** ಆರ್.ವೈಶಾಲಿ (ಭಾರತ), ಲೀ ಟಿಂಗ್ಜಿ, ಜು ವೆನ್‌ಜುನ್, ಝು ಜಿನರ್ (ಎಲ್ಲರೂ ಚೀನಾ), ಕ್ಯಾತರಿನಾ ಲಾಗ್ನೊ, ವೆಲೆಂಟಿನಾ ಗುನಿನಾ (ಫಿಡೆ), ಕರಿಸ್ಸಾ ಯಿಪ್ (ಅಮೆರಿಕ), ಬಿಬಿಸಾರ (ಕಜಕಸ್ತಾನ).



ಭಾರತದ ಆರ್. ವೈಶಾಲಿ

ಐಸಿಸಿ ಏಕದಿನ ರ್‍ಯಾಂಕಿಂಗ್ ಐದನೇ ಸ್ಥಾನಕ್ಕೆ ದೀಪ್ತಿ ಶರ್ಮಾ



ದೀಪ್ತಿ ಶರ್ಮಾ

ದುಬೈ (ಪಿಟಿಐ): ವೆಸ್ಟ್ ಇಂಡೀಸ್ ವಿರುದ್ಧ ಇತ್ತೀಚೆಗೆ ತವರಿನಲ್ಲಿ ನಡೆದ ಸರಣಿಯಲ್ಲಿ ಪ್ರೇರಣಾದಾಯಿ ಪ್ರದರ್ಶನ ನೀಡಿದ ಭಾರತದ ಆಫ್ ಸ್ಪಿನ್ನರ್ ದೀಪ್ತಿ ಶರ್ಮಾ ಅವರು ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ಬೌಲಿಂಗ್ ರ್‍ಯಾಂಕಿಂಗ್‌ನಲ್ಲಿ ಅಗ್ರ ಐದರಲ್ಲಿ ಸ್ಥಾನ ಪಡೆದಿದ್ದಾರೆ.

27 ವರ್ಷ ವಯಸ್ಸಿನ ದೀಪ್ತಿ 665 ರೇಟಿಂಗ್ ಪಾಯಿಂಟ್ಸ್ ಪಡೆದಿದ್ದು ಐದನೇ ಸ್ಥಾನದಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ ಮರೈಜಾನ್ ಕಾಪ್ (677 ರೇಟಿಂಗ್ ಪಾಯಿಂಟ್ಸ್) ನಾಲ್ಕನೇ ಸ್ಥಾನದಲ್ಲಿದ್ದಾರೆ.

ದೀಪ್ತಿ ಎರಡು ಪಂದ್ಯಗಳಿಂದ ಎಂಟು ವಿಕೆಟ್ ಕಬಳಿಸಿದ್ದರು. ಕೊನೆಯ ಪಂದ್ಯದಲ್ಲಿ 31 ರನ್ನಿಗೆ 6 ವಿಕೆಟ್ ಪಡೆದಿದ್ದರು. ಔಟಾಗದೇ 39 ರನ್ ಗಳಿಸಿ ಗೆಲುವಿನಲ್ಲಿ ಮಿಂಚಿದ್ದರು. ಭಾರತ ಸರಣಿಯನ್ನು 3-0 ಯಿಂದ ಗೆದ್ದುಕೊಂಡಿತ್ತು.

ಬ್ಯಾಟರ್‌ಗಳ ಪೈಕಿ ಜೆಮಿಮಾ ರಾಡ್ರಿಗಸ್ ನಾಲ್ಕು ಸ್ಥಾನ ಪ್ರಗತಿ ಕಂಡಿದ್ದು 22ನೇ ಸ್ಥಾನದಲ್ಲಿದ್ದಾರೆ. ಅವರು ಇತ್ತೀ ಚಿನ ಸರಣಿಯಲ್ಲಿ 29 ಮತ್ತು 52 ರನ್ ಗಳಿಸಿದ್ದರು.

ಭಾರತದ ಸ್ಮೃತಿ ಮಂದಾನ (720 ರೇಟಿಂಗ್ ಪಾಯಿಂಟ್ಸ್) ಒಂದು ಸ್ಥಾನ ಕೆಳಗಿಳಿದು ಮೂರನೇ ಸ್ಥಾನದಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ ಲಾರಾ ವೊಲ್ವಾರ್ಟ್ (773) ಮತ್ತು ಶ್ರೀಲಂಕಾದ ಚಮಾರಿ ಅಟ್ಟಪಟ್ಟು (733) ಮೊದಲ ಎರಡು ಸ್ಥಾನಗಳನ್ನು ಗಳಿಸಿದ್ದಾರೆ. ಹರ್ಮನ್‌ಪ್ರೀತ್ ಕೌರ್ 13ನೇ ಸ್ಥಾನದಲ್ಲಿದ್ದಾರೆ.

ಭಾರತ ವಿರುದ್ಧ ಸರಣಿಯ ಎರಡನೇ ಪಂದ್ಯದಲ್ಲಿ ಮಿಂಚಿನ ಶತಕ ಬಾರಿಸಿದ್ದ ವೆಸ್ಟ್ ಇಂಡೀಸ್‌ನ ಹೇಯಲಿ ಮ್ಯಾಥ್ಯೂಸ್ ಆರು ಸ್ಥಾನ ಮೇಲೇರಿ ಏಳನೇ ಸ್ಥಾನದಲ್ಲಿದ್ದಾರೆ.

ಸಂತೋಷ್ ಟ್ರೋಫಿ: ಪಶ್ಚಿಮ ಬಂಗಾಳಕ್ಕೆ ಕಿರೀಟ

ಹೈದರಾಬಾದ್ (ಪಿಟಿಐ): ಇಂಜುರಿ ಅವಧಿಯಲ್ಲಿ ಗಳಿಸಿದ ಗೋಲಿನ ನೆರವಿನಿಂದ ಪಶ್ಚಿಮ ಬಂಗಾಳ ತಂಡವು ಸಂತೋಷ್ ಟ್ರೋಫಿಗಾಗಿ ನಡೆದ 78ನೇ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ 1-0ಯಿಂದ ಕೇರಳವನ್ನು ಮಣಿಸಿ ದಾಖಲೆಯ 33ನೇ ಬಾರಿ ಕಿರೀಟ ಮುಡಿಗೇರಿಸಿಕೊಂಡಿತು.

ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ರೋಚಕ ಹಣಾಹಣಿಯಲ್ಲಿ 90 + 4ನೇ ನಿಮಿಷದಲ್ಲಿ ಬಂಗಾಳದ ರಾಬಿ ಹನ್ಸ್ಡಾ ಅಮೋಘ ರೀತಿಯಲ್ಲಿ ಚೆಂಡನ್ನು ಗುರಿ ಸೇರಿಸಿದರು. ಈ ಮೂಲಕ ಆರು ವರ್ಷಗಳ ಬಳಿಕ ಮತ್ತೆ ಪಶ್ಚಿಮ ಬಂಗಾಳ ಚಾಂಪಿಯನ್ ಆಯಿತು.

ಕರಿನೆರಳಿನಲ್ಲಿ ಕೊಹ್ಲಿ, ರೋಹಿತ್?

ಒಂದನೇ ಪುಟದಿಂದ...

ಆಫ್ ಸ್ಟಂಪ್ ಆಚೆ ಹೋಗುವ ಎಸೆತ ಆಡುವ ಪ್ರಲೋಭನೆಯಿಂದ ಹೊರಬರಲು ಕೊಹ್ಲಿ ಅವರಿಗೆ ಕಷ್ಟವಾಗುತ್ತಿದೆ. ಇದು ಅವರ ಅಭಿಮಾನಿಗಳನ್ನು ತಬ್ಬಿಬ್ಬುಗೊಳಿಸಿದೆ. ಹಿಂದಿಗಿಂತ ಈಗ ಈ ದೌರ್ಬಲ್ಯ ಅವರನ್ನು ಪದೇ ಪದೇ ಕಾಡುತ್ತಿದೆ. ಇದಕ್ಕೆ ಪರಿಹಾರವೂ ಕಾಣುತ್ತಿಲ್ಲ.

'ಕೆಲವು ವಿಷಯಗಳ ಕಡೆ ತಂಡವಾಗಿ ನಾವು ಗಮನಹರಿಸಬೇಕಾಗಿದೆ. ವೈಯಕ್ತಿಕವಾಗಿ ನನ್ನ ಆಟದ ಕಡೆಯೂ ಸಹ' ಎಂಬ ಮಾತನ್ನೂ ರೋಹಿತ್ ಹೇಳಿದ್ದಾರೆ.

ರೋಹಿತ್ ಹಾಲಿ ಸರಣಿಯ 5 ಇನಿಂಗ್ಸ್‌ಗಳಿಂದ 31 ರನ್ ಗಳಿಸಿದ್ದಾರೆ. ಇದು ಬೂಮ್ರಾ ಹಾಲಿ ಸರಣಿಯಲ್ಲಿ ಗಳಿಸಿದ ವಿಕೆಟ್‌ಗಳಿಂತ ಒಂದು ಹೆಚ್ಚು ಅಷ್ಟೇ. ಪರ್ತ್ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ಅಜೇಯ ಶತಕ ಬಾರಿಸಿದ್ದನ್ನು ಬಿಟ್ಟರೆ, ಉಳಿದ ಆರು ಇನಿಂಗ್ಸ್‌ಗಳಿಂದ ವಿರಾಟ್ ಕೊಹ್ಲಿ ಗಳಿಸಿದ್ದು 67 ರನ್‌ಗಳನ್ನಷ್ಟೇ. ಬೇರೆ ಆಟಗಾರ ಈ ರೀತಿ ವಿಫಲರಾಗಿದ್ದಲ್ಲಿ ಬೆಂಚ್‌ನಲ್ಲಿ ಕುಳಿತುಕೊಳ್ಳಬೇಕಾಗುತ್ತಿತ್ತು. ಆದರೆ ತಂಡ ಇವರಿಬ್ಬರನ್ನು ಅತಿಯಾಗಿ ಅವಲಂಬಿಸಿರುವ ಕಾರಣ ಕಠಿಣ ನಿರ್ಧಾರ ಕೈಗೊಳ್ಳಲು ವಿಳಂಬವಾಗುತ್ತಿದೆ. ಆದರೆ ತಂಡದ ಹಿತಾಸಕ್ತಿ ಜೊತೆ ಎಷ್ಟರವರೆಗೆ ರಾಜಿಯಾಗಬೇಕು ಎಂಬುದು ಪ್ರಶ್ನೆ.

ಭಾರತ ತನ್ನ ಮುಂದಿನ ಟೆಸ್ಟ್ ಸರಣಿಯನ್ನು ಜೂನ್‌ನಲ್ಲಿ ಇಂಗ್ಲೆಂಡ್‌ನಲ್ಲಿ ಆಡಲಿದೆ. ಭಾರತಲ್ಲಿ 10 ತಿಂಗಳು ಯಾವುದೇ ಟೆಸ್ಟ್ ಸರಣಿಯಿಲ್ಲ. ಹೀಗಾಗಿ ಹಾಲಿ ಸರಣಿಯ ಅಂತಿಮ ಟೆಸ್ಟ್‌ನಲ್ಲಿ ಇವರಿಬ್ಬರು ಮತ್ತೆ ವಿಫಲವಾದಲ್ಲಿ ಅದು ಆಯ್ಕೆಗಾರರು ಕಠಿಣ ನಿರ್ಧಾರಕ್ಕೆ ಕೈಗೊಳ್ಳಲು ಪ್ರೇರೇಪಿಸಬಹುದು. ಹೀಗಾಗಿ ಸಿಡ್ನಿಯ ಪಂದ್ಯ ಕೇವಲ ಟೆಸ್ಟ್ ಮಾತ್ರವಲ್ಲ, ಇವರಿಬ್ಬರ ಕ್ರಿಕೆಟ್ ಭವಿಷ್ಯವನ್ನು ನಿರ್ಧರಿಸುವ ಪಂದ್ಯ. ಅವರು ಮರಳಿ ಲಯಕ್ಕೆ ಬರುವರೇ ಇಲ್ಲವೇ ಗೌರವಯುತವಾಗಿ ವಿದಾಯ ಹೇಳುವರೇ ಎಂಬುದನ್ನು ಮುಂದಿನ ಪಂದ್ಯ ನಿರ್ಧರಿಸಬಹುದು.

ಅಸಭ್ಯ ಸಂಜ್ಞೆ: ಹೆಡ್ ಸ್ಪಷ್ಟನೆ

ಮೆಲ್ಬರ್ನ್ (ಪಿಟಿಐ): ಬಾಕ್ಸಿಂಗ್ ಡೇ ಟೆಸ್ಟ್‌ನ ಅಂತಿಮ ದಿನವಾದ ಸೋಮವಾರ ಭಾರತದ ಎರಡನೇ ಇನಿಂಗ್ಸ್‌ನಲ್ಲಿ ರಿಷಭ್ ಪಂತ್ ಅವರ ವಿಕೆಟ್ ಪಡೆದು 'ವಿಶೇಷ ರೀತಿಯ' ಸಂಜ್ಞೆ ಮಾಡಿದ್ದ ಟ್ರಾವಿಸ್ ಹೆಡ್ ಅದನ್ನು ಸಮರ್ಥಿಸಿಕೊಂಡಿದ್ದಾರೆ. ಅದು ಐಸ್ ಕಪ್‌ನಲ್ಲಿ ಮೇಲೆ ಬೆರಳು ಇಟ್ಟಿರುವುದನ್ನು (ಫಿಂಗರ್ ಆನ್ ದಿ ಐಸ್) ಸೂಚಿಸುತಿತ್ತು ಎಂದು ಹೇಳಿಕೊಂಡಿದ್ದಾರೆ.

ಹಿಂದೆ ಶ್ರೀಲಂಕಾ ವಿರುದ್ಧ ಟೆಸ್ಟ್ ಪಂದ್ಯದ ವೇಳೆಯೂ ಹೆಡ್ ಇದೇ ರೀತಿಯ ಸಂಜ್ಞೆ ಮಾಡಿದ್ದರು. ಇದು ಅಸಭ್ಯ ರೀತಿಯಲ್ಲಿದೆ ಎಂದು ಟೀಕೆಗಳು ಕೇಳಿಬಂದಿವೆ. ಅವರು ಮಾಡಿದ ಸಂಜ್ಞೆಯ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಪಂತ್ ಮತ್ತು ಜೈಸ್ವಾಲ್ ಸೇರಿ ಭಾರತ ತಂಡವನ್ನು ಸೋಲಿನಿಂದ ಪಾರು ಮಾಡುವಂತೆ ಕಂಡಾಗ ಹೆಡ್, ಪಂತ್ ವಿಕೆಟ್ ಪಡೆದು ಸಂಭ್ರಮಿಸುವ ವೇಳೆ ಅಶ್ಲೀಲ ರೀತಿ ಕಾಣುವ ಸಂಜ್ಞೆ ಪ್ರದರ್ಶಿಸಿದ್ದರು.

ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರಿಗೆ ಈ ಬಗ್ಗೆ ವರದಿಗಾರರು ಕೇಳಿದಾಗ ಅವರು ಹಾಸ್ಯದ ಧಾಟಿಯಲ್ಲಿ ಉತ್ತರಿಸಿದರು. 'ನಾನು ಅದನ್ನು ವಿವರಿಸುವೆ. ಆತನ ಬೆರಳು ಬಿಸಿಯಾಗಿತ್ತು. ಅದನ್ನು ಐಸ್ ಕಪ್‌ನೊಳಗೆ ಅದ್ದಿದ್ದ. ವಿಷಯ ಅಷ್ಟೇ' ಎಂದು ಮುಗುಳ್ನಕ್ಕರು.

ಅಸಭ್ಯ ರೀತಿ ವರ್ತಿಸಿದ ಹೆಡ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಭಾರತದ ಮಾಜಿ ಕ್ರಿಕೆಟಿಗ ನವಜೋತ್ ಸಿಂಗ್ ಸಿಧು ಒತ್ತಾಯಿಸಿದ್ದಾರೆ. ಅವರ ವರ್ತನೆ ಹೇಸಿಗೆ ಹುಟ್ಟಿಸುವಂತಿತ್ತು ಎಂದು ಸಿಧು ಎಕ್ಸ್‌ನಲ್ಲಿ ಬರೆದಿದ್ದಾರೆ.



ಎಫ್‌ಸಿ ರಿಯಲ್ ಬೆಂಗಳೂರು ತಂಡದ ಯುಹಾನ್ ಕೆ. ಕುರುವಿಲ್ಲಾ (ಎಡ) ಮತ್ತು ಎಂಇಜಿ ತಂಡದ ಪ್ರವೇಶ್ ಬಿಷ್ಟ್ (ಬಲ) ಚೆಂಡಿಗಾಗಿ ಪೈಪೋಟಿ ನಡೆಸಿದ ಕ್ಷಣ —ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಎಂಇಜಿ ತಂಡ ಜಯಭೇರಿ

ಬೆಂಗಳೂರು: ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಮಂಗಳವಾರ ಎಫ್‌ಸಿ ರಿಯಲ್ ಬೆಂಗಳೂರು ತಂಡವನ್ನು 1-0 ಗೋಲಿನಿಂದ ಮಣಿಸಿತು.

ಅಶೋಕನಗರದ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಂಇಜಿ ಪರ ಪ್ರವೇಶ್ ಬಿಷ್ಟ್ (47ನೇ ನಿಮಿಷ) ಗೆಲುವಿನ ಗೋಲು ದಾಖಲಿಸಿದರು.

ಕೊಡಗು ಎಫ್‌ಸಿ ತಂಡ 4-1 ಗೋಲುಗಳಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು. ಕೊಡಗು ಪರ ಟಿ. ಜೇಮ್ಸ್ (2ನೇ ಮತ್ತು 81ನೇ) ಎರಡು ಗೋಲು ಗಳಿಸಿದರೆ, ಶಶಾಂಕ್ ರಾಣಾ (47ನೇ) ಮತ್ತು ಆದಿತ್ಯ ಪ್ರತಾಪ್ ಸಿಂಗ್ ರಾಥೋಡ್ (85ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಇಂಡಿಪೆಂಡೆಂಟ್ಸ್ ಪರ ಎ.ಅಜಯ್ (90ನೇ) ಗೋಲು ಗಳಿಸಿದರು.

2025 ಮುನ್ನೋಟ

ಮಹಿಳಾ ಏಕದಿನ ಕ್ರಿಕೆಟ್, ಕೊಕ್ಕೊ, ಚೆಸ್ ವಿಶ್ವಕಪ್

ಭಾರತ ಆತಿಥ್ಯದಲ್ಲಿ ನಡೆಯಲಿರುವ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್, ಲಾರ್ಡ್ಸ್‌ನಲ್ಲಿ ಆಯೋಜನೆಗೊಳ್ಳಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್, ಪಾಕಿಸ್ತಾನ ಆತಿಥ್ಯದ ಐಸಿಸಿ ಚಾಂಪಿಯನ್ಸ್ ಟ್ರೋಫಿ, ನವದೆಹಲಿಯಲ್ಲಿ ನಡೆಯುವ ಚೊಚ್ಚಲ ಕೊಕ್ಕೊ ವಿಶ್ವಕಪ್, ಫಿಡೆ ಮಹಿಳೆಯರ ಚೆಸ್ ವಿಶ್ವಕಪ್ ಟೂರ್ನಿ ಈ ವರ್ಷ ನಡೆಯಲಿರುವ ಪ್ರಮುಖ ಕ್ರೀಡಾಕೂಟಗಳಲ್ಲಿ ಸೇರಿವೆ. 2025ರಲ್ಲಿ ನಡೆಯಲಿರುವ ಪ್ರಮುಖ ಕೂಟಗಳ ಪಟ್ಟಿ ಇಲ್ಲಿವೆ...



ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರು —ಪಿಟಿಐ ಚಿತ್ರ

- **ಮಹಿಳೆಯರ ಹಾಕಿ:** ಜ.12ರಿಂದ 26ರವರೆಗೆ ರಾಂಚಿಯಲ್ಲಿ ಹಾಕಿ ಇಂಡಿಯಾ ಲೀಗ್ ಟೂರ್ನಿ ಆಯೋಜನೆ.
- **ಆಸ್ಟ್ರೇಲಿಯಾ ಓಪನ್ ಟೆನಿಸ್:** ಆಸ್ಟ್ರೇಲಿಯಾದ ಮೆಲ್ಬರ್ನ್‌ನಲ್ಲಿ ಜ.12ರಿಂದ 16ರವರೆಗೆ ನಡೆಯಲಿದೆ.
- **ಕೊಕ್ಕೊ ವಿಶ್ವಕಪ್:** ನವದೆಹಲಿಯಲ್ಲಿ ಜ.13ರಿಂದ 19ರವರೆಗೆ ಚೊಚ್ಚಲ ಟೂರ್ನಿ.
- **ಇಂಡಿಯಾ ಓಪನ್ ಬ್ಯಾಡ್ಮಿಂಟನ್:** ಜ.14ರಿಂದ 19ರವರೆಗೆ ಟೂರ್ನಿಯು ನವದೆಹಲಿಯಲ್ಲಿ ನಡೆಯಲಿದೆ.
- **ಏಷ್ಯನ್ ಚಳಿಗಾಲದ ಕ್ರೀಡೆ:** ಫೆ.7ರಿಂದ 14ರವರೆಗೆ ಚೀನಾದ ಹೈಲಾಂಗ್ಜಿಯಾಂಗ್‌ನ ಹರ್ಬಿನ್‌ನಲ್ಲಿ ಕೂಟ ಆಯೋಜನೆ.
- **ಮಹಿಳೆಯರ ಪ್ರೊ ಹಾಕಿ:** ಫೆ.15ರಿಂದ 19ರವರೆಗೆ ಎಫ್‌ಐಎಚ್ ಹಾಕಿ ಪ್ರೊ ಲೀಗ್ ನಡೆಯಲಿದೆ.
- **ಪುರುಷರ ಹಾಕಿ:** ಫೆ.15ರಿಂದ 22ರವರೆಗೆ ಎಫ್‌ಐಎಚ್ ಹಾಕಿ ಪ್ರೊ ಲೀಗ್ ಆಯೋಜನೆ.
- **ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್:** ಪಾಕಿಸ್ತಾನದ ಆತಿಥ್ಯದಲ್ಲಿ ಫೆ.19ರಿಂದ ಮಾರ್ಚ್ 9ರವರೆಗೆ ಟೂರ್ನಿ ನಡೆಯಲಿದೆ. ಭಾರತದ ಪಂದ್ಯಗಳು ದುಬೈನಲ್ಲಿ ಆಯೋಜನೆ.
- **ಆಲ್ ಇಂಗ್ಲೆಂಡ್ ಓಪನ್:** ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ಮಾರ್ಚ್ 11ರಿಂದ 16ರವರೆಗೆ ಬ್ಯಾಡ್ಮಿಂಟನ್ ಟೂರ್ನಿ.
- **ಐಪಿಎಲ್ ಕ್ರಿಕೆಟ್:** ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 18ನೇ ಆವೃತ್ತಿ ಮಾರ್ಚ್ 14ರಿಂದ ಆರಂಭಗೊಂಡು ಮೇ 25ರವರೆಗೆ ನಡೆಯಲಿದೆ.
- **ಪುರುಷರ ಹಾಕಿ:** ಏ.4ರಿಂದ 15ರವರೆಗೆ 15ನೇ ಹಾಕಿ ಇಂಡಿಯಾ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಯಲಿದೆ.
- **ಸ್ನೂಕರ್ ಚಾಂಪಿಯನ್‌ಷಿಪ್:** ಇಂಗ್ಲೆಂಡ್‌ನಲ್ಲಿ ಏ.19ರಿಂದ ಮೇ 5ರವರೆಗೆ ವಿಶ್ವ ಸ್ನೂಕರ್ ಚಾಂಪಿಯನ್‌ಷಿಪ್ ನಡೆಯಲಿದೆ.
- **ವಿಶ್ವ ಅಥ್ಲೆಟಿಕ್ಸ್ ರಿಲೆ:** ಪುರುಷರ, ಮಹಿಳೆಯರ ಮತ್ತು ಮಿಶ್ರ ವಿಶ್ವ ಅಥ್ಲೆಟಿಕ್ಸ್ ರಿಲೆ ಮೇ 10 ಮತ್ತು 11ರಂದು ಚೀನಾದಲ್ಲಿ ಆಯೋಜನೆ.
- **ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್:** ಕತಾರ್‌ನ ದೋಹಾದಲ್ಲಿ ಮೇ 17ರಿಂದ 25ರವರೆಗೆ ನಡೆಯಲಿದೆ.
- **ಫ್ರೆಂಚ್ ಓಪನ್ ಟೆನಿಸ್:** ಪ್ಯಾರಿಸ್‌ನ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಮೇ 25ರಿಂದ ಜೂನ್ 7ರವರೆಗೆ ನಡೆಯಲಿದೆ.
- **ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್:** ದಕ್ಷಿಣ ಕೊರಿಯಾದಲ್ಲಿ ಮೇ 27ರಿಂದ 31ರವರೆಗೆ ಕ್ರೀಡಾಕೂಟ ಆಯೋಜನೆ.
- **ಫಿಫಾ ಕ್ಲಬ್ ವಿಶ್ವಕಪ್ ಫುಟ್‌ಬಾಲ್:** ಅಮೆರಿಕದ ಆತಿಥ್ಯದಲ್ಲಿ ಜೂನ್ 14ರಿಂದ ಜುಲೈ 13ರವರೆಗೆ ಟೂರ್ನಿ ನಡೆಯಲಿದೆ.
- **ವಿಂಬಲ್ಡನ್ ಟೆನಿಸ್:** ಆಲ್ ಇಂಗ್ಲೆಂಡ್ ಟೆನಿಸ್ ಕ್ಲಬ್‌ನಲ್ಲಿ ಜೂನ್ 30ರಿಂದ ಜುಲೈ 13ರವರೆಗೆ ಟೂರ್ನಿ.
- **ಫಿಡೆ ಮಹಿಳೆಯರ ಚೆಸ್ ವಿಶ್ವಕಪ್:** ಜಾರ್ಜಿಯಾದಲ್ಲಿ ಜುಲೈ 5ರಿಂದ 29ರವರೆಗೆ ಟೂರ್ನಿ ನಡೆಯಲಿದೆ
- **ವಿಶ್ವ ಈಜು ಚಾಂಪಿಯನ್‌ಷಿಪ್:** ಸಿಂಗಪುರದ ಆತಿಥ್ಯದಲ್ಲಿ ವಿಶ್ವ ಈಜು ಕೂಟ ಜುಲೈ 11ರಿಂದ ಆ.3ರವರೆಗೆ ನಡೆಯಲಿದೆ.
- **ಮಹಿಳಾ ಕ್ರಿಕೆಟ್ ವಿಶ್ವಕಪ್:** ಭಾರತದ ಆತಿಥ್ಯದಲ್ಲಿ ಆ.15ರಿಂದ ಸೆಪ್ಟೆಂಬರ್ 15ರವರೆಗೆ ಏಕದಿನ ಟೂರ್ನಿ ಆಯೋಜನೆ.
- **ಅಮೆರಿಕ ಓಪನ್ ಟೆನಿಸ್:** ಅಮೆರಿಕದ ಪೆನ್ಸಿಲ್ವೇನಿಯಾದಲ್ಲಿ ಆ.25ರಿಂದ ಸೆ.7ರವರೆಗೆ ಟೂರ್ನಿ ನಡೆಯಲಿದೆ
- **ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್:** ಪ್ಯಾರಿಸ್‌ನಲ್ಲಿ ಆ.25ರಿಂದ 31ರವರೆಗೆ ಆಯೋಜನೆ.
- **ಡೈಮಂಡ್ ಲೀಗ್ ಫೈನಲ್:** ಜ್ಯೂರಿಚ್‌ನಲ್ಲಿ ಆ.27 ಮತ್ತು 28ರಂದು ಫೈನಲ್ ಸ್ಪರ್ಧೆ.
- **ವಿಶ್ವ ಆರ್ಚರಿ ಚಾಂಪಿಯನ್‌ಷಿಪ್:** ಸೆ.5ರಿಂದ 15ರವರೆಗೆ ದಕ್ಷಿಣ ಕೊರಿಯಾದಲ್ಲಿ ಟೂರ್ನಿ ಆಯೋಜನೆ.
- **ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್:** ಟೋಕಿಯೊದಲ್ಲಿ ಸೆ.13ರಿಂದ 21ರವರೆಗೆ ಕೂಟ ನಡೆಯಲಿದೆ.
- **ವಿಶ್ವ ಕುಸ್ತಿ ಚಾಂಪಿಯನ್‌ಷಿಪ್:** ಕ್ರೊವೇಷ್ಯಾದಲ್ಲಿ ಸೆ.13ರಿಂದ 21ರವರೆಗೆ ಕೂಟ ನಡೆಯಲಿದೆ.
- **ಫಿಫಾ ಯೂತ್ ವಿಶ್ವಕಪ್:** ಸೆ.27ರಿಂದ ಅ.19ರವರೆಗೆ ಐದು ರಾಷ್ಟ್ರಗಳ ಆತಿಥ್ಯದಲ್ಲಿ 20 ವರ್ಷದೊಳಗಿನವರ ವಿಶ್ವಕಪ್ ಫುಟ್‌ಬಾಲ್ ಟೂರ್ನಿ ನಡೆಯಲಿದೆ.
- **ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್:** ನಾರ್ವೆಯ ಆತಿಥ್ಯದಲ್ಲಿ ಅ.1ರಿಂದ 10ರವರೆಗೆ ಟೂರ್ನಿ ಆಯೋಜನೆ.
- **ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್:** ಅ.13ರಿಂದ 19ರವರೆಗೆ ಭಾರತದ ಆತಿಥ್ಯದಲ್ಲಿ ಗುವಾಹಟಿಯಲ್ಲಿ ಟೂರ್ನಿ ನಡೆಯಲಿದೆ.
- **ವಿಶ್ವ ಬಾಕ್ಸಿಂಗ್ ಕಪ್ ಫೈನಲ್:** ಭಾರತದ ಆತಿಥ್ಯದಲ್ಲಿ ನಡೆಯುವ ಟೂರ್ನಿ ನವೆಂಬರ್‌ನಲ್ಲಿ ನಡೆಯಲಿದೆ. (ವೇಳಾಪಟ್ಟಿ ನಿಗದಿಯಾಗಿಲ್ಲ)
- **ವಿಶ್ವ ಶೂಟಿಂಗ್:** ಕೈರೊದಲ್ಲಿ ನ.6ರಿಂದ 16ರವರೆಗೆ ವಿಶ್ವ ರೈಫಲ್ ಮತ್ತು ಪಿಸ್ತೂಲ್ ಚಾಂಪಿಯನ್‌ಷಿಪ್ ನಡೆಯಲಿದೆ.
- **ಪುರುಷರ ಹಾಕಿ ಜೂನಿಯರ್ ವಿಶ್ವಕಪ್:** ಭಾರತದ ಆತಿಥ್ಯದಲ್ಲಿ ಟೂರ್ನಿ ನಡೆಯಲಿದೆ. (ವೇಳಾಪಟ್ಟಿ ಅಂತಿಮಗೊಂಡಿಲ್ಲ)
- **ಬಿಡಬ್ಲ್ಯುಎಫ್ ವಿಶ್ವ ಟೂರ್ ಬ್ಯಾಡ್ಮಿಂಟನ್:** ಚೀನಾದಲ್ಲಿ ಡಿ.10ರಿಂದ 14ರವರೆಗೆ ಟೂರ್ನಿ ಆಯೋಜನೆಗೊಂಡಿದೆ.

ಉತ್ತಪ್ಪ ವಿರುದ್ಧ ವಾರಂಟ್‌ಗೆ ತಡೆ

ಪ್ರಜಾವಾಣಿ ವಾರ್ತೆ



ರಾಬಿನ್ ಉತ್ತಪ್ಪ

ಬೆಂಗಳೂರು: 'ಸಹ ಪಾಲುದಾರರಾಗಿರುವ ಕಂಪನಿಯಲ್ಲಿನ ಉದ್ಯೋಗಿಗಳಿಗೆ, ಉದ್ಯೋಗ ಭವಿಷ್ಯ ನಿಧಿ (ಇಪಿಎಫ್) ಹಣ ಪಾವತಿ ಮಾಡದೆ ವಂಚಿಸಿದ್ದಾರೆ' ಎಂಬ ಆರೋಪದಡಿ ಭಾರತದ ಮಾಜಿ ಕ್ರಿಕೆಟಿಗ ರಾಬಿನ್ ಉತ್ತಪ್ಪ ಐಯುಡ ವಿರುದ್ಧ ಹೊರಡಿಸಲಾಗಿದ್ದ ವಾರಂಟ್‌ಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ಹೊರಡಿಸಿರುವ ವಸೂಲಿ ನೋಟಿಸ್ ಮತ್ತು ಬಂಧನದ ವಾರಂಟ್ ಪ್ರಶ್ನಿಸಿ ರಾಬಿನ್ ಉತ್ತಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಬಿನ್ ಉತ್ತಪ್ಪ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, 'ರಾಬಿನ್ ಉತ್ತಪ್ಪ ಅವರು, ಸೆಂಟಾರಸ್ ಲೈಫ್ ಸ್ಟೈಲ್ ಬ್ರ್ಯಾಂಡ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸಹ ಪಾಲುದಾರರಾಗಿದ್ದರು. ಆದರೆ, 2020ರಲ್ಲಿಯೇ ಅವರು ತಮ್ಮ ಪಾಲುದಾರ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಆದ್ದರಿಂದ, ಅವರನ್ನು ಪ್ರಕರಣದಲ್ಲಿ ಭಾಗಿಯನ್ನಾಗಿ ಮಾಡಲು ಅವಕಾಶವಿಲ್ಲ. ಹೀಗಾಗಿ, ಅವರ ವಿರುದ್ಧದ ವಸೂಲಿ ನೋಟಿಸ್ ಮತ್ತು ಪುಲಕೇಶಿ ನಗರ ಪೊಲೀಸರು ಹೊರಡಿಸಿರುವ ಬಂಧನದ ವಾರಂಟ್ ಕಾನೂನು ಬಾಹಿರವಾಗಿದ್ದು ಅದನ್ನು ರದ್ದುಪಡಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಾರಂಟ್‌ಗೆ ತಡೆ ಆದೇಶ ನೀಡಿತಲ್ಲದೆ, ಪ್ರತಿವಾದಿಗಳಾದ ಕೇಂದ್ರ ಕಾರ್ಮಿಕ ಸಚಿವಾಲಯದ ಕಾರ್ಯ ದರ್ಶಿ, ನವದೆಹಲಿಯಲ್ಲಿನ ಸಹಾಯಕ ಭವಿಷ್ಯ ನಿಧಿ ಆಯುಕ್ತರು ಮತ್ತು ವಸೂಲಿ ಅಧಿಕಾರಿ, ಬೆಂಗಳೂರಿನ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ಮತ್ತು ವಸೂಲಿ ಅಧಿಕಾರಿ ಸೇರಿದಂತೆ ಒಟ್ಟು ಆರು ಜನರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿದೆ.

ಪ್ರಕರಣವೇನು?: ಮೆಸರ್ಸ್ ಸೆಂಟಾರಸ್ ಲೈಫ್ ಸ್ಟೈಲ್ ಬ್ರ್ಯಾಂಡ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ರಾಬಿನ್ ಉತ್ತಪ್ಪ ₹12 ಕೋಟಿ ಹೂಡಿಕೆ ಮಾಡುವ ಮೂಲಕ ಪಾಲುದಾರರಾಗಿದ್ದರು. ಆದರೆ, ಕಂಪನಿ ನಷ್ಟಕ್ಕೆ ಸಿಲುಕಿದೆ ಎಂಬ ಕಾರಣಕ್ಕೆ ಕಂಪನಿಯ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಏತನ್ಮಧ್ಯೆ, ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ನೌಕರರು, 'ನಮ್ಮ ಸಂಬಳದಲ್ಲಿ ಇಪಿಎಫ್ ಹಣವನ್ನು ಕಡಿತಗೊಳಿಸಲಾಗಿದೆ ಆದರೆ, ಇಪಿಎಫ್ ಹಣವನ್ನು ಪಾವತಿ ಮಾಡಿಲ್ಲ. ಹಣವನ್ನು ಉದ್ಯೋಗಿಗಳ ಖಾತೆಗೆ ಹಾಕದೇ ಒಟ್ಟು ₹ 23 ಲಕ್ಷ ವಂಚಿಸಲಾಗಿದೆ' ಎಂದು ಆರೋಪಿಸಿದ್ದರು. ಈ ದೂರಿಗೆ ಸಂಬಂಧಿಸಿದಂತೆ ಇಪಿಎಫ್ ಪ್ರಾದೇಶಿಕ ಆಯುಕ್ತರು ಕೋರಿದ್ದ ಕ್ರಮದ ಅನುಸಾರ ಬಂಧನದ ವಾರಂಟ್ ಹೊರಡಿಲಾಗಿತ್ತು.

ಶೂಟಿಂಗ್: ಅನನ್ಯಾಗೆ ಚಿನ್ನ

ಭೋಪಾಲ್ (ಪಿಟಿಐ): ಮಹಾರಾಷ್ಟ್ರದ ಉದಯೋನ್ಮುಖ ಶೂಟರ್ ಅನನ್ಯಾ ನಾಯ್ಡು ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದಾರೆ.

ಅನನ್ಯಾ (252.5 ಅಂಕ) ಮಂಗಳವಾರ ನಡೆದ ಫೈನಲ್‌ನಲ್ಲಿ ರೈಲ್ವೇಸ್‌ನ ಅನುಭವಿ ಶೂಟರ್ ಮೇಘನಾ ಸಜ್ಜನಾರ್ ಅವರನ್ನು ಕೇವಲ 0.2 ಪಾಯಿಂಟ್‌ಗಳಿಂದ ಸೋಲಿಸಿ, ತಮ್ಮ ಚೊಚ್ಚಲ ಸೀನಿಯರ್ ರಾಷ್ಟ್ರೀಯ ಪ್ರಶಸ್ತಿ ಗೆದ್ದರು.

ತಮಿಳುನಾಡಿನ ಆರ್. ನರ್ಮದಾ ನಿತಿನ್ (231.3) ಗಳಿಸಿ ಕಂಚು ಜಯಿಸಿದರು.

PARISHRAMA EDUCATIONAL CHARITABLE TRUST (R)

ಪರಿಶ್ರಮ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್ (ರಿ)

PARISHRAMA PU COLLEGE

ಪರಿಶ್ರಮ ಪಿಯು ಕಾಲೇಜು

Recg. by Dept. of PU Education, GoK | College Code: AS1057

2025ರ ಹೊಸ ವರ್ಷದ ಶುಭಾಶಯಗಳು

JANUARY ಜನವರಿ

S	M	T	W	T	F	S
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30	31	

FEBRUARY ಫೆಬ್ರವರಿ

S	M	T	W	T	F	S
						1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	

MARCH ಮಾರ್ಚ್

S	M	T	W	T	F	S
30	31					1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29

APRIL ಏಪ್ರಿಲ್

S	M	T	W	T	F	S
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30			

MAY ಮೇ

S	M	T	W	T	F	S
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29	30	31

JUNE ಜೂನ್

S	M	T	W	T	F	S
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30					

Holidays List

January
01 New Year
14 Makara Sankranti
26 Republic Day

February
26 Maha Shivaratri

April
14 Dr. Ambedkar Jayanthi
18 Good Friday
20 Easter

March
30 Ugadi
31 Eid-ul-Fitr

May
01 Labour Day

June
07 Bakrid



PARISHRAMA Prathibha Scholarship

For SSLC Students

"YOU SCORE, WE ASSURE"

Here's an Incredible Opportunity for **SSLC Students** to Secure a **100% Scholarship** for World-Class Education & Coaching at Parishrama PU College, Bengaluru

ELIGIBILITY CRITERIA

To Qualify, Students Must: Achieve a Perfect Score of **625/625** in the SSLC Examination 2025 Or be Recognized as **The State Topper Or District Topper** in the **SSLC Examination 2025.**

Completely Free Education if you meet the Criteria.

ನಿಮ್ಮ ಮುಂದಿನ ಪಯಣ ನಮ್ಮೊಂದಿಗೆ ಪ್ರಾರಂಭಿಸಿ



ADMISSIONS OPEN FOR 2025-26 (PCMB, PCMCs)

JULY ಜುಲೈ

S	M	T	W	T	F	S
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30	31		

AUGUST ಆಗಸ್ಟ್

S	M	T	W	T	F	S
31					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	30

SEPTEMBER ಸೆಪ್ಟೆಂಬರ್

S	M	T	W	T	F	S
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30				

OCTOBER ಅಕ್ಟೋಬರ್

S	M	T	W	T	F	S
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30	31	

NOVEMBER ನವೆಂಬರ್

S	M	T	W	T	F	S
30						1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29

DECEMBER ಡಿಸೆಂಬರ್

S	M	T	W	T	F	S
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30	31			

Holidays List

August
08 Varamahalakshmi
15 Independence Day
27 Ganesh Chaturthi

September
05 Eid-e-Milad
05 Onam
05 Teachers Day

October
01 Ayudha Pooje
02 Vijaya Dashami
02 Gandhi Jayanthi
20 Naraka Chaturdashi
21 Balipadyami

November
01 Kannada Rajyothsava
14 Children's Day

December
25 Christmas

080-24413400
7483830545

For more details visit:
www.parishramagroup.com

Scan for NEET Campus

Scan for PU College